
ಕಲ್ಯಾಣ ಕಿರಣ



ಆಗಸ್ಟ

1992

ಬೆಲೆ : 3-00 ರೂ.

ಕಲ್ಯಾಣ ಕಿರಣ

ಮಾಸ ಪತ್ರಿಕೆ, **ಬಿಡಿ ಸಂಚಿಕೆ 3-00 ರೂ.**

ಜುಲೈ, ಆಗಸ್ಟ್ - 1992

ಸಂಪುಟ : 21 ಸಂಚಿಕೆ : 2–3 ಬಸವ ಶಕೆ : 88

ವಾರ್ಷಿಕ ಚಂದಾ : 30 ರೂ. ಆಜೀವ ಸದಸ್ಯತ್ವ : 300 ರೂ

ಮುಖ ಪುಟ : ಆಗಸ್ಟ್–15, ಸ್ವಾತಂತ್ರ್ಯೋತ್ಸವ

ಹೊದ್ದಿಕೆಯ 4ನೇ ಪುಟ : 31-8-1992 ರಂದು 61 ವರ್ಷಗಳನ್ನು ಪೂರೈಸಿ 62 ಕ್ಕೆ ಪಾದಾರ್ಪಣ ಮಾಡಿದ ಪೂಜ್ಯ ಶ್ರೀ ಮಹಾ- ಜಗದ್ಗುರು ಲಿಂಗಾನಂದ ಸ್ವಾಮೀಜಿಯವರು

ಬೆಂಗಳೂರು ವಿಳಾಸ : ಕಲ್ಯಾಣ ಕಿರಣ ಮಾಸ ಪತ್ರಿಕೆ, ಬಸವ ಮಂಟಪ, 2035, 2ನೇ ಬ್ಲಾಕ್, 20 ನೇ ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು-10. ದೂರವಾಣಿ : 3253

ಕಲ್ಯಾಣ ಕಿರಣ

ಸಂಪುಟ : 21 ಸಂಚಿಕೆ : 2–3 ಬಸವ ಶಕೆ : 887 ಜುಲೈ–ಆಗಸ್ಟ್, 1992

ಹೋ ಹೋ, ಗುರುವೆ, ನಿಮ್ಮ ಕರಕರಮಲದಲ್ಲಿ ಉದಯಿಸಿ,
ಅಂಗದ ಮೇಲೆ ಲಿಂಗವ ಧರಿಸಿ, ಲಿಂಗದಲ್ಲಿ ಆಗಾಗಿ,
ಪ್ರಾಣ ಲಿಂಗ, ಲಿಂಗ ಪ್ರಾಣ ಎಂಬುದ ನಾನು ಕಂಡೆನು.
ನಿಮಗಾನು ತೋಱಲು ಸಮರ್ಥನೆ ?

ಆಚಾರ ಅಂಗದ ಮೇಲೆ ನೆಲೆಗೊಂಡು, ಇಷ್ಟಲಿಂಗದಲ್ಲಿ ದೃಷ್ಟಿ ನಟ್ಟು,
ಭಾವಸಂಪನ್ನವಾಗಿಪ್ಪ ನಿಮ್ಮ ಘನವ ನಾನೆತ್ತ ಬಲ್ಲೆನಯ್ಯಾ !

ಅನುಭಾವ ಅಂತರಂಗದಲ್ಲಿ ಎಡೆಗೊಂಡು, ಪ್ರಾಣ ಲಿಂಗದಲ್ಲಿ ನಿಕ್ಷೇಪವಾಗಿ,
ನಿಜ ಲಿಂಗೈಕ್ಯನಾಗಿಪ್ಪ ನಿಮ್ಮ ಘನವ ನಾನೆತ್ತ ಬಲ್ಲೆನಯ್ಯಾ !

ಜ್ಞಾನಸಮಾಧಿಯೊಳಗೆ ಬಯಕೆಯಡಗಿ,
ಪರಿಣಾಮಲಿಂಗದಲ್ಲಿ ಮನಸ್ಸು ಲಯವಾಗಿ,
ನಿಜಲಿಂಗ ತೃಪ್ತರಾಗಿಪ್ಪಿರಿ ನೀವು ;
ನಿಮ್ಮ ಘನವ ನಾನೆತ್ತ ಬಲ್ಲೆನು !

ಅಂಗದ ಮೇಲೆ ಲಿಂಗವುಳ್ಳುದೆಲ್ಲವು ಸಂಗಮನಾಥನೆಂಬಲ್ಲಿ
ಜಂಗಮಲಿಂಗ ಪ್ರಾಣಿಯಾಗಿಪ್ಪಿರಿ ನೀವು ;
ನಿಮ್ಮ ಘನವ ನಾನೆತ್ತ ಬಲ್ಲೆನು !

ಲಿಂಗಕ್ಕೆ ಬಂದ ಪದಾರ್ಥವನಲ್ಲದೆ ಕೊಳ್ಳೆವೆಂದು
ಮನ ಮೀಸಲು, ತನು ಮೀಸಲು ಮಾಡಿ,
ಸರ್ವಾಂಗಸುಖವೆಲ್ಲವನು ಪ್ರಾಣಲಿಂಗದಲ್ಲಿ ಅರ್ಪಿಸಿ
ನಿರಾಭಾರಿಯಾಗಿ ಪ್ರಸಾದಲಿಂಗಪ್ರಾಣಿಯಾಗಿಪ್ಪಿರಿ ನೀವು ;
ನಿಮ್ಮ ಘನವ ನಾನೆತ್ತ ಬಲ್ಲೆನು !

ಅನಾದಿ ಶಿವಂಗೆ ಆಧಾರವಿಲ್ಲೆಂದು
ಅಖಂಡಿತನ ನಿಮ್ಮ ರೋಮದ ಕೊನೆಯಲ್ಲಿ ಧರಿಸಿ:
ಮಹಾಲಿಂಗಪ್ರಾಣಿಯಾಗಿಪ್ಪಿರಿ ನೀವು ;
ನಿಮ್ಮ ಘನವ ನಾನೆತ್ತ ಬಲ್ಲೆನು !

ಕೂಡಲಚನ್ನಸಂಗಮದೇವ ಸಾಕ್ಷಿಯಾಗಿ
ನಿಮ್ಮ ಪ್ರಾಣಲಿಂಗಸಂಬಂಧದ ಸೆಜಿಗು ಸೋಂಕಿನ
ಒಕ್ಕುಮಿಕ್ಕ ಪ್ರಸಾದಿ ನಾನು, ಕಾಣಾ ಸಂಗನಬಸವಣ್ಣಾ,

—ಚನ್ನಬಸವಣ್ಣ, 786

ಗುರುವಿನ ವರ್ಣನೆ

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಶ್ರೀ ಡಾ॥ ಚಿದಾನಂದ ಮೂರ್ತಿಯವರ ಒಂದು ಲೇಖನ ಉತ್ತರ ಕರ್ನಾಟಕ ಪತ್ರಿಕೆಯಲ್ಲಿ ಮುದ್ರಣಗೊಂಡಿದ್ದು, ಅದನ್ನು ಉಲ್ಲೇಖಿಸಿ, ಈಗಾಗಲೇ ಹಿಂದಿನ ಸಂಚಿಕೆಯಲ್ಲಿ ಬರೆದಿದ್ದೇನೆ. ಶ್ರೀಯುತರ ಲೇಖನವು ಪುಟ 30 ರಲ್ಲಿ ಮತ್ತು ನನ್ನ ಉತ್ತರ ಪುಟ 33 ರಲ್ಲಿಯೂ ಪ್ರಕಟವಾಗಿವೆ.

"ಬುದ್ಧ, ಮಹಮ್ಮದ್ ಪೈಗಂಬರರು ತಮ್ಮ ಧರ್ಮಗಳನ್ನೇ ಸ್ಥಾಪಿಸಿ ತಮ್ಮ ಶಿಷ್ಯರಿಗೆ ಬೋಧಿಸಿದಂತೆ ಬಸವಣ್ಣನವರು ಹೊಸದಾಗಿ ವೀರಶೈವ ಧರ್ಮ ಸ್ಥಾಪಿಸಿ ತಮ್ಮ "ಶಿಷ್ಯರಿಗೆ" ಬೋಧಿಸಿದ ವರ್ಣನೆ ಎಲ್ಲಿಯೂ ಬರುವದಿಲ್ಲ. ಮತಸ್ಥಾಪಕರು ಗುರುಗಳಾಗಿ ಉಳಿದವರೆಲ್ಲ ಅವರ ಶಿಷ್ಯರಾಗುತ್ತಾರೆ. ಬಸವಣ್ಣನವರ ವಿಷಯದಲ್ಲಿ ಹಾಗಾಗಿದೆಯೆ ?" ಈ ಭಾಗಕ್ಕೆ ಮಾತ್ರ ಪುನಃ ಉತ್ತರ ಕೊಡುತ್ತಲಿದ್ದೇನೆ.

ಚಿನ್ಮಯ ಜ್ಞಾನಿ ಚನ್ನಬಸವಣ್ಣ ಅಸಾಮಾನ್ಯ ಜ್ಞಾನಿ, ಧರ್ಮಪಿತ ಬಸವಣ್ಣನವರ ನೇರ ಶಿಷ್ಯ. ರಕ್ತ ಸಂಬಂಧವಿರುವಲ್ಲಿ ಅನುಗ್ರಹದ ಪ್ರಸಂಗಬೇಡ ಎಂದು ಧರ್ಮಪಿತರು ಹಿಂಜರಿದರೂ ಹಠದಿಂದ ಅವರ ಕಡೆಯಿಂದಲೇ ಅನುಗ್ರಹ ಪಡೆದ ಮಹಿಮ. ಕಾಮಧೇನು ಇರುವಾಗ ನಾಡಹಸುವನ್ನು ಆಶ್ರಯಿಸುವ ಮೂರ್ಖರಾಗಲಿಚ್ಛಿಸುವರೆ? ಆ ದಿವ್ಯ ಪುರುಷನಿಂದಲೇ ಅನುಗ್ರಹ ಪಡೆದಿದ್ದಾರೆ. ಈ ವಚನದ ಭಾವ ನೋಡೋಣ.

ಯಾವುದೋ ಸನ್ನಿವೇಶದಲ್ಲಿ ಧರ್ಮಪಿತರು ಚನ್ನಬಸವಣ್ಣನವರನ್ನು ಹೊಗಳಿರಬೇಕು. "ವಯಸ್ಸು ಕಿರಿದಾದರೂ ಜ್ಞಾನದಲ್ಲಿ ಹಿರಿಯ. ನನಗೇ ಎಷ್ಟೋ ಸಂಗತಿಗಳನ್ನು ಕಲಿಸಿಕೊಟ್ಟಿರುವನು." ಎಂದು ಕೊಂಡಾಡಿರಬಹುದು. ಆಗ ಚನ್ನಬಸವಣ್ಣ ಸಂಕೋಚಗೊಂಡು ಹೇಳುವನು.

"ಗುರುವೇ, ಎಂಥಾ ಮಾತಿದು ; ನಿಮ್ಮ ಕರಕಮಲದಲ್ಲಿ ಹುಟ್ಟಿದ ಶಿಶುವಾಗಿ, ಅಂಗದ ಮೇಲೆ ಲಿಂಗವ ಧರಿಸಿಕೊಂಡೆ ; ಲಿಂಗಜ್ಞಾನ ಪಡೆದುಕೊಂಡೆ. ಲಿಂಗವೇ ಪ್ರಾಣವಾಗಬೇಕು, ಪ್ರಾಣವೇ ಲಿಂಗವಾಗಬೇಕು ಎಂಬುದನ್ನೂ ಅರಿತುಕೊಂಡೆ. ಹೀಗಿರುವಾಗ ನಿಮಗೆ ನಾನು ಕಲಿಸುವುದೇನನ್ನು ? ನಿಮ್ಮ ವ್ಯಕ್ತಿತ್ವವನ್ನು ತಿಳಿಯಲಿಕ್ಕಾದರೂ ನನಗೆ ಸಾಧ್ಯವೆ ? ನಿಮ್ಮ ವ್ಯಕ್ತಿತ್ವ ಸಾಮಾನ್ಯವಾದುದಲ್ಲ, ಅಂಗದಲ್ಲಿ ಆಚಾರವನ್ನು ಅಳವಡಿಸಿಕೊಂಡಿರಿ, ಇಷ್ಟಲಿಂಗದಲ್ಲಿ ದೃಷ್ಟಿಯನ್ನು ನಿಲ್ಲಿಸಿ, ಭಾವ ಶ್ರೀಮಂತಿಕೆಯಿಂದ ಕಂಗೊಳಿಸುತ್ತಿರುವಿರಿ. ನಿಮ್ಮ ವ್ಯಕ್ತಿತ್ವವನ್ನಾದರೂ, ತಿಳಿಯಲಿಕ್ಕೆ ನನಗೆ ಸಾಧ್ಯವೇ ?

ಬಹಿರಂಗದಲ್ಲಿ ಯಾಂತ್ರಿಕವಾಗಿ ಲಿಂಗಧಾರಣೆ ಮಾಡಿಕೊಂಡಿರುವುದು ಮಹತ್ವವಲ್ಲ; ಅಂತರಂಗದಲ್ಲಿ ಅನುಭಾವವನ್ನು ಅಳವಡಿಸಿಕೊಂಡಿದ್ದೀರಿ. ನಿಮ್ಮ ಪ್ರಾಣವು ಪರಮಾತ್ಮನಲ್ಲಿ ನೆಲೆ ನಿಂತಿದೆ. ಭಾವವು ಅವನಲ್ಲಿ ತಾದಾತ್ಮ್ಯ ಹೊಂದಿದೆ.

ಜ್ಞಾನ ಸಮಾಧಿಯನ್ನು ಹೊಂದಿದ್ದೀರಿ ; ಭಾವ (ಮಹಾ) ಲಿಂಗದಲ್ಲಿ ಮನಸ್ಸು ಮುವಾಗಿದೆ. ನಿಜಲಿಂಗದಲ್ಲಿ ಮನ ನಿಂದು, ನಿಜ ತೃಪ್ತಿಯನ್ನು ಹೊಂದಿದ್ದೀರಿ.

(ನಿಮ್ಮ ಸ್ಥಿತಿ ಎಲ್ಲರಿಗೂ ಬರದು) ಅಂಗದ ಮೇಲೆ ಲಿಂಗವುಳ್ಳವರೆಲ್ಲರೂ ಸಂಗಮನಾಥ ಎಂಬ ಸಮತಾಭಾವ ಅಸಾಮಾನ್ಯವಾಗಿದೆ. ನೀವು ಜಂಗಮ ಪ್ರಾಣಿಯಾಗಿದ್ದೀರಿ. ಇಂತಿರುವ ನಿಮ್ಮ ನಿಲುವನ್ನು ನಾನೆತ್ತ ಬಲ್ಲೆನು ? ದೇವನಿಗೆ ಅರ್ಪಿತವಾಗದುದನ್ನು ಸ್ವೀಕರಿಸುವುದಿಲ್ಲ ಎಂದು ತನು, ಮನಗಳೆಲ್ಲವನ್ನು, ಸರ್ವಾಂಗ ಸುಖವನ್ನು ದೇವನಲ್ಲಿ ಅರ್ಪಿಸಿ, (ಸಂಸಾರದಲ್ಲಿದ್ದರೂ) ನಿರಾಭಾರಿಯಾಗಿ ಪ್ರಸಾದ ಪ್ರಾಣಿಯಾಗಿರುವಿರಿ.

ಸರ್ವವ್ಯಾಪಿಯೂ ಸರ್ವಶಕ್ತನೂ ಆದ ದೇವನು ಸೀಮೆ ಇಲ್ಲದವನೆಂದು, ನಿಮ್ಮಂಗದಲ್ಲೇ ಅವನನ್ನು ತುಂಬಿಕೊಂಡು ದೇವರನ್ನೇ ನಿಮ್ಮ ಪ್ರಾಣವಾಗಿ ಮಾಡಿಕೊಂಡಿದ್ದೀರಿ.

ಪರಮಾತ್ಮನ ಸಾಕ್ಷಿಯಾಗಿ ನಿಮ್ಮ ಅನುಗ್ರಹವನ್ನುಂಡ ಪ್ರಸಾದಿ ನಾನು.

ಹೀಗೆ ಚನ್ನಬಸವಣ್ಣನವರು ತಮ್ಮ ವಚನದಲ್ಲಿ ತಾವು ಧರ್ಮಪಿತ ಬಸವಣ್ಣನವರ ಶಿಷ್ಯರು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಸಿದ್ಧರಾಮೇಶ್ವರರು "ತಮ್ಮ ಗುರು ಚನ್ನಬಸವಣ್ಣ, ಅವರ ಗುರು ಬಸವಣ್ಣನವರು ತಮಗೆ ಪರಮಗುರು" ಎನ್ನುತ್ತಾರೆ.

ಬಸವಣ್ಣ ಬಸವಯ್ಯ ಬಸವಪ್ಪ ಬಸವರಸ
ಬಸವಲಿಂಗವೆ ಎನ್ನ ಬಸವ ತಂದೆ
ಬಸವ ಚರ ಪರ ತತ್ತ್ವಕಾದಿ ಮೂಲಿಗ ಲಿಂಗ
ಬಸವಪ್ಪ ಶರಣೆಂಬೆ ಯೋಗಿನಾಥ ॥

—ಬ. ಸ್ತೋ. ತ್ರಿ. ೧೧

ಅಂದು ಆದಿಯಲಾದ ಆನಂದ ಭಸಿತವನು
ತಂದೆನ್ನ ನೊಸಲಲ್ಲಿ ಪಟ್ಟಗಟ್ಟಿ
ತಂದೆ ಗುರು ಬಸವಣ್ಣ ಎನ್ನ ರಕ್ಷಿಸಲಾಗಿ
ಇಂದು ನಿಮ್ಮೊಳು ಬೆರೆದ ಯೋಗಿನಾಥ

—ಮಿ. ಸ್ತೋ. ತ್ರಿ. ೫

ಡೋಹರ ಕಕ್ಕಯ್ಯನವರು ಕನ್ನಡ ವಾಙ್ಮಯದಲ್ಲಿ ಆಗಿ ಹೋದ ಶರಣರು ಒಬ್ಬರೇ ಒಬ್ಬರು. ಇನ್ನೊಬ್ಬರಿಲ್ಲ. ಇವರ ಹೆಸರು ಜೇಡರ ದಾಸಿಮಯ್ಯನವರ ವಚನದಲ್ಲಿ ಪ್ರಸ್ತಾಪವಾಗಿದೆ.

ಕೀಳು **ಡೋಹರ ಕಕ್ಕ**, ಕೀಳು **ಮಾದರ ಚನ್ನ**
ಕೀಳು **ಓಹಿಲ ದೇವ**, ಕೀಳು **ಉದ್ಭಟಯ್ಯ**
ಕೀಳಿಂಗಲ್ಲದೆ ಹಯನ ಕರೆಯದು ಕಾಣಾ ರಾಮನಾಥ ॥

(ದೇ. ದಾ. ವ. ೧೨೬)

ಈ ವಚನವನ್ನು ಇಟ್ಟುಕೊಂಡು "ಜೇಡರ ದಾಸಿಮಯ್ಯನವರ ಸಮಕಾಲೀನರು ಕಕ್ಕಯ್ಯನವರು; ಕಕ್ಕಯ್ಯನವರು ಗುರು ಬಸವಣ್ಣನವರ ಕರಕಮಲ ಸಂಜಾತರು" ಎಂದು ಹೇಳುವುದು ಬಿಟ್ಟು ಡಾ॥ ಚಿದಾನಂದ ಮೂರ್ತಿಯವರಂಥವರ ವಿಚಿತ್ರ ಸಂಶೋಧನೆ ವಿತರ್ಕದ ಮಾತುಗಳನ್ನಾಡುತ್ತದೆ, "ಬಸವಣ್ಣನ ಹಿರಿಯ ಸಮಕಾಲೀನನಾಗಿದ್ದ ಜೇಡರ ದಾಸಿಮಯ್ಯ, ದಾಸಿಮಯ್ಯನ ಹಿರಿಯ ಸಮಕಾಲೀನರಾಗಿದ್ದ ಡೋಹರ ಕಕ್ಕಯ್ಯ, ಚನ್ನಯ್ಯ ಮತ್ತು ಕೊಂಡಗುಳಿ ಕೇಶಿರಾಜ, ಬಸವಣ್ಣನು ಅತ್ಯಂತ ಗೌರವದಿಂದ ಕಂಡ ಅಲ್ಲಮ ಪ್ರಭು ಇವರೆಲ್ಲ ಬಸವಣ್ಣನಿಂದ "ಸ್ಥಾಪಿತ"ವಾದ ವೀರಶೈವ ಧರ್ಮಕ್ಕೆ ಮತಾಂತರ ಹೊಂದಿದರು ಎಂದು ಕಲ್ಪಿಸಿಕೊಳ್ಳುವುದು ಕಷ್ಟವಾಗುತ್ತದೆ."

ಇಲ್ಲಿ ಮತಾಂತರದ ಪ್ರಶ್ನೆ ಬರದು; ಧರ್ಮಸ್ವೀಕಾರ ಮುಖ್ಯ. ಮಾದಾರ ಚನ್ನಯ್ಯ,ಡೋಹರ ಕಕ್ಕಯ್ಯ ಮುಂತಾದ ಅಸಂಖ್ಯಾತರಿಗೆ ಯಾವುದೊಂದೂ ಧರ್ಮವಿರಲಿಲ್ಲ; ಧರ್ಮ ಹೋಗಲಿ ಮುಟ್ಟುವ–ಮುಟ್ಟಿಸಿಕೊಳ್ಳುವ ಸಾಮಾಜಿಕ ಸಂಪರ್ಕ ಸಹ ಸಾಧ್ಯವಿರಲಿಲ್ಲ. ಬೌದ್ಧ-ಜೈನ ಧರ್ಮಗಳನ್ನು ಬಿಟ್ಟು ಇನ್ನಾರೂ ಶೂದ್ರರು, ಅಸ್ಪೃಶ್ಯರಿಗೆ ದೀಕ್ಷೆಯನ್ನು ಕೊಡುತ್ತಿರಲಿಲ್ಲ.ಧರ್ಮಗುರು ಬಸವಣ್ಣನವರು ಸಂಸ್ಕಾರದ ಬಾಗಿಲನ್ನು ತೆರೆದು ಅವಕಾಶ ಕೊಡುತ್ತಲೇ ಅವರ ಸಂಭ್ರಮ ಹೇಳತೀರದಷ್ಟು.

ಕಷ್ಟಕುಲದಲ್ಲಿ ಹುಟ್ಟಿದ ಕರ್ಮವ ಕಳೆದು
ಮುಟ್ಟಿ ಪಾವನವ ಮಾಡಿ ಕೊಟ್ಟನಯ್ಯ ಎನ್ನ ಕರಸ್ಥಲಕ್ಕೆ
ಲಿಂಗವ
ಆ ಲಿಂಗ ಬಂದು ಸೋಂಕಲೊಡನೆ, ಎನ್ನ ಸರ್ವಾಂಗದ
ಅವಲೋಹವಳಿಯಿತ್ತಯ್ಯಾ.
ಎನ್ನ ತನುವಿನಲ್ಲಿ ಗುರುವ ನೆಲೆಗೊಳಿಸಿದ
ಎನ್ನ ಮನದಲ್ಲಿ ಜಂಗಮವ ನೆಲೆಗೊಳಿಸಿದ
ಎನ್ನ ಅರಿವಿನಲ್ಲಿ ಪ್ರಸಾದವ ನೆಲೆಗೊಳಿಸಿದ

ಇಂತೀ ತ್ರಿವಿಧ ಸ್ಥಾನನ ಶುದ್ಧವ ಮಾಡಿದ
ಬಸವಣ್ಣನ ಕರುಣದಿಂದ ಪ್ರಭುವಿನ ಶ್ರೀಪಾದವ
ಕಂಡು ಬದುಕಿದೆನು ಕಾಣಾ ಅಭಿನವ ಮಲ್ಲಿಕಾರ್ಜುನಾ.

ಚನ್ನಂಜೇದೇವರ ಬಸವ ಸ್ತೋತ್ರ. ಪು. ೫೪

ದೀಕ್ಷಾ ಸಂಸ್ಕಾರ ಪಡೆದು, ಡೋಹರ ಕಕ್ಕಯ್ಯನವರು ಹೀಗೆ ಕೊಂಡಾಡುತ್ತಾರೆ.

ಶರಣ ಕಕ್ಕಯ್ಯನವರು ವಯಸ್ಸಿನಲ್ಲಿ ಬಸವಣ್ಣನವರಿಗಿಂತ ಹಿರಿಯರಾಗಿರಬಹುದು; ಆದರೆ ಸ್ವಸಂತೋಷದಿಂದ ಪರಮಭಾಗ್ಯವೆಂಬಂತೆ ಬಸವಣ್ಣನವರಿಂದ ಅವರ ಧರ್ಮವನ್ನು ಸ್ವೀಕರಿಸಿದ್ದಾರೆ. ಕಕ್ಕಯ್ಯನವರು ವಚನ ಸಾಹಿತ್ಯ ರಕ್ಷಣೆಗೆ ಹೊರಟ ತಂಡದಲ್ಲಿ ಪ್ರಮುಖರಾಗಿದ್ದರು. ಸ್ವತಃ ಹೋರಾಟದಲ್ಲಿ ಭಾಗಿಯಾಗಿದ್ದಾರೆ. ವಚನ ವಾಙ್ಮಯ ಮತ್ತು ಶರಣರು ಉಳಿವೆಯನ್ನು ಸೇರಿದ ನಂತರ ಅವರು ನೆಲೆಸಿದ ಸ್ಥಳ ಕಕ್ಕೇರಿ ಎಂದಾಗಿದೆ. ಅವರ ಸಮಾಧಿ ಇದೆ. ಅವರ ಧರ್ಮಪತ್ನಿ ಭಿಷ್ಟಾದೇವಿಯ ಗುಡಿ ಸಹಿತ ಕಕ್ಕೇರಿಯಲ್ಲಿದೆ. ಅವರು ಭಾವುಕ ಭಕ್ತರು ಮಾತ್ರವಲ್ಲದೆ ಧೀಮಂತ ಹೋರಾಟಗಾರರೂ ಆಗಿದ್ದರು ಎಂಬುದನ್ನು ಕಕ್ಕೇರಿಯಲ್ಲಿರುವ ಒಂದು ಶಾಸನ ಶ್ರುತಪಡಿಸುತ್ತದೆ.

ಅಲ್ಲಮ ಪ್ರಭುಗಳ ಪ್ರಸಂಗವನ್ನು ನೋಡೋಣ. ಅವರು ಜನಿಸಿದ್ದು ಶೂದ್ರ ವರ್ಗದಲ್ಲಿ ಬರುವ ನಟುವರ ಜಾತಿಯಲ್ಲಿ. ಅವರಿಗೆ ವೈರಾಗ್ಯದ ಪ್ರೇರಣೆ ಬಂದಿತು. (ಹರಿಹರ ಮತ್ತು ಚಾಮರಸರ ಪರಸ್ಪರ ವಿವರಣೆಗಳಲ್ಲಿ ವ್ಯತ್ಯಾಸವಿದೆ. ಈಗ ಇದನ್ನು ವಿಶ್ಲೇಷಿಸುವುದಿಲ್ಲ ; ಸಂದರ್ಭಕ್ಕೆ ಅಪ್ರಸ್ತುತ) ಬಳ್ಳಿಗಾವಿಯ ಹೊರವಲಯದಲ್ಲಿ ಸುತ್ತಾಡುವಾಗಲೇ ಗೊಗ್ಗಯ್ಯನ ತೋಟದಲ್ಲಿ (ಈಗಿನ ಅನಿಮಿಷಯ್ಯನ ಕೊಪ್ಪಳ) ಅನಿಮಿಷಯ್ಯನ ದರ್ಶನವಾಯಿತು. ಇಷ್ಟಲಿಂಗವನ್ನು ತಾವೇ ಪಡೆದುಕೊಂಡರು. ಆದರೆ ಅದರ ನೆಲೆಕಲೆ, ಅದನ್ನು ಯೋಗಕ್ಕೆ ಬಳಸುವ ಪರಿ ತಿಳಿದಿರಲಿಲ್ಲ. ಆದ್ದರಿಂದ ಇದರ ಮೂಲ ಯಾರು? ಮರ್ಮವನ್ನು ತಿಳಿಸುವ ವ್ಯಕ್ತಿ ಯಾರು ಎಂದು ಹುಡುಕುತ್ತ ಹೊರಟರು. ಇದು ನಾವು ಹೇಳುವ ಕಟ್ಟು ಕಥೆಯಲ್ಲ; ವಚನಗಳು ಅದೂ ಕರ್ನಾಟಕ ವಿಶ್ವವಿದ್ಯಾಲಯದವರು ಅಧಿಕೃತವಾಗಿ ಮುದ್ರಿಸಿರುವ ವಚನಗಳು ಒದಗಿಸುವ ದಾಖಲೆಗಳು, ಸರಿ, ಅನಿಮಿಷಯ್ಯನಿಗೆ ಇಷ್ಟಲಿಂಗವನ್ನು ಕೊಟ್ಟಿರುವ ಗುರು ಯಾರು ? ಸ್ವತಃ ಅದರ ಜನಕರಾದ ಬಸವಣ್ಣನವರು ! ಇದು ಕಲ್ಪನೆಯೇ, ಕಟ್ಟು ಕಥೆಯೇ ? ಇಲ್ಲ, ಒಂದೊಂದೇ ವಚನವನ್ನು ಲಕ್ಷ್ಯಗೊಟ್ಟು ಓದಿರಿ. ಡಾ॥ ಚಿದಾನಂದ ಮೂರ್ತಿಯವರಿಗೆ ವಿಶ್ವವಿದ್ಯಾಲಯದವರು ಪ್ರಕಟಿಸಿರುವ ವಚನಗಳ ಬಗ್ಗೆ ಸಂದೇಹವಿದ್ದರೆ ಅದನ್ನು ಪ್ರಶ್ನಿಸಲಿ ! ಏಕೆಂದರೆ ನಮ್ಮಂತಹವರು, ಅಧಿಕೃತವಾಗಿ ವಿಶ್ವವಿದ್ಯಾಲಯ

ದಿಂದ ವೇತನ ಪಡೆದ ವಿದ್ವಾಂಸರನ್ನು ಸಂಶೋಧಕರೆಂದು ನಂಬಿರುತ್ತೇವೆ. ಅವರು ಪ್ರಕಟಿಸುವ ಸಾಹಿತ್ಯದ ಆಧಾರದ ಮೇಲೆ ಸತ್ಯ ಚಿಂತನೆ ಮಾಡುತ್ತೇವೆ. ಡಾ॥ ಚಿದಾನಂದ ಮೂರ್ತಿಯವರಂತಹವರಿಗೆ ಕೆಲವು ಸಂಗತಿಗಳನ್ನು ಕಲ್ಪಿಸಿಕೊಳ್ಳುವುದು (ನಂಬುವುದು) ಕಷ್ಟವಾಗುತ್ತದೆ. ಏಕೆಂದರೆ ಇವರು ಮೊದಲು ತಮ್ಮ ವಿಚಾರಗಳನ್ನು ದೃಢವಾಗಿಟ್ಟುಕೊಂಡೇ ಸತ್ಯಾನ್ವೇಷಣೆಗೆ ಹೊರಡುತ್ತಾರೆ. ಸಹಜವಾಗಿ ತಿರುಗಾಡುತ್ತ ಸತ್ಯವನ್ನು ಗ್ರಹಿಸುವುದಿಲ್ಲ. ಈ ಪೂರ್ವನಿರ್ಧಾರಿತ (*Predetermined*) ಆಲೋಚನೆಗಳಿಂದ ಹೊರಟಾಗ ಸತ್ಯವು ಗೋಚರವಾಗದು. ಅದಕ್ಕಿಂತ ಹೆಚ್ಚಾಗಿ ಮನಸ್ಸಿನಲ್ಲಿ ಇನ್ನೂ ಕೆಲವು ಅಂಶಗಳು ಸೇರಿಬಿಟ್ಟರಂತೂ ಸತ್ಯವನ್ನು ಬುದ್ಧಿ ಒಪ್ಪಿಕೊಳ್ಳದು.

ಬಸವ ಸಂಪ್ರದಾಯದ ಕಂದರು

ಅನಿಮಿಷಂಗೆ ಲಿಂಗವ ಕೊಟ್ಟಾತ ಬಸವಣ್ಣ
ಆ ಲಿಂಗ ನಿನಗೆ ಸೇರಿತ್ತಾಗಿ,
ಬಸವಣ್ಣನ ಸಂಪ್ರದಾಯದ ಕಂದನು ನೋಡಾ, ನೀನು.
ಭಕ್ತಿದಳದುಳದಿಂದ ಚನ್ನ ಸಂಗಮನಾಥನೆಂಬ
ಲಿಂಗವನವಗ್ರಹಿಸಿ ಕೊಂಡೆನಾಗಿ
ಬಸವಣ್ಣನ ಸಂಪ್ರದಾಯದ ಕಂದನು ನೋಡಾ, ನಾನು
ಇಂತಿಬ್ಬರಿಗೆಯೂ ಒಂದೇ ಕುಲಸ್ಥಲವಾದ ಕಾರಣ
ಕೂಡಲ ಚನ್ನ ಸಂಗಯ್ಯನಲ್ಲಿ ಬಸವಣ್ಣನ
ಮಹಾಮನೆಯ ಪ್ರಸಾದ ಇಬ್ಬರಿಗೆಯೂ ಒಂದೇ ಕಾಣ ಪ್ರಭುವೆ?

—ಚ. ಬ. ವ. ೨೬೨

ಇಲ್ಲಿ ಮಹಾಮನೆಯ ಪ್ರಸಾದ ಎಂದರೆ ಊಟವಲ್ಲ, ಶರಣರ ಪರಂಪರೆ ಎಂದರ್ಥ. ಅಲ್ಲಮಪ್ರಭು ಬಸವಣ್ಣನವರು ಕೊಟ್ಟ ಧರ್ಮವನ್ನು ಸ್ವೀಕರಿಸಿರಬಹುದೇ ಎಂಬ ಸಂದೇಹಕ್ಕೆ ನೇರ ಉತ್ತರ ಈ ವಚನದಲ್ಲಿದೆ.

"ಬಸವ ಆದಿ ಪ್ರಮಥ" ಎಂದು ಪದ ಜೋಡಣೆ ಅತ್ಯಂತ ಸಹಜವಾಗಿ ಬಂದುಬಿಟ್ಟಿದೆ. ಶರಣ ಪಥದ ಯಾವುದೇ ಸ್ತುತಿಗಳನ್ನು ತೆಗೆದುಕೊಂಡರೂ ಪ್ರಥಮ ಸ್ತೋತ್ರ ಸಲ್ಲುವುದು ಪ್ರಥಮಗಣಾಧೀಶ ಧರ್ಮಪಿತ ಬಸವಣ್ಣನವರಿಗೆ. ಪುರಾಣ–ಕಾವ್ಯಗಳು ಶರಣರನ್ನು ಕುರಿತೇ ಇರುವವಾದರೂ ಬರೆದವರು ವೈದಿಕ–ಶೈವದ ವಾಸನೆಯುವರಾದ್ದರಿಂದ ಅವುಗಳಲ್ಲಿ ಶುದ್ಧ ಬಸವ ಧರ್ಮವನ್ನು ಹುಡುಕುವುದು, ಪಡೆಯುವುದು ಕಷ್ಟ. ಶಿವಯೋಗಿ ಸಿದ್ಧರಾಮೇಶ್ವರರು ಶೈವ ಮೂಲದಿಂದ ಬಂದವ-

ರಾದರೂ, ಅವರುಗಳು ನಿಜವಾದ ಶರಣ (ಮಹಾತ್ಮ)ರು ಆಗಿರುವುದರಿಂದ ಅವರ ಪೂರ್ವಾಶ್ರಯ ನಿರಸನ ಸಂಪೂರ್ಣವೂ, ಚೊಕ್ಕಟವೂ ಆಗಿರುತ್ತದೆ. ಪೂಜಾರಿಗಳು ಮತಾಂತರಗೊಂಡರೂ ಲಾಭದ ಆಸೆಗೆ **ರೂಪಾಂತರಗೊಂಡಿರುತ್ತಾರೆ, ಸ್ವರೂಪಾಂತರಗೊಂಡಿರುವುದಿಲ್ಲ.** ಮಹಾತ್ಮರು ಹಾಗಲ್ಲ. ಅವರದ್ದು ಪೂರ್ಣ ಪರಿವರ್ತನೆ (*thorough change*) ಇಂಥ ಸಿದ್ಧರಾಮೇಶ್ವರರು ನಮ್ಮ ಆದಿಗುರುವಿನ ಸ್ತೋತ್ರಕ್ಕಾಗಿ ಬಸವ ಸ್ತೋತ್ರ ತ್ರಿವಿಧಿ ಬರೆದಿದ್ದಾರೆ. ಇದು 125 ಪದ್ಯಗಳನ್ನೊಳಗೊಂಡಿದೆ. ಮಿಶ್ರ ಸ್ತೋತ್ರ ತ್ರಿವಿಧಿ ಎಂಬ ಇನ್ನೊಂದು ಪದಗುಚ್ಛದಲ್ಲಿ 109 ಪದ್ಯಗಳಿವೆ. ಇದರಲ್ಲಿಯೂ ಆರಂಭದಲ್ಲಿ ಬಸವ ಸ್ತೋತ್ರವಿದೆ. ಇಲ್ಲದಿದ್ದರೆ ಇದು ತಲೆಯಿಲ್ಲದ ಅಟ್ಟೆಗೆ ಪಟ್ಟಗಟ್ಟಿದಂತೆ ಎಂದು ಅವರ ಭಾವವಿರಬೇಕು. ಇಲ್ಲೊಂದು ಮೋಜಿನ ಪ್ರಯೋಗ ಮಾಡುವಾ. ಮಿಶ್ರ ಸ್ತೋತ್ರ ತ್ರಿವಿಧಿಯಲ್ಲಿ ಯಾರ ಹೆಸರಲ್ಲಿ ಎಷ್ಟು ಸ್ತೋತ್ರಗಳಿವೆ ಎಂಬುದರ ಮೇಲೂ ಅವರ ಸ್ಥಾನಮಾನ ಗುರುತಿಸಬಹುದು. ಬಸವ ಸ್ತೋತ್ರ ತ್ರಿವಿಧಿಯ 125 ಪದ್ಯಗಳಲ್ಲಿ (ಮತ್ತು ಅಸಂಖ್ಯಾತ ವಚನಗಳಲ್ಲಿ) ಎಲ್ಲವೂ ಬಸವಣ್ಣನವರಿಗೆ ಮೀಸಲು. ಮಿಶ್ರ ಸ್ತೋತ್ರ ತ್ರಿವಿಧಿಯಲ್ಲಿ ಯಾದಿ ಕೆಳಕಂಡಂತಿದೆ.

1. ವಿಶ್ವಗುರು ಬಸವಣ್ಣನವರು–20 (+ಬಸವ ಸ್ತೋತ್ರ ತ್ರಿವಿಧಿ-125)
2. ಚನ್ನಬಸವಣ್ಣನವರು 30 (21–50)
3. ಅಲ್ಲಮ ಪ್ರಭುದೇವರು 20 (51–70)

ನೀಲಮ್ಮ–3, ಸೊಡ್ಡಳಚಾಚರಸ–1, ನಿರ್ಲಜ್ಜ ಶಾಂತಗುರು–1, ಸಗರದ ಬ್ರಹ್ಮಯ್ಯ–1, ನಿಗಮದ ಬ್ರಹ್ಮಯ್ಯ–1, ಬಹುರೂಪ ಚವುಡಯ್ಯ–1. ಕಲಕೇತ ಬ್ರಹ್ಮಯ್ಯ–1. ಜೋದರ ಮಾಯಣ್ಣ-೧, ದಾಸಯ್ಯ-1, ಮೊರನ ವೇಮಯ್ಯ-1, ವಾರುಧೀ ಬ್ರಹ್ಮಯ್ಯ-1, ಡೋಹರ ಕಕ್ಕಯ್ಯ-2, ಮಹದೇವಿ-2, ಅಕ್ಕನಾಗಿಲೆ-2, ಮುಕ್ತಾಯಕ್ಕ-1, ಮಡಿವಾಳ ಮಾಚಯ್ಯ-2, ನಿಜಲಿಂಗ ಚಿಕ್ಕಯ್ಯ-1, ಬೊಕ್ಕಸದ ಚಿಕ್ಕಯ್ಯ-1, ನುಲಿಯ ಚಂದಯ್ಯ-2, ಒಕ್ಕಲಿಗ ಮುದ್ದಯ್ಯ-1, ರಕ್ಕಸ ಬ್ರಹ್ಮಯ್ಯ-1, ಚಿಕ್ಕ ಮೂದಣ್ಣ, ಅಜಗಣ್ಣ-3, ಮೋಳಿಗಯ್ಯ-1, ವೀರಸಂಗವ್ವೆ-1, ಚಂಗಳೆ-1, ಗಂಡ್ಡವ್ವೆ-1, ಸೋಮವ್ವೆ-1, ಕಮಳವ್ವೆ-1, ಅಕ್ಕಮಹಾದೇವಿ-1, ಚೋಳವ್ವೆ-1, ನಿಂಬಿಯಕ್ಕ-1 ದುಗ್ಗಳೆ, ಸುಗ್ಗಲವ್ವೆ-1, ಘಟ್ಟಿವಾಳಯ್ಯ-1, ಅಪ್ಪಣ್ಣ-1, ಮರುಳು ಶಂಕರ-1, ಸತ್ಯಣ್ಣ-1, ಮುಗ್ಧ ಸಂಗಯ್ಯ,

ಶ್ರೀ ಸಿದ್ಧರಾಮೇಶ್ವರರು ವರ್ಣಿಸಿರುವ ಹೆಸರುಗಳಲ್ಲಿ ವಿಶ್ವಗುರು ಬಸವಣ್ಣನವರ ಹೆಸರು ಅತಿ ಹೆಚ್ಚಿನ ಸಲ ಬಂದಿರುವುದು ಗಮನಾರ್ಹ ಮತ್ತು ಅವರು ಗರ್ಭಸ್ಥ

ಶಿಶುವಾಗಿದ್ದಾಗ ಆಶೀರ್ವದಿಸಿದರು ಎಂದು ಹೇಳಲಾಗುವ ರೇವಣಸಿದ್ಧರ ಹೆಸರು ಇಲ್ಲದುದು ಅಷ್ಟೇ ಗಮನಾರ್ಹ. ಉಳಿದ ಪಂಚಾಚಾರ್ಯರುಗಳ ಹೆಸರು ಸಹ ಎಲ್ಲಿಯೂ ಪ್ರಸ್ತಾಪವಾಗಿಲ್ಲ. ರೇವಣಸಿದ್ಧರ ಮಗ ರುದ್ರಮುನಿ ಮಹಾಮನೆಯಲ್ಲಿಯೇ ಇದ್ದರಾದರೂ ಅವರ ಹೆಸರು ಸಹ ಕಾಣುತ್ತಲಿಲ್ಲ.

ಮತ್ತೊಬ್ಬ ಶರಣ ಸಂಪ್ರದಾಯದ ಮಹಾನುಭಾವರು ಮುಪ್ಪಿನ ಷಡಕ್ಷರಿಗಳು. ಅವರದೊಂದು ಸ್ತೋತ್ರ ಮಾಲಿಕೆ ಇದೆ. "ಹೆಮ್ಮೆಗಳು ನಾನಿನ್ನ ನೆಮ್ಮಿ ಕೊಂಡಿರುವೆನ್ನೈ" ಈ ಪದ್ಯದಲ್ಲಿ ಹೀಗೆ ಹೆಸರುಗಳು ಬರುತ್ತವೆ. ಚರಣಗಳ ಸಂಖ್ಯೆ ಕೊಡಲಾಗಿದೆ.

1. ಬಸವಯ್ಯ, ಚನ್ನಣ್ಣ, ಮಡಿವಾಳಯ್ಯ, ಅಜಗಣ್ಣ, ಸತ್ಯಣ್ಣ, ಪ್ರಭುರಾಯ
2. ಹರಳಯ್ಯ, ಧೂಳಯ್ಯ, ಶ್ವಪಚಯ್ಯ, ಭೀಮಯ್ಯ, ಕಕ್ಕಯ್ಯ, ಚನ್ನಯ್ಯ

ಇನ್ನೊಂದು ಗೀತೆ, "ಎಲ್ಲ ಶರಣರ ನೆನೆದು" ಎಂಬುದರಲ್ಲಿ 5 ಚರಣಗಳಿದ್ದು ಬಸವಣ್ಣ, ಸಿದ್ಧರಾಮಯ್ಯ, ಅಕ್ಕ ಮಹಾದೇವಿ, ಅಜಗಣ್ಣನವರ ಬಗ್ಗೆ ಒಂದೊಂದರಂತೆ 4 ಚರಣಗಳಿವೆ. "ಶಿವಶರಣರಾ ಮನೆಯ ತವ ಸೇವೆಯನು ಮಾಡಿ" ಎಂಬ ಇನ್ನೊಂದು ಪದದಲ್ಲಿ ಈ ಹೆಸರುಗಳಿವೆ.

1. ಬಸವೇಶ್ವರ, ಚನ್ನಬಸವೇಶ್ವರ ದಸರಯ್ಯ, ಮೋಳಿಗೆಯ ಮಾರಯ್ಯ, ಮಸಣಯ್ಯ
2. ಚನ್ನಯ್ಯ, ಅಗ್ಘವಣಿ ಹೊನ್ನಯ್ಯ, ಗಾಣದಾ ಕನ್ನಯ್ಯ, ಧೂಳಿದೇವರು, ಬೇಡರ ಕಣ್ಣಯ್ಯ,
3. ಹರಳಯ್ಯ-ಮಧುವಯ್ಯ, ಬಳ್ಳೇಶ ಮಲ್ಲಯ್ಯ ಗೊಲ್ಲಾಳದೇವ, ಹಾವಿನಹಾಳ ಕಲ್ಲಯ್ಯ,
4. ಬಾಹೂರ ಬ್ರಹ್ಮಯ್ಯ, ದೇವರ ದಾಸಯ್ಯ, ಜಗದೇವ ಮಲ್ಲಯ್ಯ ಬೊಮ್ಮಣ್ಣನ,
5. ಚಿಕ್ಕಯ್ಯ, ಡೋಹರ ಕಕ್ಕಯ್ಯ, ಸೊಡ್ಡಳ ಬಾಚರಸ, ಆಯ್ದಕ್ಕಿ ಮಾರಯ್ಯ ರಾಮಯ್ಯನು, ಚಕ್ಕುಲಿಗೆ ನಾಗಯ್ಯ,
6. ಹಾದರದ ಬೊಮ್ಮಯ್ಯ, ಮಾದಾರ ಧೂಳಯ್ಯ, ಮೇದಾರ ಕೇತಯ್ಯ ವಹಿಲಯ್ಯ, ಆದಯ್ಯ
7. ಸಾಮವೇದಿ, ಸಿದ್ಧರಾಮಯ್ಯ, ಮೈದುನ ರಾಮಯ್ಯ, ಏಕಾಂತ ರಾಮಯ್ಯ, ಭೀಮಯ್ಯ
8. ಮೊರನದ ಪೆಮ್ಮಯ್ಯ, ಮೊರಟದಾ ಬಂಕಯ್ಯ, ತಿರುನೀಲಕಂಠ, ಮಲ್ಲಿಕಾರ್ಜುನ ಪಂಡಿತರು,

(41 ನೇ ಪುಟಕ್ಕೆ ಮುಂದುವರಿದಿದೆ)

ರಾಷ್ಟ್ರೀಯ ಬಸವ ದಳ-
ಬಸವ ತತ್ತ್ವ-ಶರಣ ಸಂಸ್ಕೃತಿಗಳ ಕಾವಲು ಸಮಿತಿ

ಕೂಡಲ ಸಂಗಮದಲ್ಲಿ ಒಂದು ಕರ್ತವ್ಯ ನಿರತಳಾಗಿ ನಾನಿರುವುದರಿಂದ ಬಸವ ಸಮಿತಿ, ಬೆಂಗಳೂರು ಇವರು ಪ್ರಕಟಿಸುವ "ಬಸವ ಪಥ" ಪತ್ರಿಕೆ ಓದಲು ನನಗಾಗಲಿಲ್ಲ ಮತ್ತು ಇತ್ತೀಚೆಗೆ ಈ ಪತ್ರಿಕೆಗಳನ್ನೇ ಓದದಿರುವುದು ಲೇಸು ಎಂದೂ ಸುಮ್ಮನಾಗಬೇಕಾಗಿದೆ. ಏನಾದರೂ ಒಂದು ಶರಣರ ಅವಹೇಳನದ ಲೇಖನ ಪ್ರಕಟಿಸುತ್ತಾರೆ. ಓದಿದ ಬಳಿಕ ಉತ್ತರ ಕೊಡದೆ ಇರಲು ಜೀವ ತಡೆಯುವುದಿಲ್ಲ; ಉತ್ತರ ಕೊಡುತ್ತಾ ಹೋದರೆ ಸಮಯವು ಹಾಳಾಗುತ್ತದೆ.

ಬಸವ ಧರ್ಮ ಸಂಸತ್ ಸದಸ್ಯೆಯೂ, ರಾಷ್ಟ್ರೀಯ ಬಸವ ದಳ, ಬೆಂಗಳೂರು ಘಟಕದ ಕೋಶಾಧ್ಯಕ್ಷೆಯೂ, ಆಗಿರುವ ಶರಣೆ. ಪಾರ್ವತಿ ಡಾ॥ ಚನ್ನಬಸಪ್ಪ ಶಿರೋಳ ಅವರು ಬಸವ ಪಥ ಜುಲೈ 1992ರ ಸಂಚಿಕೆಯಲ್ಲಿ ಪ್ರಕಟವಾದ "ಭವಗೆದ್ದ ಭವ್ಯ ಭಗಿನಿ ಅಕ್ಕಮಹಾದೇವಿ" ಎಂಬ ಶ್ರೀ. ಎನ್. ಆರ್. ಪಾಟೀಲ ಎಂಬುವವರು ಬರೆದ ಲೇಖನ ಓದಿ, ಅದರ ಜಿರಾಕ್ಸ್ ಪ್ರತಿ ನನಗೆ ಕಳಿಸಿ, ರಾಷ್ಟ್ರೀಯ ಬಸವ ದಳದ ಪದಾಧಿಕಾರಿಗಳ ಗಮನ ಸೆಳೆದು, ಪ್ರತಿಭಟನಾ ಪತ್ರವನ್ನು ಪ್ರಕಾಶಕರಿಗೆ ಬರೆಯುವಂತೆ ಕಾರ್ಯನಿರ್ವಹಿಸಿದ್ದಾರೆ. ಶ್ರೀ ಬಿ. ಡಿ. ಜತ್ತಿಯವರೊಡನೆ ದೂರವಾಣಿಯಲ್ಲಿ ಮಾತನಾಡಿ ಪ್ರಮಾದವನ್ನು ಮನಗಾಣಿಸಿಕೊಟ್ಟಿದ್ದಾರೆ. ಇದಕ್ಕಾಗಿ ಶರಣೆ. ಪಾರ್ವತಿ ಚನ್ನಬಸಪ್ಪ ಶಿರೋಳರನ್ನು ಅಭಿನಂದಿಸೋಣ. ರಾಷ್ಟ್ರೀಯ ಬಸವ ದಳ, ಬೆಂಗಳೂರು ಘಟಕ ತಕ್ಷಣವೇ ಕಾರ್ಯೋನ್ಮುಖವಾಗಿ ಬಸವ ಸಮಿತಿಗೆ ಪ್ರತಿಭಟನಾ ಪತ್ರ ಬರೆದಿದ್ದಾರೆ. ಅದಕ್ಕಾಗಿ ಅವರಿಗೂ ಅಭಿನಂದನೆ.

ರಾಷ್ಟ್ರೀಯ ಬಸವ ದಳಗಳ ಸದಸ್ಯರು ಸದಾ ಜಾಗೃತರಾಗಿರಬೇಕು. ಬಸವಾದಿ ಪ್ರಮಥರ ಬಗ್ಗೆ ಅವಹೇಳನಾತ್ಮಕ ಬರಹಗಳು ಮುದ್ರಣಗೊಂಡರೆ, ಯಾರಾದರೂ ವೇದಿಕೆಗಳ ಮೇಲೆ ಅಗೌರವ ಸೂಚಕ ಪದಗಳನ್ನು ಉಪಯೋಗಿಸಿ ಶರಣರ ನಿಂದೆ ಮಾಡಿದರೆ ಆಗಿಂದಾಗಲೇ ಪ್ರತಿಭಟಿಸಬೇಕು. ರಾಷ್ಟ್ರೀಯ ಬಸವ ದಳದ ಕೇಂದ್ರ ಕಾರ್ಯಾಲಯಕ್ಕೆ ವಿವರಗಳನ್ನು ನೀಡಬೇಕು. ಕಲ್ಯಾಣ ಕಿರಣ, ಬೆಂಗಳೂರು ಬಸವಕಿರಣ ಪಾಕ್ಷಿಕ, ಶಿವಮೊಗ್ಗ ಇವುಗಳ ಕಾರ್ಯಾಲಯಕ್ಕೆ ಬರೆದು ತಿಳಿಸಬೇಕು. ಪರ ಧರ್ಮೀಯರಿಂದಲೇ ಆಗಲಿ, ಸ್ವಧರ್ಮೀಯರಿಂದಲೇ ಆಗಲಿ ಯಾರಿಂದ ಶರಣರ ಚರಿತ್ರೆ, ತತ್ತ್ವ, ಸಂದೇಶಗಳಿಗೆ ಚ್ಯುತಿ ಬಂದರೂ ಅದನ್ನು ತಕ್ಷಣವೇ ಪ್ರತಿಭಟಿಸಬೇಕು. ಇದು ತಮ್ಮ ಆದ್ಯ ಕರ್ತವ್ಯ ಎಂದು ಭಾವಿಸಬೇಕು.

—**ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ**
ಕಾರ್ಯಾಧ್ಯಕ್ಷೆ, ರಾಷ್ಟ್ರೀಯ ಬಸವ ದಳ, ಕೇಂದ್ರ ಸಮಿತಿ.

ಬಸವ ಸಮಿತಿಯೋ-ಶರಣ ನಿಂದನಾ ಸಮಿತಿಯೊ ?

—ಜಗದ್ಗುರು ಮಾತೆ ಮಹಾದೇವಿ

ಶ್ರೀ. ಡಾ॥ ಬಿ. ಡಿ. ಜತ್ತಿಯವರ ಘನ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ಒಂದು ಬೃಹತ್ ಸಂಸ್ಥೆಯಿದೆ. ಅದರ ಹೆಸರು ಬಸವ ಸಮಿತಿ ಎಂಬುದು ಕರ್ನಾಟಕದ ಬಹುಪಾಲು ಜನಕ್ಕೆ ಗೊತ್ತು. ನಾವುಗಳು ಈ ವರೆಗೂ ಬಸವಾದಿ ಪ್ರಮಥರ ತತ್ತ್ವ ಪ್ರಚಾರಕ್ಕಾಗಿ ಇರುವ ಸಂಸ್ಥೆಯಿದು ಎಂದೇ ನಂಬಿದ್ದೆವು. ಈಗೀಗ ಆ ನಂಬಿಕೆ ಹುಸಿಯಾಗುತ್ತಲಿದೆಯೇನೋ ಎಂಬ ಸಂದೇಹ ಬರುತ್ತಲಿದೆ.

ಪ್ರಪ್ರಥಮವಾಗಿ ಘೋಷಿಸಲ್ಪಟ್ಟ ಒಂದು ಪುರಸ್ಕಾರ 'ಬಸವ ಪುರಸ್ಕಾರ' ಬಸವಾದಿ ಪ್ರಮಥರನ್ನು ಸರಿಯಾಗಿ ಚಿತ್ರಿಸದ, ಮಾತ್ರವಲ್ಲ ವಿಕೃತವಾಗಿ ಚಿತ್ರಿಸಿದ ಡಾ॥ ಪಿ. ವಿ. ನಾರಾಯಣರ 'ವಚನ-ನಿರ್ವಚನ' ಕೃತಿಗೆ ಕೊಟ್ಟುದಾಗಿ ಬಸವ ಸಮಿತಿ ಘೋಷಿಸಿತು. ಆ ಪುಸ್ತಕವನ್ನು ಓದಿ 'ಕನ್ನಡ ಪ್ರಭಾ'ದಲ್ಲಿ ಓದುಗರೊಬ್ಬರು ತೀಕ್ಷ್ಣ ಪ್ರತಿಕ್ರಿಯೆ ನೀಡಿದಾಗ ಪುರಸ್ಕಾರವನ್ನು ತಡೆಹಿಡಿಯಲು ನಾವು ಕೋರಿ, ನಂತರ ಪುಸ್ತಕ ಓದಿ ಅದರ ವಿಮರ್ಶೆ ಬರೆದು (ಕಲ್ಯಾಣ ಕಿರಣ 1991ರ ಆಗಸ್ಟ್-ಸೆಪ್ಟಂಬರ್ ಸಂಚಿಕೆಗಳು) ಬಸವ ಸಮಿತಿ ಮಾಡಿದ ಪ್ರಮಾದವನ್ನು ಎತ್ತಿ ತೋರಿಸಿದೆವು. ಪುರಸ್ಕಾರ ತಡೆಹಿಡಿದರು. ಆದರೆ ಅಂಗೈ ತೋರಿಸಿ ಅವಲಕ್ಷಣ ಎನ್ನಿಸಿಕೊಳ್ಳುವ ಈ ಪರಿಪಾಠ ಏಕೆ ? ಆ ಪ್ರಕರಣ ಇನ್ನೂ ಕಾವು ಕಳೆದುಕೊಳ್ಳುವ ಮುನ್ನವೆ ಬಸವ ಪಥ 1992ರ ಜುಲೈ ಸಂಚಿಕೆಯಲ್ಲಿ ಅಕ್ಕಮಹಾದೇವಿಯನ್ನು ಕುರಿತು ಶ್ರೀ. ಎನ್. ಆರ್. ಪಾಟೀಲ ಎಂಬುವವರ ಅಪಕ್ವ ಮತ್ತು ಅಸಹ್ಯ ಲೇಖನವನ್ನು ಬಸವ ಸಮಿತಿ ಮುದ್ರಿಸಿದೆ. ಈ ಲೇಖಕರು ಅಕ್ಕಮಹಾದೇವಿಯನ್ನು ಕುರಿತು ಅಭಿಮಾನದ ಮಾತು ಬರೆದಿದ್ದರೂ ಆ ಮಾತುಗಳು ಸಾಗರದಲ್ಲಿ ಸಾಸುವೆಯಂತೆ ಅತಿಗೌಣವಾಗಿವೆ, ಕೊಚ್ಚಿ ಹೋಗಿವೆ. ವಚನಗಳನ್ನು ತಪ್ಪುತಪ್ಪಾಗಿ ಅರ್ಥಮಾಡಿ, ಅತಿ ಭಯಂಕರವಾಗಿ ಬಳಸಿಕೊಂಡಿದ್ದಾರೆ. ವಚನಗಳ ಮರ್ಮವೇ ತಿಳಿದಿಲ್ಲ. ಕಿನ್ನರಿ ಬ್ರಹ್ಮಣ್ಣ ನಂತಹ ಮಹಾನ್ ಶರಣನನ್ನು ಒಬ್ಬ ದುರ್ಬಲಮನದ ಅತ್ಯಾಚಾರಿಯನ್ನಾಗಿಯೂ ಅಕ್ಕಮಹಾದೇವಿಯನ್ನು ಅತ್ಯಾಚಾರಕ್ಕೊಳಗಾದ ಅಬಲೆಯಂತೆಯೂ ಚಿತ್ರಿಸಿದ್ದಾರೆ. ಹಿಂದೆ ನಾನು ಬರೆದ ವಿಮರ್ಶಾತ್ಮಕ ಲೇಖನಗಳಲ್ಲಿ [ವಚನ–ನಿರ್ವಚನ ವಿಮರ್ಶೆ, ವೀರಶೈವ ಮಹಾಧಿವೇಶನ ಕುರಿತಾದ ಲೇಖನ ಇತ್ಯಾದಿ] ವಿಶಿಷ್ಟ ಭಾಗಗಳನ್ನು ಮುದ್ರಿಸಿ, ಉತ್ತರ ನೀಡಿದ್ದೆ. ಈಗ ಆ ಸಾಹಸ ಮಾಡುವುದಿಲ್ಲ. ಅಷ್ಟು ಕೀಳಾಗಿವೆ ಇಲ್ಲಿಯ ದೃಶ್ಯಗಳು ಮತ್ತು ಅವುಗಳ ಚಿತ್ರಣ. ಕಿನ್ನರಿ ಬ್ರಹ್ಮಣ್ಣ ಒಬ್ಬ ಪ್ರೌಢ ಶರಣ; ಅನುಭವ ಮಂಟಪದ ಶರಣ ವೃಂದದಲ್ಲಿ ಪ್ರಮುಖ. ಧರ್ಮಪಿತ ಬಸವಣ್ಣನವರ ಆತ್ಮೀಯ

ವಲಯದಲ್ಲಿದ್ದವನು. ಆ ಸ್ಥಾನ ಆತನಿಗೆ ಸಿಗಬೇಕಾದರೆ ಅವನ ವ್ಯಕ್ತಿತ್ವ ಎಷ್ಟು ಪಕ್ವವಾಗಿರಬಹುದು. ಇದನ್ನು ಅರಿಯದೆ, ಬೆಡಗಿನ ಭಾಷೆಯಲ್ಲಿರುವ ವಚನಗಳನ್ನು ಅರ್ಥಮಾಡಲು ಸಾಧ್ಯವಾಗದೆ ಏನೇನನ್ನೋ ಬರೆಯುವುದು, ಪ್ರಕಟಿಸುವುದು ಸಭ್ಯತೆಯಲ್ಲ, ವಿದ್ವತ್ತೂ ಅಲ್ಲ.

ಅಕ್ಕಮಹಾದೇವಿಯ ಬಗ್ಗೆ ಈಗಾಗಲೇ ಓದಿ ತಿಳಿದವರು ಇಂಥಾ ಬರಹಗಳ ಆಳವನ್ನು ನೋಡಿ ನಕ್ಕುಬಿಡಬಹುದು; ತತ್ತ್ವನಿಷ್ಠರು ಪ್ರತಿಭಟಿಸಬಹುದು. ಆದರೆ ಏನೇನೂ ಗೊತ್ತಿಲ್ಲದ ಅಪರಿಚಿತರು ಓದಿ ಅಕ್ಕನ ಬಗ್ಗೆ ಎಷ್ಟರ ಮಟ್ಟಿಗೆ ತಿಳಿದುಕೊಳ್ಳಬಹುದು ?

ವಚನ ಸಾಹಿತ್ಯದಂತಹ ದಾರ್ಶನಿಕ, ಅನುಭಾವಿಕ ಸಾಹಿತ್ಯದ ಬಗ್ಗೆ, ಅಕ್ಕಮಹಾದೇವಿಯಂತಹ ಶ್ರೇಷ್ಠಮಟ್ಟದ ದಾರ್ಶನಿಕಳು ಮತ್ತು ವಿರಾಗಿಣಿಯ ಬಗ್ಗೆ ಬರೆಯುವಾಗ ಲೇಖಕರು ಎಚ್ಚರವಾಗಿರಬೇಕು. ಸೆಕ್ಸ್ ಸಿನಿಮಾಕ್ಕೆ ಚಿತ್ರಕಥೆ ಬರೆಯುವಂತಹ ಸ್ವೇಚ್ಛೆಯನ್ನು ಅನುಸರಿಸಬಾರದು. ಲೇಖನ ಬರೆದವರು ಪರಿಪಕ್ವ ಬರಹಗಾರರಲ್ಲದಿರಬಹುದು. ಆದರೆ ಪ್ರಕಟಿಸುವ ಬಸವ ಸಮಿತಿಯವರಿಗೆ ಎಚ್ಚರಿಕೆ ಅಗತ್ಯ. ಇಂಥ ಪ್ರಮಾದಗಳನ್ನು ಗುರುತಿಸಿ ಯಾರಾದರೂ ಕೇಳುತ್ತಲೇ, "ನಮ್ಮ ಗಮನಕ್ಕೆ ಬರಲಿಲ್ಲ" ಎಂದು ಹಾರಿಕೆಯ ಉತ್ತರವನ್ನು ಬಲು ಸುಲಭವಾಗಿ ಶ್ರೀ ಬಿ. ಡಿ. ಜತ್ತಿಯವರು ಕೊಟ್ಟುಬಿಡುತ್ತಾರೆ. ಬಸವ ಪಥದ ಸಂಪಾದಕರ ಕೆಲಸ ಏನು ? ತಾವು ಪ್ರಕಟಿಸುವ ಕೃತಿಗಳನ್ನು ಪೂರ್ವಪರಿಶೀಲನೆ ಮಾಡದೆ ಯಾರೋ ಕಳಿಸಿದ್ದನ್ನೆಲ್ಲ ಹಾಕುವುದೆ ? ಪತ್ರಿಕೆಯ ಪುಟ ತುಂಬುವ ಅನಿವಾರ್ಯತೆಯೊ ? ***Something is better than nothing; But nothing is better than nonsense.*** ಪತ್ರಿಕೆಯ ಪುಟ ತುಂಬುವಷ್ಟು ಲೇಖನಗಳು ಬರದಿದ್ದರೆ ಪುಟ ಕಡಿಮೆ ಮಾಡಿದರೆ ಪ್ರಮಾದವೇನಾಗದು. ಹಸಿವಾಯಿತು ಏನೂ ಸಿಗಲಿಲ್ಲ ಎಂದು ಎಕ್ಕೆಯ ಕಾಯಿ ತಿನ್ನಿಸಬಾರದು; ಬಾಯಾರಿಕೆಯಾಯಿತು ನೀರು ಸಿಗಲಿಲ್ಲ ಎಂದು ವಿಷ ಕುಡಿಸಬಾರದು. ಹೊಣೆಗಾರಿಕೆಯರಿತು ಲೇಖನಗಳನ್ನು, ಪುಸ್ತಕಗಳನ್ನು ಪ್ರಕಟಿಸಬೇಕು. ಬಸವ ಸಮಿತಿ ಬಸವ ತತ್ತ್ವ ಪ್ರಚಾರಕ್ಕಾಗಿ ಇಲ್ಲ, ಬಸವಾದಿ ಪ್ರಮಥರ ನಿಂದೆಗಾಗಿ ಇದೆ ಎಂಬ ಸಂಶಯ ಹುಟ್ಟುವಂತಾಗಬಾರದು.

"ಇಂಥಾ ಪ್ರಮಾದದ ಹಿಂದೆ ದುರುದ್ದೇಶವಿಲ್ಲ; ಕೇವಲ ಉದಾಸೀನತೆ ಇದೆ." ಎಂದು ಬಸವ ಸಮಿತಿಯವರು ಸಮರ್ಥಿಸಿಕೊಳ್ಳಬಹುದು. ವೈದ್ಯನ ಉದಾಸೀನತೆ ರೋಗಿಯನ್ನು ವಿನಾಶಕ್ಕೆ ತಳ್ಳುವುದು; ವಕೀಲನ ಉದಾಸೀನತೆ ತನ್ನ ಕಕ್ಷಿದಾರನನ್ನು ಅಪರಾಧಿಯನ್ನಾಗಿ ಮಾಡುವುದು. ಇಂಥ ಉದಾಸೀನತೆ ಶರಣ ಧರ್ಮ-ಸಂಸ್ಕೃತಿ–ಚರಿತ್ರೆಗಳಿಗೆ ಮಸಿ ಬಳಿಯುವುದು.

ಇದೇ ಉದಾಸೀನತೆ ಮುಂದುವರಿದರೆ ತೀಕ್ಷ್ಣವಾದ ಪ್ರತಿಭಟನೆ ಮಾಡದೆ ಗತ್ಯಂತರವಿಲ್ಲ ಎಂಬ ಪರಿಸ್ಥಿತಿ ಸಮಾಜಕ್ಕೆ ಬರದೆ ಇರದು. ಈ ಪ್ರಮಾದಗಳನ್ನು ಎತ್ತಿ ತೋರಿಸಿದರೆ ಬಸವ ತತ್ತ್ವಾನುಯಾಯಿಗಳೇ ಪರಸ್ಪರ ಕಚ್ಚಾಡುವರು ಎಂಬ ಭಾವನೆ ಜನರಿಗೆ ಎಲ್ಲಿ ಮೂಡುವದೋ ಎಂಬ ಸಂಕೋಚ. ಎತ್ತಿ ತೋರಿಸದಿದ್ದರೆ ಶರಣರಿಗೆ ಅನ್ಯಾಯವಾಗುವುದಲ್ಲ ಎಂಬ ಧರ್ಮಸಂಕಟ. ಬಸವ ಸಮಿತಿಯವರ ಈ ಮೈಮರೆವು ಅಕ್ಷಮ್ಯ ಅಪರಾಧ ಎಂಬುದನ್ನು ಅವರು ಬೇಗನೆ ಅರ್ಥ ಮಾಡಿಕೊಳ್ಳುವುದು ಒಳ್ಳೆಯದು.

★

ಶ್ರೀ. ಡಾ|| ಎಸ್. ವಿದ್ಯಾಶಂಕರ್ ಅವರ ಪತ್ರ

ಮಾನ್ಯರೇ,

ಶರಣು ಶರಣಾರ್ಥಿ.

"ಬಸವ ಪಥ"ದಲ್ಲಿ ಬಂದ ಲೇಖನದ ಬಗೆಗೆ ಪ್ರಕಟವಾಗಿರುವ ಪ್ರತಿಭಟನೆ ಸ್ವಾಗತಾರ್ಹವಾದುದು. ಆ ಲೇಖನ ಓದಿದ ಕೂಡಲೇ ನನ್ನ ಪ್ರತಿಕ್ರಿಯೆಯನ್ನು ಪ್ರಧಾನ ಸಂಪಾದಕರಿಗೆ ತಿಳಿಸಿದೆ. ಲೇಖಕರಿಂದ ಸೂಕ್ತ ಸಮಜಾಯಿಷಿ ಪಡೆಯುವಂತೆಯೂ ತಿಳಿಸಿದೆ. ಆ ಲೇಖನ ನನ್ನ ಮನಸ್ಸಿಗೂ ನೋವನ್ನುಂಟು ಮಾಡಿದೆ. 'ಬಸವ ಪಥ'ದ ಸಂಪಾದಕ ಮಂಡಳಿಯಲ್ಲಿ ನಾನಿದ್ದೇನೆ, ನಿಜ. ವರ್ಷದಲ್ಲಿ ಒಮ್ಮೆ ಸಂಪಾದಕ ಮಂಡಳಿಯ ಸಭೆ ಕರೆಯುವರು. ಆ ಸಂದರ್ಭದಲ್ಲಿ ಬಂದಿರುವ ಲೇಖನಗಳ ಬಗೆಗೆ ಪ್ರಸ್ತಾಪಿಸುವರು. ಸಂಪಾದಕ ಮಂಡಳಿಯ ಎಲ್ಲ ಸದಸ್ಯರಿಗೂ ಎಲ್ಲ ಲೇಖನಗಳನ್ನು ಪರಾಂಬರಿಸಲು ಸಾಧ್ಯವಾಗುತ್ತಿಲ್ಲ. ಈಗ ನಾನು ಲೇಖನಗಳನ್ನು ಸಂಪಾದಕ ಮಂಡಳಿಯ ಸದಸ್ಯರ ಒಪ್ಪಿಗೆಯಿಲ್ಲದೆ ಪ್ರಕಟಿಸಕೂಡದೆಂದು ಪ್ರಧಾನ ಸಂಪಾದಕರಿಗೆ ತಿಳಿಸಿರುವೆನು. ನನಗೆ ಇಲ್ಲವೆ ಶ್ರೀ ಎಸ್. ಶಿವಣ್ಣನವರಿಗೆ ಲೇಖನಗಳನ್ನು ಓದಲು ಕಳುಹಿಸಿ, ನಮ್ಮ ಒಪ್ಪಿಗೆ ಪಡೆಯಬೇಕೆಂದು ಒತ್ತಾಯಿಸಿರುವೆ.

ಇದು ನಮ್ಮ ಗಮನಕ್ಕೆ ಬರದೆ ಆಗಿರುವ ಅಚಾತುರ್ಯ. ಇನ್ನು ಮುಂದೆ ಆಗದಂತೆ ನಾನು ಸಾಧ್ಯವಾದಷ್ಟು ಎಚ್ಚರವಹಿಸುವೆ.

ನಿಮ್ಮ ರೀತಿಯಲ್ಲಿ ಜಾಗೃತ ವೇದಿಕೆ ಎಲ್ಲಾ ಕಡೆ ಪ್ರಾರಂಭವಾಗಬೇಕು. ಆಗ ಅನ್ಯಾಯವನ್ನು ಇನ್ನಷ್ಟು ತೀವ್ರವಾಗಿ ಪ್ರತಿಭಟಿಸಬಹುದು. ನಿಮ್ಮ ಶ್ರದ್ಧಾ ಹಾಗೂ ನೈಷ್ಠಿಕ ಭಕ್ತಿಗೆ ನನ್ನ ಮೆಚ್ಚುಗೆಯಿದೆ.

ವಂದನೆಗಳು,

ನಿಮ್ಮ

ಎಸ್. ವಿದ್ಯಾಶಂಕರ್.

ಕ್ಷಮಾಪಣೆಯ ಪತ್ರ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿಯವರಲ್ಲಿ

ಶರಣು ಶರಣಾರ್ಥಿಗಳು.

ಮಾತೆಯವರೇ ನನ್ನದೊಂದು ಲೇಖನ 'ಭವಗೆದ್ದ ಭವ್ಯ ಭಗಿನಿ ಅಕ್ಕಮಹಾದೇವಿ' ಬಸವ ಪಥದಲ್ಲಿ ಬಂತು. ನಾನು ಲೇಖನದುದ್ದಕ್ಕೂ ಅಕ್ಕಮಹಾದೇವಿಯ ಹಿರಿಮೆಯನ್ನೇ ಮೆರೆದಿದ್ದೇನೆ. ಆದರೆ ಅದರಲ್ಲಿಯ ಕಿನ್ನರಿ ಬೊಮ್ಮಯ್ಯ ಹಾಗೂ ಅಕ್ಕನ ನಡುವಿನ ಭೇಟಿಯ ಪ್ರಸಂಗ ಹಲವರಿಗೆ ನೋವು ತಂದಿದೆ. ಅದಕ್ಕಾಗಿ ನಾನು ನನ್ನ ಓದುಗರಲ್ಲಿ ಕ್ಷಮೆ ಕೇಳಿದ್ದೇನೆ. ಆದರೆ ಓದುಗರು ನನ್ನ ಲೇಖನ ಪೂರ್ಣ ಓದಬೇಕಾಗಿತ್ತು. ಕಿನ್ನರಯ್ಯ ಅಕ್ಕನ ಮೈತುಂಬ ಮಲ್ಲಿಕಾರ್ಜುನನನ್ನೇ ನೋಡಿ ತನ್ನ ಕಾಮಾಂಧತನಕ್ಕೆ ಪಶ್ಚಾತ್ತಾಪಪಟ್ಟು ಅಕ್ಕನಲ್ಲಿ 'ತಾಯಿ ಕ್ಷಮಿಸೆಂದು' ಕ್ಷಮೆ ಕೇಳುತ್ತಾನೆ. ಇದನ್ನೇ ಓದುಗರು ಗಮನಿಸಿಯೇ ಇಲ್ಲ. ಇದನ್ನು ಗಮನಿಸಿ, ಈ ವಿವಾದವನ್ನು ಇಲಿಗೇ ಬಿಡಿ ಎಂದು ಕೇಳಿಕೊಳ್ಳುವೆ. ಮುಂದಿನ ತಿಂಗಳ ಬಸವ ಪಥ ನೋಡಿರಿ.

ದಿ. 30-7-1992

ಎನ್. ಆರ್. ಪಾಟೀಲ.

ಸಾರ್ಟಿಂಗ್ ಆಫೀಸ್ (ಆರ್. ಎಂ. ಎಸ್)

ಹೊಸಪೇಟೆ, ಜಿಲ್ಲೆ-ಬಳ್ಳಾರಿ.

****

ಮಾತಾಜಿಯವರ ಉತ್ತರ

ಮಾನ್ಯ ಪಾಟೀಲರೇ,

ಓದುಗರು ಲೇಖನವನ್ನು ಪೂರ್ತಿಯಾಗಿ ಓದಿಯೇ ಇದ್ದಾರೆ. ಓದದೆ ಪ್ರತಿಭಟಿಸುವಷ್ಟು ಮುಂಗೋಪಿಗಳಲ್ಲ. ಅಪಕ್ವ ಮತಿಗಳಲ್ಲ. ಯಾವ ಯಾವ ಸನ್ನಿವೇಶದಲ್ಲಿ ಬರೆದಿರಬಹುದು ಎಂಬ ಹಿನ್ನೆಲೆಯನ್ನೇ ಅರಿತುಕೊಳ್ಳದೆ ವಚನಗಳನ್ನು ಬಳಸಿದ್ದೀರಿ. ಲೇಖನದ ತುಂಬ ತಾತ್ತ್ವಿಕ ಪ್ರಮಾದಗಳು ಸಾಕಷ್ಟಿವೆಯಾದರೂ, ಕಿನ್ನರಿ ಬ್ರಹ್ಮಯ್ಯನ ಪ್ರಸಂಗದಲ್ಲಿ ಈ ಪ್ರಮಾದ ಮುಗಿಲುಮುಟ್ಟಿದೆ. ಅಂಥ ಶರಣನೊಬ್ಬನ ಚಿಂತನಶೈಲಿ, ಉನ್ನತ ಮಾನಸಿಕ ಸ್ಥಿತಿ ಹೇಗಿರುತ್ತದೆ ಎಂಬ ಗಂಧವೂ ಇಲ್ಲದೆ ಅವನನ್ನು ಅತ್ಯಾಚಾರಿಯಂತೆ ಚಿತ್ರಿಸಿದ್ದೀರಲ್ಲ, ನಿಮ್ಮ ವಿದ್ವತ್ತಿಗೆ ಏನೆನ್ನಬೇಕು ?

ಅಕ್ಕಮಹಾದೇವಿ ಇನ್ನೂ ಅನುಭವ ಮಂಟಪಕ್ಕೆ ಬಂದಿರದಿದ್ದರೂ, ಆಕೆಯ ಅತ್ಯುನ್ನತ ವ್ಯಕ್ತಿತ್ವವನ್ನು ಅರಿತಿದ್ದ ಧರ್ಮಪಿತ ಬಸವಣ್ಣನವರು, ಅಲ್ಲಮ ಪ್ರಭುದೇವರು ಮುಂತಾದವರು ಆಗಲೇ ಸ್ವಾಗತಿಸಲು ಸಿದ್ಧತೆ ನಡೆಸಿದ್ದರು, ಅನುಭವ

ಮಂಟಪಕ್ಕೆ ಆ ತಾಯಿ ಪ್ರವೇಶಿಸಿದಾಗ ಪ್ರಭುದೇವರು ಒಡ್ಡಿದ ಕಠೋರ ವಾಕ್ ಪರೀಕ್ಷೆ ಪೂರ್ವಯೋಜಿತವೂ, ತೋರಿಕೆಯದೂ ಆಗಿತ್ತು. ಆ ಮಹಿಮಾನ್ವಿತೆ ತನ್ನ ನಿಜ ವ್ಯಕ್ತಿತ್ವ ವನ್ನು ತೋರಿಸಿಕೊಳ್ಳಲು ಒದಗಿಸಿಕೊಟ್ಟ ಒಂದು ಅವಕಾಶವದಾಗಿತ್ತು. ಅಕ್ಕನ ಬಗ್ಗೆ ಎಂಥಾ ಪ್ರಭಾವಳಿ ಮೂಡಿದೆ ಎಂಬುದನ್ನು ಕಿನ್ನರಯ್ಯ ಮೊದಲೇ ಅರಿತಿದ್ದು, ಆ ರೀತಿ ಅಸಭ್ಯವಾಗಿ ದುಡುಕಲು ಸಾಧ್ಯವೆ? ಪರಧನ, ಪರಸತಿಯರನೊಲ್ಲದ ಕಿನ್ನರಯ್ಯ ನಂತಹ ಶರಣರು ಒಬ್ಬ ವೈರಾಗ್ಯನಿಧಿ ಬಂದಾಗ ಹಾಗೆಲ್ಲ ಅನುಚಿತವಾಗಿ ವರ್ತಿಸುವರೆ?

ಅದಕ್ಕೆಂದೇ ಅಕ್ಕಮಹಾದೇವಿ, ಶರಣರನ್ನು ಅರಿಯದೆ ಬರೆಯುವವರ ಬಗ್ಗೆ ಹೀಗೆ ಹೇಳಿದ್ದಾಳೆ :

ಗಗನದ ಗುಣ್ಪ ಚಂದ್ರಮ ಬಲ್ಲುದಲ್ಲದೆ,
ಕಡೆಯಲಿದ್ದಾಡುವ ಹದ್ದು ಬಲ್ಲುದೆ, ಅಯ್ಯಾ ?
ನದಿಯ ಗುಣ್ಪ ತಾವರೆ ಬಲ್ಲುದಲ್ಲದೆ,
ಕಡೆಯಲ್ಲಿದ್ದ ಹೊನ್ನಾವರಿಕೆ ಬಲ್ಲುದೆ ಅಯ್ಯಾ ?
ಪುಷ್ಪದ ಪರಿಮಳವ ತುಂಬಿ ಬಲ್ಲುದಲ್ಲದೆ
ಕಡೆಯಲಿದ್ದಾಡುವ ನೊರಜು ಬಲ್ಲುದೆ ಅಯ್ಯಾ ?
ಚನ್ನಮಲ್ಲಿಕಾರ್ಜುನಯ್ಯ, ನಿಮ್ಮ ಶರಣರ ನಿಲವ ನೀವೆ ಬಲ್ಲಿರಲ್ಲದೆ ಈ
ಕೋಣನ ಮೈಮೇಲಣ ಸೊಳ್ಳೆಗಳೆತ್ತ ಬಲ್ಲವಯ್ಯಾ ?

ಮ. ವ. ೩೦೪

ನಾನು ಬರೆದಿರುವ "ತರಂಗಿಣಿ" ಎಂಬ ಅಕ್ಕಮಹಾದೇವಿಯನ್ನು ಕುರಿತು ಬರೆದ ಕಾದಂಬರಿಯನ್ನು ಓದಿರಿ. ಇನ್ನು ಮುಂದೆ ಶರಣರನ್ನು ಕುರಿತು ಬರೆಯುವಾಗ ಇಂಥ ಪ್ರಮಾದಗಳನ್ನು ಮಾಡಬೇಡಿರಿ.

—ಜಗದ್ಗುರು ಮಾತೆ ಮಹಾದೇವಿ.
ಬಸವ ಧರ್ಮಪೀಠ, ಕೂಡಲ ಸಂಗಮ.

ದೇಹ :

ಹೊಟ್ಟೆಯಲಿ ಜಠರವೆಂಬ ಬಾಯಿಲರಿದ್ದರೆ ।
ಕಿಬ್ಬೊಟ್ಟೆಯಲಿರುವದು ಮೂತ್ರಪಿಂಡೆಂಬ ಫಿಲ್ಟರು ॥
ಎದೆಯಲಿ ಹೃದಯವೆಂಬ ಪಂಪಸೆಟ್ಟಿದ್ದರೆ ।
ತಲೆಯಲ್ಲಿರುವದು ಮಿದುಳೆಂಬ ಕಂಪ್ಯೂಟರು ॥
ಸೋಸಿ ನೋಡಿದೊಡೆ ಈ ದೇಹ ।
ಯಂತ್ರ ತಂತ್ರಗಳ ಸಂಕೀರ್ಣವೆಂದ ॥

—ಕುಮಾರ ಕಕ್ಕಯ್ಯ ಪೋಳ

ರಾಷ್ಟ್ರೀಯ ಬಸವ ದಳ

ಪದಾಧಿಕಾರಿಗಳ ಪ್ರತಿಜ್ಞೆ

ರಾಷ್ಟ್ರೀಯ ಬಸವ ದಳವು ನೈತಿಕ, ರಾಷ್ಟ್ರೀಯ, ಧಾರ್ಮಿಕ ಮೌಲ್ಯಗಳ ತಳಹದಿಯ ಮೇಲೆ ವ್ಯಕ್ತಿ-ಸಮಾಜಗಳನ್ನು ಸಂಸ್ಕರಿಸಬೇಕು, ಸಂಘಟಿಸಬೇಕು ಎಂಬ ಧ್ಯೇಯ ಉಳ್ಳದು. ಹೀಗಾಗಿ ಇದರ ಸದಸ್ಯರು ಕೆಲವೊಂದು ನೀತಿ, ನಡಾವಳಿಕೆ, ನಿಯಮಗಳನ್ನು ಅಳವಡಿಸಿಕೊಳ್ಳುವುದು ಅತ್ಯಗತ್ಯ.

ಬಸವ ತತ್ವಾನುಯಾಯಿ-ಬಸವ ಧರ್ಮಾನುಯಾಯಿ

ಸದಸ್ಯರಲ್ಲಿ ಎರಡು ಬಗೆಯ ವರ್ಗೀಕರಣವನ್ನು ಮಾಡಲಾಗುವುದು. ಜಾತಿ ಮತ ಪಂಥ ಧರ್ಮಗಳ ವ್ಯತ್ಯಾಸವಿಲ್ಲದೆ ಬಂದವರನ್ನೆಲ್ಲ ಆತ್ಮೀಯತೆಯಿಂದ ಬರ ಮಾಡಿಕೊಳ್ಳಬೇಕು. ಇಂದು ಜಾತಿಧರ್ಮಗಳ ಪಿಡುಗಿಗಿಂತಲೂ ದುಶ್ಚಟಗಳು ಅಧಿಕ ವಾಗಿವೆ. ಶ್ರೇಷ್ಠ ಕುಲದವರು ಎಂದು ಬೀಗುವ ಬ್ರಾಹ್ಮಣರು, ಲಿಂಗಾಯತರು ಮುಂತಾದವರೇ ದುಶ್ಚಟಗಳ ದಾಸರಾಗಿ, ಅನಾಚಾರದ ತೌರಾಗಿರಬಹುದು. ಕೀಳು ಕುಲದವರೆಂದು ಜಾತ್ಯಂಧರು ಭಾವಿಸಿರುವವರೇ ಉತ್ತಮ ನಡೆ-ನುಡಿಗಳಿಂದ ಕೂಡಿರುವವರಾಗಿರಬಹುದು. ರಾಷ್ಟ್ರೀಯ ಬಸವ ದಳಗಳವರಿಗೆ ಉತ್ತಮ ಗುಣ-ನಡತೆ ಆಚಾರ ಇರುವವರೆಲ್ಲರೂ ಮಾನ್ಯರು.

ದುಶ್ಚಟ ಉಳ್ಳ ಕೆಲವು ದುರ್ಬಲರು ಬಸವ ಗುರುವಿನ ಜೀವನ ಸಂದೇಶ-ಗಳಿಗೆ ಮಾರುಹೋಗಿ, ಸದಸ್ಯರಾಗಿ ಪ್ರಾರ್ಥನೆಗೆ ಬರುತ್ತೇವೆ ಎಂದರೆ ಅವರನ್ನು ತಿರಸ್ಕರಿಸದೆ, ಪ್ರವೇಶವನ್ನು ನಿರಾಕರಿಸದೆ ಸ್ವಾಗತಿಸಬೇಕು. ಔದಾರ್ಯದಿಂದ, ಮಾನ-ವೀಯತೆಯಿಂದ ದುರ್ಬಲ ಮನಸ್ಸಿನವರನ್ನು ತಿದ್ದಬೇಕು.

ಬಸವ ತತ್ವಾನುಯಾಯಿಗೆ ಹತ್ತು ಸೂತ್ರಗಳ ಪ್ರತಿಜ್ಞಾವಿಧಿ

ಗುರು ಬಸವಣ್ಣನವರಲ್ಲಿ ಅನನ್ಯ ಶ್ರದ್ಧೆಯಿಟ್ಟು ಅವರು ಹೊಂದಿದ್ದ ಧ್ಯೇಯ ಕ್ಕಾಗಿ ದುಡಿಯುವ ಗುರಿ ಹೊಂದಿದವರೆಲ್ಲರೂ ಬಸವ ತತ್ವಾನುಯಾಯಿಗಳು. ಅವರ ನಂಬಿಗೆಗಳು ಕೆಳಗೆ ಸೂಚಿಸಿರುವ ಪ್ರತಿಜ್ಞಾವಿಧಿಯಲ್ಲಿರುತ್ತವೆ. ರಾಷ್ಟ್ರೀಯ ಬಸವ ದಳದ ಧ್ಯೇಯೋದ್ದೇಶವನ್ನು ಸಂಪೂರ್ಣವಾಗಿ ಅರಿತು ಪ್ರತಿಜ್ಞೆಗೆ ಬದ್ಧ-ರಾಗುವವರು ಗಣಸಾಕ್ಷಿಯಾಗಿ ಪ್ರತಿಜ್ಞೆಯನ್ನು ಸ್ವೀಕರಿಸಬೇಕು. ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷರು ಈ ಪ್ರತಿಜ್ಞಾವಿಧಿಯನ್ನು ಬೋಧಿಸಬೇಕು.

ವಿಶ್ವಗುರು ಬಸವಣ್ಣನವರ ಸಾಕ್ಷಿಯಾಗಿ,
ಜಗತ್ಕರ್ತ ಪರಮಾತ್ಮನ ಸಾಕ್ಷಿಯಾಗಿ,
ಸರ್ವ ಶರಣಗಣ ಸಾಕ್ಷಿಯಾಗಿ,

ರಾಷ್ಟ್ರೀಯ ಬಸವ ದಳದ ಸದಸ್ಯನೂ, ಬಸವ ತತ್ತ್ವಾನುಯಾಯಿಯೂ ಆದ ನಾನು ಹೀಗೆ ಪ್ರತಿಜ್ಞೆಯನ್ನು ಸ್ವೀಕರಿಸುತ್ತೇನೆ.

೧. ಸೃಷ್ಟಿಕರ್ತನ ಅಸ್ತಿತ್ವದಲ್ಲಿ ನಂಬಿಕೆ ಇಟ್ಟು, ನಿತ್ಯವೂ ಸ್ಮರಿಸುತ್ತೇನೆ.

೨. ವಿಶ್ವಗುರು ಬಸವಣ್ಣನವರನ್ನು ನನ್ನ ಜ್ಞಾನ ಗುರು, ಮಂತ್ರಪುರುಷ ಎಂದು ನಂಬುತ್ತೇನೆ.

೩. ಬಸವಾದಿ ಪ್ರಮಥರು ಕೊಟ್ಟ ವಚನ ಸಾಹಿತ್ಯವೇ ನನ್ನ ಧರ್ಮ ಸಂಹಿತೆ ಎಂದು ನಂಬಿ, ಶರಣಮಾರ್ಗದಲ್ಲಿ ನಡೆಯುತ್ತೇನೆ.

೪. ವಾರಕ್ಕೊಮ್ಮೆಯಾದರೂ ಸಮುದಾಯ ಪ್ರಾರ್ಥನೆಯಲ್ಲಿ, ಶರಣರ ಸಂಗದಲ್ಲಿ ಭಾಗಿಯಾಗಿ ಧಾರ್ಮಿಕ ಚಿಂತನೆ ಮಾಡುತ್ತೇನೆ.

೫. ಸತ್ಯಶುದ್ಧ ಕಾಯಕದಿಂದ ಧನವನ್ನು ಆರ್ಜಿಸಿ, ದಾಸೋಹದ ಮೂಲಕ ವಿನಿಯೋಗಿಸುತ್ತೇನೆ.

೬. ಮಾಂಸಾಹಾರವನ್ನು ಮಾಡುವುದಿಲ್ಲ.

೭. ಮದ್ಯಪಾನವನ್ನು ಮಾಡುವುದಿಲ್ಲ.

೮. ಕೂಡಲ ಸಂಗಮಕ್ಷೇತ್ರದಲ್ಲಿ ಬಸವ ಕ್ರಾಂತಿ ದಿನದಂದು ನಡೆಯುವ ಶರಣ ಮೇಳದ ಸಮುದಾಯ ಪ್ರಾರ್ಥನೆಯಲ್ಲಿ ತಪ್ಪದೇ ಭಾಗಿಯಾಗಿ ನನ್ನ ಅನುಯಾಯಿತ್ವವನ್ನು ಸ್ಥಿರೀಕರಿಸುತ್ತೇನೆ.

೯. ಧರ್ಮಶ್ರದ್ಧೆಯೊಡನೆ ರಾಷ್ಟ್ರನಿಷ್ಠೆಯನ್ನು ಬೆಳೆಸಿಕೊಳ್ಳುತ್ತೇನೆ.

೧೦. ಧರ್ಮಪಿತ ಬಸವಣ್ಣನವರ ಸಂಕಲ್ಪದಂತೆ ಮರ್ತ್ಯಲೋಕದ ಈ ಕರ್ತನ ಕಮ್ಮಟದಲ್ಲಿ ಜಾತಿವರ್ಣವರ್ಗರಹಿತ, ಧರ್ಮಸಹಿತ ಕಲ್ಯಾಣರಾಜ್ಯ ನಿರ್ಮಾಣಕ್ಕೆ ನಿಷ್ಠೆಯಿಂದ ಪ್ರಯತ್ನಮಾಡುತ್ತೇನೆ.

ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷರು ಹೇಳಿದುದನ್ನು ಪುನಃ ಉಚ್ಚರಿಸುತ್ತಾ ಹೋಗಿ, ಕೊನೆಯಲ್ಲಿ "ಶರಣು ಶರಣಾರ್ಥಿ" ಹೇಳಿ "ಜಯಗುರು ಬಸವೇಶ ಹರಹರ ಮಹಾದೇವ" ಎಂದು ಜಯಘೋಷ ಮಾಡಬೇಕು.

ಬಸವ ಧರ್ಮಾನುಯಾಯಿಯ ದ್ವಾದಶ ಸೂತ್ರಗಳ ಪ್ರತಿಜ್ಞಾ ವಿಧಿ

ತತ್ತ್ವವನ್ನು ಕ್ರಿಯಾರೂಪಕ್ಕೆ ಇಳಿಸಲು ಸಾಧನವಾಗುವುದೇ ಧರ್ಮ. ಕರ್ತನು ನಿರಾಕಾರನು, ನಿರ್ಗುಣನು ಆದುದರಿಂದ ಪೂಜಿಸಲು ಕರ್ತನಿಗೆ ಕೃತಜ್ಞತೆ ಸಲ್ಲಿಸಲು ಒಂದು ಸಾಕಾರ, ಕುರುಹು ಬೇಕೆಂದು ಧರ್ಮಪಿತ ಬಸವಣ್ಣನವರು ವಿಶ್ವದಾಕಾರದಲ್ಲಿ ಇಷ್ಟಲಿಂಗವನ್ನು ರೂಪಿಸಿಕೊಟ್ಟರು. ಗುರು ಬಸವಣ್ಣನವರಲ್ಲಿ ಶ್ರದ್ಧೆಯನ್ನು ಇಡುವುದರ ಜೊತೆಗೆ ಇಷ್ಟಲಿಂಗದಲ್ಲಿ ನಿಷ್ಠೆಯನ್ನು ಇಟ್ಟವನೇ ಧರ್ಮಾನುಯಾಯಿ.

ಧರ್ಮಾನುಯಾಯಿಯು ಮಾಡುವ ಪ್ರತಿಜ್ಞಾವಿಧಿಗಳು ಹೀಗಿರಬೇಕು.

ಧರ್ಮಗುರು ಬಸವಣ್ಣನವರ ಸಾಕ್ಷಿಯಾಗಿ,
ಜಗತ್ಕರ್ತ ಪರಮಾತ್ಮನ ಸಾಕ್ಷಿಯಾಗಿ,
ಸರ್ವ ಶರಣಗಣ ಸಾಕ್ಷಿಯಾಗಿ,

ರಾಷ್ಟ್ರೀಯ ಬಸವ ದಳದ ಸದಸ್ಯನೂ ಬಸವ ಧರ್ಮೀಯನೂ ಆದ ನಾನೂ ಹೀಗೆ ಪ್ರತಿಜ್ಞೆಯನ್ನು ಸ್ವೀಕರಿಸುತ್ತೇನೆ.

೧. ಸೃಷ್ಟಿಕರ್ತನ ಅಸ್ತಿತ್ವದಲ್ಲಿ ನಂಬಿಕೆ ಇಡುತ್ತೇನೆ.

೨. ವಿಶ್ವಗುರು ಬಸವಣ್ಣನವರನ್ನು ನಮ್ಮ ಧರ್ಮಗುರು, ಮಂತ್ರಪುರುಷ ಎಂದು ನಂಬುತ್ತೇನೆ.

೩. ಬಸವಾದಿ ಪ್ರಮಥರು ಕೊಟ್ಟ ವಚನ ಸಾಹಿತ್ಯವೇ ನಮ್ಮ ಧರ್ಮ ಸಂಹಿತೆ ಎಂದು ನಂಬಿ ಶರಣಮಾರ್ಗದಲ್ಲಿ ನಡೆಯುತ್ತೇನೆ.

೪. ವಿಶ್ವದಾಕಾರದಲ್ಲಿರುವ ವಿಶ್ವಾತ್ಮನ ಕುರುಹಾದ ಇಷ್ಟಲಿಂಗವನ್ನು ಧರ್ಮ-ಲಾಂಛನ, ಗಣಲಾಂಛನ, ಎಂದು ನಂಬಿ, ಧರಿಸಿ, ನಿತ್ಯವೂ ಪೂಜಿಸುತ್ತೇನೆ.

೫. ವಾರಕ್ಕೊಮ್ಮೆ ಶರಣರ ಸಂಗದಲ್ಲಿ, ಗಣ ಮೇಳಾಪದಲ್ಲಿ ಭಾಗಿಯಾಗಿ ಸಮುದಾಯ ಪ್ರಾರ್ಥನೆ, ಧರ್ಮ ಚಿಂತನೆ ಮಾಡುತ್ತೇನೆ.

೬. ಸತ್ಯ ಶುದ್ಧ ಕಾಯಕದಿಂದ ಧನವನ್ನು ಆರ್ಜಿಸಿ, ದಾಸೋಹದ ಮೂಲಕ ವಿನಿಯೋಗಿಸುತ್ತೇನೆ.

೭. ಮಾಂಸಾಹಾರವನ್ನು ಮಾಡುವುದಿಲ್ಲ.

೮. ಮದ್ಯಪಾನವನ್ನು ಮಾಡುವುದಿಲ್ಲ.

೯. ಕೂಡಲ ಸಂಗಮ ಕ್ಷೇತ್ರದಲ್ಲಿ ಬಸವ ಕ್ರಾಂತಿ ದಿನದಂದು ನಡೆಯುವ ಶರಣ ಮೇಳದ ಸಮುದಾಯ ಪ್ರಾರ್ಥನೆಯಲ್ಲಿ ತಪ್ಪದೇ ಭಾಗಿಯಾಗಿ ನನ್ನ ಅನುಯಾಯಿತ್ವವನ್ನು ಸ್ಥಿರೀಕರಿಸುತ್ತೇನೆ.

೧೦ ಧರ್ಮಶ್ರದ್ಧೆಯೊಡನೆ ರಾಷ್ಟ್ರನಿಷ್ಠೆಯನ್ನು ಬೆಳೆಸಿಕೊಳ್ಳುತ್ತೇನೆ.

೧೧. ಸ್ವಧರ್ಮೀಯರನ್ನು ಧರ್ಮಬಂಧುಗಳೆಂದು, ಪರಧರ್ಮೀಯರನ್ನು ಸ್ನೇಹಿತರೆಂದು ಆದರಿಸುತ್ತೇನೆ.

೧೨. ಧರ್ಮಪಿತ ಬಸವಣ್ಣನವರ ಸಂಕಲ್ಪದಂತೆ ಮರ್ತ್ಯಲೋಕದ ಈ ಕರ್ತನ ಕಮ್ಮಟದಲ್ಲಿ ಜಾತಿವರ್ಣವರ್ಗರಹಿತ ಧರ್ಮಸಹಿತ ಕಲ್ಯಾಣ ರಾಜ್ಯ ನಿರ್ಮಾಣಕ್ಕೆ ನಿಷ್ಠೆಯಿಂದ ಪ್ರಯತ್ನ ಮಾಡುತ್ತೇನೆ.

ರಾಷ್ಟ್ರೀಯ ಬಸವ ದಳದ ಕಾರ್ಯಾಧ್ಯಕ್ಷರು ಹೇಳಿದುದನ್ನು ಪುನಃ ಉಚ್ಚ

ರಿಸುತ್ತಾ ಹೋಗಿ, ಕೊನೆಯಲ್ಲಿ "ಶರಣು ಶರಣಾರ್ಥಿ" ಹೇಳಿ "ಜಯ ಗುರು ಬಸವೇಶ ಹರಹರ ಮಹಾದೇವ" ಎಂದು ಜಯಘೋಷ ಮಾಡಬೇಕು.

ರಾಷ್ಟ್ರೀಯ ಬಸವ ದಳದ ಘಟಕ ಪ್ರಾರಂಭವಾದಾಗ ಮೊದಲನೆಯ ಸಲ ಪದಾಧಿಕಾರಿಗಳ ಸಭೆ ಸೇರಿದಾಗ ಅವರೆಲ್ಲರೂ, ನಂತರ ದಳಕ್ಕೆ ಹೊಸ ಸದಸ್ಯರು ಸೇರ್ಪಡೆಯಾದಾಗ ಈ ನೂತನ ಸದಸ್ಯರು ಈ ರೀತಿ ಪ್ರತಿಜ್ಞೆಯನ್ನು ಸ್ವೀಕರಿಸ ಬೇಕು. ರಾಷ್ಟ್ರೀಯ ಬಸವ ದಳದ ಆಯಾ ಘಟಕಗಳ ವಾರ್ಷಿಕೋತ್ಸವ ನಡೆದಾಗ ಸಾಮೂಹಿಕವಾಗಿ ಪ್ರತಿಜ್ಞೆಯನ್ನು ಮಾಡುವುದೂ ಅತ್ಯುತ್ತಮ.

ಶರಣ ಬಂಧುಗಳಿಗೆ ಸೂಚನೆ

ಈ ಪ್ರತಿಜ್ಞಾವಿಧಿಗಳಲ್ಲಿ ಮತ್ತೆಯಾವುದಾದರೂ ಅಂಶದ ಸೇರ್ಪಡೆ, ಬದಲಾವಣೆ, ತಿದ್ದುಪಡಿಗಳನ್ನು ಸೂಚಿಸುವುದಾದರೆ ಸೂಚಿಸಬಹುದು.

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.
ಬಸವ ಧರ್ಮದ ಮಹಾಜಗದ್ಗುರು ಪೀಠ
ಮಹಾಮನೆ ಮಹಾಮಠ
ಕೂಡಲ ಸಂಗಮ.-587115
ತಾ- ಹುನಗುಂದ, ಜಿಲ್ಲೆ-ಬಿಜಾಪುರ.

ಷಟ್‌ಸೂತ್ರ ಘೋಷಣೆ :

ರಾಷ್ಟ್ರೀಯ ಬಸವ ದಳಗಳು ವಾರಕ್ಕೊಮ್ಮೆ ಸೇರಿದಾಗ, ಸಾಮೂಹಿಕ ಪ್ರಾರ್ಥನೆಯ ನಂತರ ಅನುಭವ ಗೋಷ್ಠಿಗೆ ಮೊದಲು ಷಟ್‌ಸೂತ್ರಗಳ ಘೋಷಣೆಯನ್ನು ಸಾಮೂಹಿಕವಾಗಿ ಮಾಡಬೇಕು.

ಪರೋಪಕಾರ :

ಪರರಿಗೆ ನೆರಳು ಕೊಡುವ ಮರ ।
ತಾನು ಬಿಸಿಲಲ್ಲಿಯೇ ನಿಲ್ಲುವದು ॥
ಪರರಿಗೆ ಬೆಳಕು ನೀಡುವ ದೀಪ ।
ತನ್ನನ್ನೇ ತಾನು ಸುಟ್ಟುಕೊಳ್ಳುವದು ॥
ಊರಿಗೆ ಬೇಕಾದ ಪರೋಪಕಾರಿ ಮನುಷ್ಯ ।
ತನ್ನ ಮನೆಯಲ್ಲಿಯೇ ಬೇಡಾಗುವನೆಂದ ॥

—ಕುಮಾರ ಕಕ್ಕಯ್ಯ ಪೋಳ

ವಿಶ್ವಧರ್ಮ ಪ್ರವಚನ

ಭಾಗ—2, ಅಧ್ಯಾಯ—20

—ಮಾತಾಜಿ

(1992 ರ ಮಾರ್ಚ್ - ಏಪ್ರಿಲ್ ಸಂಚಿಕೆಯಿಂದ ಮುಂದುವರಿದುದು)

ಅ. ದುರ್ಗಾಷ್ಟಮಿ, ಮಹಾನವಮಿ, ಘಟ್ಟ ಕೂಡಿಸುವುದು ಮುಂತಾದವು ಶರಣ ನಿಗಿಲ್ಲ, ಲಿಂಗಾಯತನು ಆಚರಿಸಿದರೆ ಅವನನ್ನು ಸಮಾಜದಿಂದ ಹೊರಗಿಡ ಬೇಕು, ಏಕೆಂದರೆ ಗಣಪದವಿ ತಪ್ಪುವುದು. ದೇವರಿಗೂ ಬೇಡವಾಗುವನು, ಜಂಗಮಕ್ಕೂ (ಸಮಾಜಕ್ಕೆ, ಧಾರ್ಮಿಕ ಮುಖಂಡರಿಗೆ) ಬೇಡವಾಗುವನು. ಏಕೆಂದರೆ ಇವನು ಆಳಾಗಿರುವುದು ಕರ್ತನಿಗೆ; ಓಲೈಸುವುದು ಕರ್ತನಲ್ಲದ ದೈವಂಗಳನ್ನು. ಗಂಡನ ಆಶ್ರಯದಲ್ಲಿದ್ದು ಪರಪುರುಷನ ಸ್ನೇಹ ಮಾಡುವ ಭ್ರಷ್ಟ ಸ್ತ್ರೀಯಂತೆ ಈ ಭಕ್ತ. ಅದಕ್ಕಾಗಿ ಶರಣ-ಕುಟುಂಬ ಅವನನ್ನು ಬಹಿಷ್ಕರಿಸುತ್ತದೆ.

4. **ಪ್ರಸಾದ ಸ್ವಾಯತ :**

ಒಬ್ಬ ವ್ಯಕ್ತಿ ನಿಜಾನುಯಾಯಿಯಾಗುವುದು ಬಂದವನನ್ನು ಸ್ವಾಗತಿಸಿ, ಆದರಿಸಿ, ಇಂಬಿಟ್ಟುಕೊಂಡಾಗ ಮಾತ್ರ. ಈ ಇಂಬಿಟ್ಟುಕೊಳ್ಳುವ ಕ್ರಿಯೆ ಸಹ ಭೋಜನ. ಈ ಕಾರ್ಯದಲ್ಲಿ ಸಾಕ್ಷಿಯಾಗುವವರು ಗುರು-ಜಂಗಮರು. ಒಬ್ಬ ವ್ಯಕ್ತಿ ದೀಕ್ಷೆ ಹೊಂದಿದಾಗ ಇವರು ಅವನ ಮನೆಗಾದರೂ ಹೋಗುವರು ಅಥವಾ ಇನ್ನಿತರ ಸಮಾಜ ಬಂಧುಗಳನ್ನು ಒಂದೆಡೆ ಸೇರಿಸಿ, ಆತನಿಗೆ '**ಕರುಣ ಪ್ರಸಾದ**'ವನ್ನು ಕೊಡುವರು ಮತ್ತು ಆಗಂತುಕನನ್ನು ಜೊತೆಗಿರಿಸಿಕೊಂಡು ಪ್ರಸಾದ ಸ್ವೀಕಾರ ಮಾಡುವರು. ಅಲ್ಲಿ ಅವನು ಸಮಾಜದಲ್ಲಿ ಅಡಕವಾಗುವನು.

ಸಾಮರಸ್ಯವನ್ನು ಸಾಧಿಸುವ ಮತ್ತೊಂದು ಕ್ರಿಯೆ ಶರಣರ ಸಂಗ, ಅನುಭವ ಗೋಷ್ಠಿ. ಇದು ಸತತವಾಗಿ ನಡೆಯಬೇಕು. ದಿನದಲ್ಲಿ ಒಂದು ನಿಮಿಷ ಕಾಲವಾದರೂ ಶರಣರ ಸಂಗದಲ್ಲಿರಬೇಕು ಎನ್ನುತ್ತಾರೆ ಧರ್ಮಪಿತರು.

ಲಿಂಗಾಂಗಿಗಳಲ್ಲದವರ ಶರಣರ ಸಂಗವಿಲ್ಲದವರ
ಕಂಡಡೆ ನಾಚುವೆ.
ಅವರ ನುಡಿ ಎನಗೆ ಸಮನಿಸದಯ್ಯ,
ಕೂಡಲ ಸಂಗಮದೇವಾ, ನೀನು ಅಲ್ಲಿಲ್ಲದ ಕಾರಣ.
(ಬ. ಷ. ವ. 453)

ಲಿಂಗಾಯತನಾಗುವುದು ಎಷ್ಟು ಮುಖ್ಯವೋ ಗಣಾಯತನಾಗುವುದೂ ಅಷ್ಟೇ ಮುಖ್ಯ. ಅಖಂಡ ಸಮಾಜವನ್ನು ಕಟ್ಟುವುದಕ್ಕೆ ನೆರವಾಗುವ ಪವಿತ್ರ ಸ್ಥಾನವೇ ಅನುಭವ ಮಂಟಪ.

ಶರಣರ ಸಂಗವು ವ್ಯಕ್ತಿಯನ್ನು ಪರಿಪೂರ್ಣಗೊಳಿಸಲು ಅತ್ಯಗತ್ಯ. ಶಸ್ತ್ರ ಚಿಕಿತ್ಸೆಗೆ ವೈದ್ಯರು ಪೂರ್ವಸಿದ್ಧತೆ ಮಾಡಿಕೊಳ್ಳುವರು. ರಕ್ತದೊತ್ತಡ, ರಕ್ತದೊಳಗಣ ಸಕ್ಕರೆ ಎಲ್ಲ ನಿಯಂತ್ರಣದಲ್ಲಿರುವುದನ್ನು ಗಮನಿಸಿ, ಶಸ್ತ್ರಚಿಕಿತ್ಸೆ ಮಾಡುವರು. ಅದು ಯಶಸ್ವಿಯಾದರೂ ಶಸ್ತ್ರಚಿಕಿತ್ಸಾನಂತರದ ಉಸ್ತುವಾರಿ, ಕಾಳಜಿ, ಚಿಕಿತ್ಸೆ ಮುಖ್ಯ. ಇಲ್ಲವಾದರೆ ರೋಗವು ಮರುಕಳಿಸಬಹುದು, ಉಲ್ಬಣವಾಗಬಹುದು. ಮತ್ತು ಏನಾದರೂ ಸೋಂಕು ತಗುಲಿ, ನಂಜಾಗಬಹುದು.

ವಿಶ್ವಗುರು ಬಸವಣ್ಣನವರು ಅಸಂಖ್ಯಾತ ಜನರಿಗೆ ದೀಕ್ಷೆಯನ್ನು ನೀಡಿದರು. ಶಸ್ತ್ರಚಿಕಿತ್ಸಾ ನಂತರ ಆರೈಕೆಯನ್ನು ಮಠಾಧಿಕಾರಿಗಳಿಗೆ ಬಿಟ್ಟುಕೊಟ್ಟರು. ಆಪರೇಷನ್ ಯಶಸ್ವಿಯಾದರೂ ಮಠಾಧಿಕಾರಿಗಳ ಉದಾಸೀನತೆಯಿಂದ ಪೋಸ್ಟ್ ಆಪರೇಷನ್ ಟ್ರೀಟ್‌ಮೆಂಟ್ ಸರಿಯಾಗದೆ, ರೋಗ ವಾಸಿಯಾಗಲಿಲ್ಲ; ಉಲ್ಬಣಗೊಂಡಿತು. ಅದೇ ಸಮಯದಲ್ಲೇ ಪಂಚಾಚಾರ್ಯವಾದಿಗಳ ರೋಗಸೋಂಕು ತಗುಲಿ, ಜಾತೀಯತೆಯ ನಂಜು ಏರಿ ಬಿಟ್ಟಿದೆ. ಎಲ್ಲ ಪ್ರಗತಿಪರ ಆಂದೋಲನಗಳು ಪುನಃ ಪುರೋಹಿತಶಾಹಿ, ರಾಜಶಾಹಿ, ವ್ಯಾಪಾರಿಗಳ ಕೈಗೆ ಸಿಕ್ಕಿ ಭಾರತ ದೇಶದಲ್ಲಿ ತಮ್ಮ ಮೂಲಸತ್ವ ಕಳೆದುಕೊಳ್ಳುವಂತೆ, ಶರಣರ ತತ್ತ್ವಗಳೂ ನಿರ್ಜೀವಗೊಂಡವು. ಕರಿಕೆ ಭೂಮಿಯಲ್ಲಿ ಬಿತ್ತಲ್ಪಟ್ಟ ಬೀಜಗಳಂತೆ ವಚನ ಸಾಹಿತ್ಯ ತನ್ನ ಅನುಯಾಯಿಗಳ ಮೇಲೆ ಮಾಡಬೇಕಾದ ಪರಿಣಾಮ ಮಾಡಲಿಲ್ಲ.

ಪ್ಲೇಟೋನ ಅಕ್ಯಾಡಮಿ, ಅಕ್ಬರನ ದಿನ್-ಇ-ಲಾಹಿ

ವಿಶ್ವಗುರು ಬಸವಣ್ಣನವರು ರೂಪಿಸಿದ ಅನುಭವ ಮಂಟಪವನ್ನು ನೆನಪಿಗೆ ತರುವ ಇನ್ನಿತರ ಸಂಸ್ಥೆಗಳೆಂದರೆ ಪ್ಲೇಟೋನ ಅಕ್ಯಾಡಮಿ, ಮೊಗಲ್ ಚಕ್ರವರ್ತಿ ಅಕ್ಬರ್ ರೂಪಿಸಿದ ದಿನ್-ಇ-ಲಾಹಿ ಮತ್ತು ಆಧುನಿಕ ಪಾರ್ಲಿಮೆಂಟ್. ಆದರೆ ಅನುಭವ ಮಂಟಪ ಇವೆಲ್ಲಕ್ಕಿಂತಲೂ ಬೇರೆಯೆ.

ಪ್ಲೇಟೋನ ರಿಪಬ್ಲಿಕ್ ಗ್ರಂಥವನ್ನು ಓದಿದಾಗ ಬಗೆಬಗೆಯ ವಿಷಯಗಳ ಚರ್ಚೆ ಅಲ್ಲಿ ನಡೆಯುತ್ತಿದ್ದುದು ನಮಗೆ ಗೋಚರವಾಗುತ್ತದೆ. ಆದರೆ ಅಕ್ಯಾಡಮಿಯಲ್ಲಿ ಸಮಾವೇಶವಾಗುತ್ತಿದ್ದವರು ಕೇವಲ ತಾರ್ಕಿಕರು *(Logicians)* ಮತ್ತು ತತ್ತ್ವಜ್ಞಾನಿಗಳು. ಅನುಭವ ಮಂಟಪದಲ್ಲಿ ಸಮಾವೇಶವಾಗುತ್ತಿದ್ದವರು ಅನುಭಾವಿಗಳು ಮತ್ತು ದಾರ್ಶನಿಕರು. ಅಕ್ಯಾಡಮಿಯ ಚರ್ಚೆಯ ಉದ್ದೇಶ ಕೇವಲ ಜ್ಞಾನ. ಅನುಭವ ಮಂಟಪದ ಉದ್ದೇಶ ಅರಿವನ್ನು ಆಚರಣೆಗೆ ಇಳಿಸುವುದು, ಅಲ್ಲಿ ಚರ್ಚೆಯು

ಬೌದ್ಧಿಕ ಕುಸ್ತಿ, ಇಲ್ಲಿ ಅಂತರಂಗ-ಬಹಿರಂಗ ಶುದ್ಧಿಗೆ ಸಾಧನ. ಅಲ್ಲಿ ತಾರ್ಕಿಕ, ಕೂದಲು ಸೀಳುವ ವಿಶ್ಲೇಷಣೆ, ಇಲ್ಲಿ ತತ್ತ್ವವನ್ನು ತಿಳಿದು ಆನಂದಿಸುವ ಪ್ರಯತ್ನ. ಅಲ್ಲಿ ಸಮಸ್ಯೆ ತಿಳಿಯಲು ಚರ್ಚೆ; ಇಲ್ಲಿ ಸಮಸ್ಯೆಗೆ ಪರಿಹಾರ ನೀಡಲು ಚರ್ಚೆ. ಅರಿಸ್ಟಾಟಲ್, ಸೋಕ್ರತೀಸ್, ಪ್ಲೇಟೋ ಮುಂತಾದವರು ಬೇರೆ ಬೇರೆ ಪರಿಕಲ್ಪನೆ *(Concept)* ಗಳನ್ನು ತಿಳಿಯಲು ಚರ್ಚಿಸಿ ಪುಸ್ತಕ ಬರೆದು ಹೋದರು. ಶರಣರು ಒಂದು ಆದರ್ಶ ಸಮಾಜ ಕಟ್ಟಿ, ಸಾಹಿತ್ಯವನ್ನು ಬಿಟ್ಟು ಹೋದರು.

ಅಕ್ಬರನ ದಿನ್-ಇ-ಲಾಹಿಯಂತೂ ಇಂದಿನ ಸರ್ವಧರ್ಮಸಮ್ಮೇಳನಗಳಂತೆ. ಆಯಾ ಧರ್ಮಗಳ ಪಂಡಿತರು ತಮ್ಮ ತಮ್ಮ ಧರ್ಮದ ಬಗ್ಗೆ ಹೇಳುವರು; ಇನ್ನಿತರರು ಕೇಳುವರು.

ಪ್ರಜಾಪ್ರಭುತ್ವದ ಜೀವಾಳ ಪಾರ್ಲಿಮೆಂಟು; ಇದರ ಜೀವಾಳ ವಿಚಾರ, ವಾಕ್, ಆಚಾರ ಸ್ವಾತಂತ್ರ್ಯ. ಸಮುದಾಯಿಕ ಚಿಂತನೆ ಲೋಕಸಭೆಯ ವಿಶೇಷ. ಈ ಎರಡೂ ಅಂಶಗಳಲ್ಲಿ ಅನುಭವ ಮಂಟಪ ಲೋಕಸಭೆಯನ್ನು ಹೋಲುತ್ತದೆ. ಪ್ರತಿಯೊಬ್ಬ ಶರಣ ಸದಸ್ಯನಿಗೂ ವಿಚಾರ ಸ್ವಾತಂತ್ರ್ಯವಿತ್ತು; ತನಗೆ ಸರಿಕಂಡುದನ್ನು ಪ್ರತಿಪಾದಿಸುವ ವಾಕ್ ಸ್ವಾತಂತ್ರ್ಯವಿತ್ತು ಮತ್ತು ತನಗೆ ಸಮ್ಮತವಾದ ಆಚಾರವನ್ನು ಅಳವಡಿಸಿಕೊಳ್ಳಲವಕಾಶವಿದ್ದಿತು. ಶರಣರು ಧಾರ್ಮಿಕ, ಸಾಮಾಜಿಕ, ಆರ್ಥಿಕ ಸಮಸ್ಯೆಗಳೆಲ್ಲವನ್ನು ಮುಕ್ತಮನದಿಂದ ಚರ್ಚಿಸುತ್ತಿದ್ದರು. ಆದರೆ ಲೋಕಸಭಾ ಸದಸ್ಯರಿಗೆ ಭಿನ್ನವೆಂಬಂತೆ, ತಾವು ನಂಬಿದ್ದನ್ನು; ಆಡಿದ್ದನ್ನು ಬದುಕಿನಲ್ಲಿ ಅಳವಡಿಸಿಕೊಂಡಿದ್ದರು; ಸಚ್ಚಾರಿತ್ರವಂತರಾಗಿದ್ದರು, ಉತ್ತಮ ನಡೆ-ನುಡಿಗಳನ್ನು ಸಂಗಮಿಸಿಕೊಂಡು, ಆತ್ಮಾನುಭವಿಗಳಾಗಿದ್ದರು, ದಾರ್ಶನಿಕರಾಗಿದ್ದರು. ಹೀಗಾಗಿ ಅನುಭವ ಮಂಟಪವು ಜಗತ್ತಿನ ಮೊಟ್ಟ ಮೊದಲ ಪಾರ್ಲಿಮೆಂಟ್ ಆಗಿತ್ತು ಎಂದರೆ ಉತ್ಪ್ರೇಕ್ಷೆಯಲ್ಲ.

ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅನುಭವ ಮಂಟಪವನ್ನು ವಿಶ್ವಸಂಸ್ಥೆ *(U. N. O.)* ಗೂ ಹೋಲಿಸಬಹುದು. ಲೋಕಸಭೆ ತನ್ನ ದೇಶದ ಸಮಸ್ಯೆ, ಆಗುಹೋಗುಗಳನ್ನು ಕುರಿತು ಚಿಂತನೆ ಮಾಡಿದರೆ ವಿಶ್ವರಾಷ್ಟ್ರ ಸಂಸ್ಥೆ ಮಾನವ ಜನಾಂಗದ ಆಗುಹೋಗು, ಸಮಸ್ಯೆಗಳನ್ನು ಚಿಂತಿಸುತ್ತದೆ. ಹಾಗೆ ಅನುಭವ ಮಂಟಪದ ಚರ್ಚೆ ಒಂದು ಜಾತಿ ಒಂದು ಮತ ಒಂದು ಪಂಥಕ್ಕೆ ಸೀಮಿತವಾಗಿ ಸಾಗದೆ ಮಾನವ ಜನಾಂಗದ ಸಮಸ್ಯೆಗಳನ್ನು ಕುರಿತು. ಚಿಂತಿಸಿದುದನ್ನು ಶೂನ್ಯ ಸಂಪಾದನೆಯಲ್ಲಿ ಕಾಣುತ್ತೇವೆ.

ಅನುಭವ ಮಂಟಪವು ಅರ್ಥಾತ್ ಬಸವ ತತ್ತ್ವವು ಸಮಾನತೆಯನ್ನು ಬೋಧಿಸಿತು. ಸಮಾಜವಾದಿ ಸಮಾಜರಚನೆಗೆ ನಾಂದಿ ಹಾಡಿತು. ಅನೇಕರು ಈ ಸಮಾಜವಾದದಲ್ಲಿ ಕಮ್ಯುನಿಸರಿಂದ ಹೋಲಿಕೆಯನ್ನು ಕಂಡರೂ ಮೂಲಭೂತ ವ್ಯತ್ಯಾಸವಿದೆ.

ಮಾರ್ಕ್ಸ್‌ನ ಸಾಮ್ಯವಾದವು ಭೌತಿಕವಾದದ ತಳಹದಿಯ ಮೇಲೆ ನಿಂತಿದ್ದರೆ, ಬಸವಣ್ಣನವರ ಸಮತಾವಾದವು ಚಿತ್‌ಪ್ರಧಾನವಾದ *(Idealism)* ಮೇಲೆ ನಿಂತಿದೆ. ಮಾರ್ಕ್ಸ್‌ವಾದದಲ್ಲಿ ಜಡಶಕ್ತಿಯು *(Material Energy)* ಈ ಸೃಷ್ಟಿಗೆ ಆದಿ ಕಾರಣವಾಗಿದ್ದರೆ ಬಸವ ತತ್ತ್ವದಲ್ಲಿ ಚೈತನ್ಯ ಶಕ್ತಿ (*Spiritual Energy*-ಪರಮಾತ್ಮ ತತ್ತ್ವವು)ಯು ಆದಿ ಕಾರಣವಾಗಿರುತ್ತದೆ. ಮಾರ್ಕ್ಸ್‌ವಾದದಲ್ಲಿ ಸಾಮಾಜಿಕ ಪ್ರಜ್ಞೆಯೇ ಸಮತಾದೃಷ್ಟಿಗೆ ಪ್ರೇರಕ ಶಕ್ತಿಯಾದರೆ ಬಸವವಾದದಲ್ಲಿ ಶಿವಪ್ರಜ್ಞೆ (***Divine Consciousness***) ಸಮತಾ ದೃಷ್ಟಿಗೆ ಪ್ರೇರಣೆ ನೀಡುತ್ತದೆ. ಏಕೆ ಮನುಷ್ಯ ಒಳ್ಳೆಯವನಾಗಿರಬೇಕು ? ಒಳ್ಳೆಯದನ್ನು ಮಾಡಬೇಕು ? ತನ್ನಂತೆ ಇನ್ನೊಬ್ಬನಿಗೂ ಸುಖ-ದುಃಖವಿರುತ್ತದೆ. ಆದ್ದರಿಂದ ಎಂದು ಸಾಮ್ಯವಾದ ಅಂದರೆ, ತನ್ನಂತೆ ಸುಖ-ದುಃಖ ಇರುವುದು ಮಾತ್ರವಲ್ಲ ಪ್ರತಿಯೊಂದು ಜೀವವೂ ಶಿವಾಂಶಿಕ ಹಾಗಿರುತ್ತದೆ, ದೇವರು ಭಕ್ತ ದೇಹಿಕ. ಆದ್ದರಿಂದ ದೇವರನ್ನು ನೋಯಿಸಬಾರದು ಎನ್ನುತ್ತದೆ ಬಸವಾಯಿಸಂ, ಮಾರ್ಕ್ಸ್‌ವಾದದಲ್ಲಿ ಧ್ಯೇಯ ಮುಖ್ಯ. ಸಾಧನೆ ಹಿಂಸಾತ್ಮಕ ವಾಗಿದ್ದರೂ ಪರವಾಗಿಲ್ಲ. ಬಸವ ತತ್ತ್ವದಲ್ಲಿ ಧ್ಯೇಯುವಷ್ಟೇ ಚನ್ನಾಗಿದ್ದರೆ ಸಾಲದು, ಸಾಧನವೂ ಚೆನ್ನಾಗಿರಬೇಕು. ಆದ್ದರಿಂದ ಇದು ಹೃದಯ ಪರಿವರ್ತನೆಗೆ ಮಹತ್ವ ನೀಡುತ್ತದೆ. ಮಾರ್ಕ್ಸ್‌ವಾದವು ಶರೀರ ಸುಖಕ್ಕೆ, ಆರಾಮ ಜೀವನಕ್ಕೆ ಮಹತ್ವ ನೀಡಿದರೆ ಬಸವ ತತ್ತ್ವವು ಶರೀರ-ಬುದ್ಧಿ (ಮನ)-ಆತ್ಮ ಮೂರನ್ನು ಒಪ್ಪಿ ಸುಖ-ಸಂತೋಷ-ಆನಂದ ಮೂರಕ್ಕೂ ಸ್ಥಾನ ನೀಡುತ್ತದೆ. ಮಾರ್ಕ್ಸ್‌ವಾದವು ಸಮೃದ್ಧ ರಾಷ್ಟ್ರಕ್ಕೆ ಮಹತ್ವ ನೀಡಿದರೆ, ಬಸವತತ್ತ್ವವು ಸಮೃದ್ಧಿ, ಸಂತೃಪ್ತಿ, ಸುಯಿಧಾನ ಮೂರಕ್ಕೂ ಸ್ಥಾನವನ್ನು ನೀಡುತ್ತದೆ.

ಮಾರ್ಕ್ಸ್‌ವಾದೀ ಸಮಾಜದಲ್ಲಿ ಬಂದೂಕಿನ ತುದಿಗೆ ಹೆದರಿ ಕಾಮ್ರೇಡನು ಅನಿವಾರ್ಯವಾದ ಸರಳ ವ್ರತವನ್ನು, ಒಳ್ಳೆಯತನವನ್ನು ಅಳವಡಿಸಿಕೊಂಡರೆ, ಬಸವ ವಾದಿ ಸಮಾಜದಲ್ಲಿ ಅಂತರಾತ್ಮನಿಗೆ, ಪರಮಾತ್ಮನಿಗೆ ಹೆದರಿ ಶರಣನು ಸ್ವಯಂ ಪ್ರೇರಣೆಯ ಸರಳವ್ರತವನ್ನು, ಒಳ್ಳೆಯತನವನ್ನು ಅಳವಡಿಸಿಕೊಳ್ಳುವನು. ಸಮಷ್ಟಿ ಜೀವನ ವನ್ನು ಸಾಮ್ಯವಾದಿಯು ಒತ್ತಾಯದಿಂದ ಅಳವಡಿಸಿಕೊಂಡರೆ, ಸಮಷ್ಟಿ ಜೀವನವನ್ನು ಶರಣನು ಸ್ವಯಂ ಇಚ್ಛೆಯಿಂದ ಅಳವಡಿಸಿಕೊಳ್ಳುವನು. ತನ್ನ ದುಡಿಮೆಯ ಪ್ರತಿಫಲ ವನ್ನು ಅನಿವಾರ್ಯವಾಗಿ ಸ್ಟೇಟ್‌ಗೆ ಸಾಮ್ಯವಾದಿಯು ಸಲ್ಲಿಸಿದರೆ, ಶರಣನು ಸಂತೋಷ ದಿಂದಲೇ ಶಿವನ ಸೊಮ್ಮನ್ನು ಶಿವನಿಗೆ ಸಲ್ಲಿಸುವನು. ಹೀಗೆ ಭೌತಿಕ ವಾದದ ತಳಹದಿಯ ಮೇಲೆ ನಿಂತ ಸಾಮ್ಯವಾದ, ಚಿತ್ ಪ್ರಧಾನ ವಾದದ ಮೇಲೆ ನಿಂತ ಸಮತಾ ವಾದಗಳಲ್ಲಿ ಹೋಲಿಕೆ-ಭಿನ್ನತೆ ಎರಡೂ ಕಂಡು ಬರುವವು. ಒಂದರಲ್ಲಿ ಅನ್ಯರು ಹೇರಿದ ಕಟ್ಟುಪಾಡು ಇದ್ದರೆ ಇನ್ನೊಂದರಲ್ಲಿ ತಾನೇ ವಿಧಿಸಿಕೊಂಡ ನೇಮವಿರುತ್ತದೆ.

ಅನುಭವ ಮಂಟಪ ಜಗತ್ತಿಗೇ ಮಾದರಿಯಾಗಿ ನಿಲ್ಲುವ ಒಂದು ಶರಣ ಸಮಾಜವನ್ನು ರಚಿಸಿ ತೋರಿಸಿತು. ಹೀಗೆ ವಿಶ್ವಗುರು ಬಸವಣ್ಣನವರು ತಮ್ಮ ಹೃನ್ಮನಬುದ್ಧಿಗಳಲ್ಲಿ ರೂಪುಗೊಂಡ ಆಲೋಚನಾ ಸರಣಿಗೆ ಒಂದು ಕ್ರಿಯಾತ್ಮಕ ಮತ್ತು ಸಾರ್ವತ್ರಿಕ ಸ್ವರೂಪ ವನ್ನು ಕೊಡಬೇಕು ಎಂಬ ಘನ ಉದ್ದೇಶದಿಂದ ಅನುಭವ ಮಂಟಪವೆಂಬ ಪ್ರಯೋಗ ಶೀಲ ಅಧ್ಯಾತ್ಮ ವಿಶ್ವವಿದ್ಯಾಲಯವನ್ನು ಕಟ್ಟಿದರು.

೧. ಇಂದಿನ ವಿಶ್ವವಿದ್ಯಾಲಯಗಳಂತೆ ಅನುಭವ ಮಂಟಪವು ಕೇವಲ ಉಪಜೀವನದ ವಿದ್ಯೆಯನ್ನು ಕೊಡುವ ಲೌಕಿಕ ಸಂಸ್ಥೆಯಾಗದೆ, ಜೀವನದ ವಿದ್ಯೆಯನ್ನು ಕಲಿಸುವ ವಿನೂತನ ಸಂಸ್ಥೆಯಾಯಿತು.

೨. ಇಂದಿನ ವಿಶ್ವವಿದ್ಯಾಲಯಗಳಂತೆ ಕೇವಲ ಬುದ್ಧಿಯನ್ನು ಬೆಳೆಸುವ ಒಂದು ಕಾರ್ಖಾನೆ ಕಾರ್ಯಾಗಾರವಾಗದೆ ಭಾವ-ಬುದ್ಧಿಗಳನ್ನು ಸಮತೋಲನಿಕವಾಗಿ ಬೆಳೆಸುವ ಕಮ್ಮಟ-ವಾಯಿತು.

೩. ಇಂದಿನ ವಿದ್ಯಾಲಯಗಳು ದೇಹ ಪರಿಶ್ರಮಕ್ಕೆ ಕಾಸಿನ ಬೆಲೆಯನ್ನೂ ಕೊಡದೆ, ಸುಖ ಜೀವನಕ್ಕೆ ಹೆದ್ದಾರಿಯಾಗುವ ಸರಕಾರಿ ನೌಕರಿಗಳನ್ನು ಬೆನ್ನುಹತ್ತುವ ಪ್ರವೃತ್ತಿ ಬೆಳೆಸಿದರೆ, ಅಂದಿನ ಅನುಭವ ಮಂಟಪ ವೃತ್ತಿಗೌರವ-ವೃತ್ತಿ ದೈವತ್ವಗ-ಗಳನ್ನು ಪ್ರತಿಪಾದಿಸಿ, ಸ್ವಾವಲಂಬಿ ಕಾಯಕಗಳನ್ನು ಶರಣರು ಕೈಗೊಳ್ಳುವಂತೆ ಪ್ರೇರೇಪಿಸಿತು. 'ಕಾಯ' ಪದ ಜನ್ಯವಾದ ಕಾಯಕವು ಮೂಲವಾಗಿ ಸಂಸ್ಕೃತ ಪದ-ವಾದರೂ ಅಲ್ಲಿ ಇಲ್ಲದ ವಿಶೇಷತೆಯನ್ನು ಕನ್ನಡ ಭಾಷೆಯಲ್ಲಿ ತುಂಬಿಕೊಂಡುದು ಗುರು ಬಸವಣ್ಣನವರು ಮತ್ತು ಅನುಭವ ಮಂಟಪದ ಮೂಲಕ.

೪. ಇಂದಿನ ವಿಶ್ವವಿದ್ಯಾಲಯಗಳು ತನು-ಮನ-ಆತ್ಮ ಈ ಮೂರು ಘಟಕಗಳಲ್ಲಿ 'ಮನ'ಕ್ಕೆ ಅರ್ಥಾತ್ ಬುದ್ಧಿಗೆ ಸಂಸ್ಕಾರಕೊಟ್ಟರೆ ಅನುಭವ ಮಂಟಪವು ಮೂರೂ ಘಟಕಗಳಿಗೆ ಸಂಸ್ಕಾರ ಕೊಡಲು ಅರ್ಪಣೆ-ಅನುಭಾವ-ಅರ್ಚನೆಗಳನ್ನು ಬೋಧಿಸಿತು,

ಅರ್ಪಣೆ : ಈ ಆಚರಣೆಯು ತನ್ನಲ್ಲಿ 3 ಅಂಶಗಳನ್ನು ಅಂತರ್ಗತಗೊಳಿಸಿ-ಕೊಂಡಿದೆ. ಅವೇ ಕಾಯಕ-ದಾಸೋಹ-ಪ್ರಸಾದ. ಶರೀರವು ಆತ್ಮಮೂಲ್ಯವಾದ ಸಾಧನ. ಇದರ ರಕ್ಷಣೆಗೆ ಅನ್ನ ಬೇಕು.ಅನ್ನದ ಸಂಪಾದನೆಗೆ ಅರ್ಥಬೇಕು.ಈ ಅರ್ಥ-ವನ್ನು ಗಳಿಸುವ ಮಾರ್ಗವೇ ಕಾಯಕ, ಪ್ರಾಮಾಣಿಕ ಉದ್ಯೋಗ. ಹೀಗೆ ಗಳಿಸಿದ ಅರ್ಥವನ್ನು ತನಗೆ ಅಗತ್ಯವಿದ್ದಷ್ಟು ಬಳಸಿಕೊಂಡು, ದಾಸೋಹದ ಮುಖಾಂತರ ಸಮಷ್ಟಿಗೆ ಅರ್ಥಾತ್ ಜಂಗಮಕ್ಕೆ ಸಲ್ಲಿಸಬೇಕು. ಆಗ ಸ್ವೀಕರಿಸುವುದು ಪ್ರಸಾದ. ಕಾಯಕ ದಿಂದ ಗಳಿಸಿ, ದಾಸೋಹದ ಮೂಲಕ ವಿನಿಯೋಗಿಸಿ, ಪ್ರಸಾದವನ್ನು ಸ್ವೀಕರಿಸು

ವುದೇ ಅರ್ಪಣೆ. ಈ ತತ್ತ್ವದಿಂದ ವ್ಯಕ್ತಿಯು ಬದುಕುವನು, ಸಮಾಜವನ್ನು ಸುಸ್ಥಿತಿಯಲ್ಲಿ ಇಡುವನು. ಹೀಗೆ ಕಾಯಕ ಸಮಷ್ಟಿಯುದ್ಧಾರದ ಸೂತ್ರ.

ಅನುಭಾವ : ಮನುಷ್ಯನಲ್ಲಿರುವುದು ಶರೀರ ಒಂದೇ ಅಲ್ಲ; ಇದಕ್ಕಿಂತ ಮಿಗಿಲಾದದು, ಉಳಿದ ಪ್ರಾಣಿಗಳಿಗಿಂತಲೂ ಮನುಷ್ಯನನ್ನು ಶ್ರೇಷ್ಠಗೊಳಿಸುವುದು ಮನಸ್ಸು. ಈ ಮನಸ್ಸಿನ ವಿಕಾಸಕ್ಕಾಗಿ ಬೇಕು ಶರಣರ ಸಂಗ; ಶರಣರ ಅನುಭಾವ.

ಮಂಡೆ ಮಾಸಿದಡೆ ಮಹಾಮಜ್ಜನವ ಮಾಡುವುದು.
ವಸ್ತ್ರ ಮಾಸಿದಡೆ ಮಡಿವಾಳಂಗಿಕ್ಕುವುದು.
ಮನದ ಮೈಲಿಗೆಯ ತೊಳೆಯ ಬೇಕಾದರೆ
ಕೂಡಲ ಚನ್ನಸಂಗನ ಶರಣರ ಅನುಭಾವವ ಮಾಡುವುದು.

ಈ ಅನುಭಾವದಿಂದ ಧರ್ಮಬಂಧುಗಳ ಒಡನಾಟ ಪ್ರಾಪ್ತಿಯಾಗುವುದು. ತಾತ್ತ್ವಿಕ ಸಂದೇಹ, ಸಂಶಯಗಳಳಿದು ತಾತ್ತ್ವಿಕ ನಿಖರತೆ ಪ್ರಾಪ್ತವಾಗುವುದು. ಉಳಿದ ಶರಣರು ಸಹಪಥಿಕರಾಗುವುದರಿಂದ ಸಾಧನಾಮಾರ್ಗ ಸರಳವಾಗುವುದು.

ಮಡಿಕೆಯ ಮಾಡುವೊಡೆ ಮಣ್ಣೆ ಮೊದಲು
ತೊಡುಗೆಯ ಮಾಡುವೊಡೆ ಹೊನ್ನೆ ಮೊದಲು
ಶಿವಪಥವರಿವೊಡೆ ಗುರುಪಥ ಮೊದಲು.
ಕೂಡಲ ಸಂಗಮ ದೇವರನರಿವೊಡೆ
ಶರಣರ ಸಂಗವೆ ಮೊದಲು ಮೊದಲು ||

ದೇವರ ಸ್ವರೂಪ ಮುಂತಾದ ತಾತ್ತ್ವಿಕ ಸಂಗತಿಗಳು ಶರಣರ ಸಂಗದಲ್ಲಿ ಅರ್ಥವಾದರೆ, ಅವರ ಮಾರ್ಗದರ್ಶನದಿಂದ. ಪರಮಾತ್ಮನ ದರ್ಶನ ಪ್ರಾಪ್ತಿಯಾಗುತ್ತದೆ.

ಧರ್ಮಪಿತರ ಆದೇಶವನ್ನು ಪ್ರತಿಯೊಬ್ಬರೂ ಪಾಲಿಸಬೇಕು. ಧರ್ಮಪಿತರ ಕಾಲದಲ್ಲಿ ಪ್ರತಿಯೊಂದು ಊರಿನಲ್ಲಿಯೂ ದಿನನಿತ್ಯವೂ ಅನುಭವ ಗೋಷ್ಠಿಗಳು ನಡೆಯುತ್ತಿದ್ದವು. ಊರಲ್ಲಿರುವ ಮಠಗಳು ಜನರಿಗೆ ನಿತ್ಯ ಸಂಸ್ಕಾರವನ್ನು ನೀಡುತ್ತಿದ್ದವು. ಇಂದು ಅದು ಇಲ್ಲವಾಗಿದೆ. ಬಹುಪಾಲು ಮಠಗಳು ವ್ಯವಹಾರದ ಕೇಂದ್ರಗಳಾಗಿವೆ. ಇನ್ನು ಕೆಲವು ಮಠಗಳಲ್ಲಿ ಬೋಧೆಯು ನಡೆದರೂ ಅವೈಚಾರಿಕ ಪುರಾಣ, ಕೀರ್ತನೆಗಳಲ್ಲಿ ಕಾಲಹರಣವಾಗುತ್ತಿರುತ್ತದೆ. ತಮ್ಮ ಮಠದ ಗದ್ದುಗೆಗಳ ಕರ್ತೃಗಳನ್ನು ದೈವೀಕರಿಸಿದ, ವೈಭವೀಕರಿಸಿದ ಅವೈಚಾರಿಕ ಪವಾಡಗಳಿಂದ ತುಂಬಿದ ಪುರಾಣಶ್ರವಣದಿಂದ ಜನರಲ್ಲಿ ಹೆಚ್ಚಿನ ಸಂಸ್ಕಾರವಾಗದು. ಆದ್ದರಿಂದ ಬಸವ ತತ್ತ್ವಾನುಯಾಯಿಗಳು, ಅಭಿಮಾನಿಗಳು, ಆಸಕ್ತರು ಒಂದು ಕಡೆ ಸೇರಿ ಅನುಭವ ಗೋಷ್ಠಿಯನ್ನು (ಧರ್ಮಪಿತರ ಕಾಲದಲ್ಲಿ ನಡೆದಂತೆ)ನಿತ್ಯವೂ ಮಾಡಲಾಗದಿದ್ದರಷ್ಟೆ,

ವಾರಕ್ಕೊಮ್ಮೆಯಾದರೂ ಒಂದೆಡೆ ಸೇರಿ ವಚನಾನುಭವವನ್ನು, ಸಾಮೂಹಿಕ ಪ್ರಾರ್ಥನೆ ಮಾಡಿಯಾದ ನಂತರ, ಮಾಡಬೇಕು.

ಇನ್ನು ದಿನ ನಿತ್ಯ, ಅರ್ಧಗಂಟೆ, ಒಂದು ಗಂಟೆಯನ್ನಾದರೂ ಮೀಸಲಿರಿಸಿ ಕುಟು ಂಬದವರೆಲ್ಲ ಒಂದೆಡೆ ಸೇರಿ, ಸಂಕ್ಷಿಪ್ತ ಪ್ರಾರ್ಥನೆ ಮಾಡಿ, ವಚನ ಶಾಸ್ತ್ರದ ಅಧ್ಯಯನ–ಚಿಂತನ ಮಾಡಬೇಕು. ಇದರಿಂದ ಕೌಟುಂಬಿಕವಾದ ಹಾರ್ದಿಕತೆ ಮೂಡುವುದೇ, ಅಲ್ಲದೇ ತಮ್ಮ ಧರ್ಮದ ಬಗ್ಗೆ ಜ್ಞಾನವನ್ನು ಹೊಂದಲು ಅನುಕೂಲವಾಗುವುದು. ಮಕ್ಕಳು ಉತ್ತಮ ಸಂಸ್ಕಾರದಲ್ಲಿ ಬೆಳೆದು, ಆದರ್ಶ ಜೀವನವನ್ನು ಅಳವಡಿಸಿಕೊಳ್ಳುವರು. ತಾಯಿತಂದೆಯರನ್ನು, ಗುರುಹಿರಿಯರನ್ನು ಗೌರವಿಸುವರು.

ಅರ್ಚನೆ : ವ್ಯಕ್ತಿಯಲ್ಲಿರುವ ಅತ್ಯಂತ ಮಹತ್ವಪೂರ್ಣ ಅಂಶ ಆತ್ಮ. ಆತ್ಮ ಎಂಬ ನಿಧಿ ಇರುವುದರಿಂದಲೇ ಈ ಶರೀರಕ್ಕೆ ಬೆಲೆ, ಆತ್ಮವು ಇಲ್ಲಿಂದ ತೊಲಗುತ್ತಲೇ ಈ ಶಿವವು ಶವವೇ ಆಗಿಬಿಡುತ್ತದೆ. ಒಂದು ಹಣದ ಚೀಲ ಇದೆ ಎಂದುಕೊಳ್ಳುವಾ. ಅದರಲ್ಲಿ ಹಣ ಇರುವಾಗ ಅದನ್ನು ತುಂಬಾ ಎಚ್ಚರಿಕೆಯಿಂದ ಕಾಯ್ದಿರಿಸುತ್ತೇವೆ. ಕಾಯುತ್ತೇವೆ. ಆ ಹಣವನ್ನು ಪೆಟ್ಟಿಗೆಯಲ್ಲಿಟ್ಟು ಬೀಗ ಹಾಕಿದ ಬಳಿಕ ಅಥವಾ ಬ್ಯಾಂಕಿಗೆ ಕಟ್ಟಿದ ಬಳಿಕ ಚೀಲವನ್ನು ಎಲ್ಲೋ ಇಡುತ್ತೇವೆ. ಹಾಗೆಯೇ ಆತ್ಮವೆಂಬ ನಿಧಿಯು ಇರುವವರೆಗೆ ಶರೀರವೆಂಬ ಈ ಚೀಲಕ್ಕೆ ಎಲ್ಲಿಲ್ಲದ ಬೆಲೆ. ಅದು ತೊಲಗುತ್ತಲೇ ಶರೀರದ ಚೀಲವನ್ನು ಭೂಮಿಯಲ್ಲಿ ಹೂಳುತ್ತಾರೆ, ಇಲ್ಲವೇ ಬೆಂಕಿಯಲ್ಲಿ ದಹಿಸುತ್ತಾರೆ. ಹೀಗೆ ಮನುಷ್ಯನಿಗೆ ಅವನ ಅಸ್ತಿತ್ವಕ್ಕೆ ಬೆಲೆ ತಂದುಕೊಡುವುದೇ ಆತ್ಮ. ಈ ಆತ್ಮಕ್ಕೆ ತನ್ನ ಮೂಲ ನೆಲೆಯಾದ ಪರಮಾತ್ಮನನ್ನು ಕೂಡುವ ಹಂಬಲ. ಈ ಹಂಬಲವು ಪೂರೈಸಲು ಇರುವ ಸಾಧನವೇ ಅರ್ಚನೆ.

ವ್ಯಕ್ತಿಯ ಬದುಕು ಸರ್ವಾಂಗಪರಿಪೂರ್ಣವಾಗಬೇಕೆಂದಿದ್ದರೆ ಭೌತಿಕ ಮೌಲ್ಯ (*Material values*)ಗಳನ್ನು ಒದಗಿಸುವ(ಕಾಯಕ+ದಾಸೋಹ+ಪ್ರಸಾದಗಳಿಂದ ಕೂ ದ) ಅರ್ಪಣೆ, ಬೌದ್ಧಿಕ–ನೈತಿಕ ಮೌಲ್ಯ (*Intellectual and moral va ues*) ಗಳನ್ನು ನೀಡುವ ಅನುಭಾವ, ಅಧ್ಯಾತ್ಮಿಕ ಮೌಲ್ಯಗಳನ್ನು (*spiritual values*) ಒದಗಿಸುವ ಅರ್ಚನೆ–ಮೂರೂ ಬೇಕೇ ಬೇಕು. '**ಅರ್ಪಣೆ**' ಯಿಂದ ವ್ಯಕ್ತಿವ್ಯಕ್ತಿಗಳಲ್ಲಿ ಮಧುರ ಬಾಂಧವ್ಯ, ಸಮಷ್ಟಿಯ ಅಭಿವೃದ್ಧಿ ಸಾಧ್ಯವಾದರೆ ಅನುಭಾವದಿಂದ ಚಿಂತನಶಕ್ತಿ ಮೂಡುವುದು, ಅರ್ಚನೆಯಿಂದ ಆತ್ಮನ ನಿಃಶ್ರೇಯಸ್ಸು ಸಾಧ್ಯವಾಗುವುದು. ಹೀಗೆ ಎಲ್ಲರೂ ಎಲ್ಲಾ ಮೌಲ್ಯಗಳನ್ನೂ ಅಳವಡಿಸಿಕೊಳ್ಳುವುದರಿಂದ ವ್ಯಕ್ತಿಗಳ ಸರ್ವಾಂಗೀಣ ಅಭಿವೃದ್ಧಿಯಾಗುವುದಲ್ಲದೆ ಸಮಾಜವೂ ಸರ್ವತೋಮುಖ ಅಭಿವೃದ್ಧಿ ಹೊಂದುವುದು.

ಸಾಂಪ್ರದಾಯಿಕ ಸಮಾಜದಲ್ಲಿ ಶ್ರೇಣೀಕೃತ ಸಮಾಜ ವ್ಯವಸ್ಥೆ ಇದ್ದು ಕೆಲವರು ಬರೀ ದುಡಿದು, ಕೆಲವರು ಬರೀ ವಿರಾಮದಲ್ಲಿ ಐಷಾರಾಮ ಪಡೆದು, ಮತ್ತೆ ಕೆಲವರು ಕೇವಲ ಪೂಜಿಸಿ ಕಾಲಕಳೆಯುವ ಬಗೆ ಇದ್ದರೆ, ಗುರು ಬಸವಣ್ಣನವರು ಎಲ್ಲರಿಗೂ ಈ ಮೂರನ್ನೂ ಕಡ್ಡಾಯವಾಗಿ ಒದಗಿಸಿಕೊಡುವ ಚಿಂತನೆ ಮಾಡಿದರು. ಎಲ್ಲರೂ ದುಡಿಯಬೇಕು; ಎಲ್ಲರೂ ಅನುಭವದಲ್ಲಿ ಪಾಲ್ಗೊಳ್ಳಬೇಕು; ಎಲ್ಲರೂ ದೇವರನ್ನು ಪೂಜಿಸಬೇಕು. ಹೀಗಾಗಿ ಸರ್ವರಿಗೂ ಸಮಬಾಳು, ಸರ್ವರಿಗೂ ಸಮಪಾಲು ಎಂಬುದು ನಿಜವಾಗಿ ಅನುಷ್ಠಾನಕ್ಕೆ ಬಂದುದು ಧರ್ಮಪಿತರ ಬೋಧನೆಯಿಂದಾಗಿ.

ಅನುಭವ ಮಂಟಪದ ಕಲ್ಪನೆಯನ್ನು ಚಿತ್ತ ಭಿತ್ತಿಯಲ್ಲಿ ಮೂಡಿಸಿಕೊಂಡರೆ ಇದು ಒಂದು ಸುಂದರ ತಿಳಿಗೊಳದಂತೆ,ಅನುಭವ ಮಂಟಪದ ಶರಣರು ಪರಮಹಂಸೆಗಳಂತೆ, ಕಾಣಬರುವುದು. ಸದ್ಭಕ್ತಿಯ ಸುಜಲವನ್ನೀಂಟಿ, ಸುಜ್ಞಾನದ ಕಮಲನಾಳವನ್ನು ತಿಂದು ದಿವ್ಯಾನಂದದ ನಿಬ್ಬೆರಗಿನಲ್ಲಿ ತೇಲಾಡುವ ಶರಣರೆಂಬ ಪರಮಹಂಸೆಗಳು ಅಧ್ಯಾತ್ಮದ ಪರಮೋನ್ನತ ಸ್ಥಿತಿಯನ್ನು ಹೊಂದಿದರು. ಹೀಗಾಗಿ ಅನುಭವ ಮಂಟಪದ ಸರಸಿಯಲ್ಲಿ ತೇಲಿದರೆ ಆನಂದ, ಮುಳುಗಿದರೆ ಶಾಂತಿ.

ವಿಮಾನಗಳು ಏರಲಿಕ್ಕೆ, ಇಳಿಯಲಿಕ್ಕೆ ನಿಲ್ದಾಣಗಳು ಹೇಗೆ ಬೇಕೋ ಹಾಗೆ ಅನುಭವ ಮಂಟಪದಂತಹ ಅಧ್ಯಾತ್ಮಿಕ ಸಂಸ್ಥೆಗಳು ಸಾಧನೆಯ ಮೂಲಕ ಊರ್ಧ್ವಗಾಮಿಯಾಗಿ ಸಾಧಕರು ಏರಲಿಕ್ಕೂ ದೇವಕೃಪೆಯು ಇಳಿದು ಬರಲಿಕ್ಕೂ ಅತ್ಯಗತ್ಯವಾಗುತ್ತವೆ.

ಅನುಭವ ಮಂಟಪವನ್ನು ಒಂದು ಪ್ರಯೋಗಶಾಲೆ ಎನ್ನಬಹುದು. ವಿಜ್ಞಾನಿಯು ಮೊದಲು ಒಂದು ಸತ್ಯವನ್ನು, ಅಥವಾ ಸಿದ್ಧಾಂತವನ್ನು ಊಹಿಸುವನು (*Assumption*)ತನ್ನ ಊಹೆಯನ್ನು, ಪ್ರಯೋಗಕ್ಕೆ ಒಳಪಡಿಸುವನು. ಸತ್ಯಾರ್ಥ ನಿರ್ಣಯವಾದಾಗ ಅದನ್ನು ಒಂದು ಸಿದ್ಧಾಂತ (*Theory*) ವೆಂದು ದಾಖಲಿಸುವನು. ಹಾಗೆಯೇ ಧರ್ಮಪಿತರು ಜಾತಿವರ್ಣವರ್ಗರಹಿತ ಧರ್ಮಸಹಿತ ಸಮಾಜವನ್ನು ಕಟ್ಟುವ ಒಂದು ಆಲೋಚನೆಯನ್ನು ತಳೆದರು. ಆ ಆಲೋಚನೆಯನ್ನು ಅನುಭವ ಮಂಟಪದಲ್ಲಿ ಪ್ರಯೋಗಕ್ಕೆ ಒಳಪಡಿಸಿದರು. ಯಶಸ್ವಿಯಾಗಿ, ವಚನ ಸಾಹಿತ್ಯದಲ್ಲಿ ತಮ್ಮ ವಿಚಾರಗಳನ್ನು ದಾಖಲಿಸಿದರು.

ಧರ್ಮಪಿತ ಬಸವಣ್ಣನವರು ರೂಪಿಸಿದ ಅರ್ಥಾತ್ ಸಂಸ್ಥಾಪಿಸಿದ ಲಿಂಗಾಯತ ಧರ್ಮದ ಉದಯ ಕೂಡಲಸಂಗಮದಲ್ಲಿ ಆದರೂ, ಈ ಶಿಶುವು ನಾಮಕರಣಗೊಂಡು, ಬೆಳೆದುದು ಕಲ್ಯಾಣದ ತೊಟ್ಟಿಲಲ್ಲಿ. ಇದರ ಜನಕರು ಧರ್ಮಪಿತ ಬಸವಣ್ಣನವರಾದರೂ

ಸಾಕಿ ಸಲಹಿ ಪೋಷಿಸಿದವರು ಅನೇಕ ಶರಣರು. ಹೀಗಾಗಿ ತಂದೆಯ ಹೆಸರು ಹಿಡಿದು ಬಸವ ಧರ್ಮ ಎನ್ನಬಹುದು. ಧರ್ಮಪಿತ ಬಸವಣ್ಣನವರು ಇಟ್ಟ ಹೆಸರು ಲಿಂಗಾಯತ-ಲಿಂಗವಂತ ಧರ್ಮ ಎನ್ನಬಹುದು. ಶರಣರ ಆರೈಕೆಯಲ್ಲಿ ಪುಷ್ಟಿಗೊಂಡ ಕಾರಣ ಶರಣ ಧರ್ಮ ಎನ್ನಬಹುದು. ಈ ಧರ್ಮದ ಸಂಹಿತೆ ವಚನ ಸಾಹಿತ್ಯವಾದ ಕಾರಣ ವಚನಧರ್ಮ ಎಂದೂ ಅನ್ನಬಹುದು.

ಲಿಂಗಾಯತ ಧರ್ಮದ ಸ್ಥಾಪನೆ ಎಂದು. ?

ಈ ಬಗ್ಗೆ ನಮಗೆ ಸ್ಪಷ್ಟ ದಾಖಲೆಗಳು ಸಿಕ್ಕುವುದು ಧರ್ಮಪಿತರ ವಚನಗಳಲ್ಲಿ ಮತ್ತು ಹರಿಹರನ ಬಸವರಾಜದೇವರ ರಗಳೆಯಲ್ಲಿ. ಧರ್ಮಪಿತರಿಗೆ ಆಗ ಮೂರೇಳು ವಯಸ್ಸು (21 ವರ್ಷ). ಒಂದು ದಿವಸ ಇದ್ದಕ್ಕಿದ್ದಂತೆಯೇ ಕನಸಾಯಿತು. "ಎಲೆ ಮಗನೆ ಬಸವಣ್ಣ, ಬಸವರಸ, ಬಸವಿದೇವ, ನಿನ್ನಂ ಮಹೀತಳದೊಳು ಮೆರೆದಪೆವು ನೀ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಹೋಗು." ಎಂದು ಪರಮಾತ್ಮನ ಆದೇಶವಾಯಿತು. ಇರುಳು ಕಳೆದು ಬೆಳಕಾಗುವ ಮುನ್ನ, ಪರಮಾತ್ಮನ ಆದೇಶದಂತೆ ಮಿಂದು ಮಡಿಯುಟ್ಟು ಶುದ್ಧಾಂಗರಾಗಿ ಬಂದು ಕುಳಿತರು. ಪರಮಾತ್ಮನೇ ನೇರವಾಗಿ ಅನುಗ್ರಹಿಸಿದ. ಆಗಲೇ ಇಷ್ಟಲಿಂಗಕ್ಕೆ ಚಿತ್ಕಳೆಯು ಅವತೀರ್ಣವಾದುದು. ಹರಿಹರನು ಸ್ಪಷ್ಟವಾಗಿ ಹೇಳುವಂತೆ, "ತನ್ನ (ಬಸವಣ್ಣನ) ಹೃತ್ಕಮಲದೊಳು ಬೆಳೆದ ಲಿಂಗಕ್ಕೆ ಕರಕಮಲ ಮನಾಂತು." ಕ್ರಿ.ಶ. 1106 ನೆಯ ಇಸವಿ, ವೈಶಾಖ ಮಾಸದ ಅಕ್ಷಯ ತೃತೀಯ ದಂದು ಹುಟ್ಟಿದ ಧರ್ಮಪಿತರಿಗೆ 1127 ಕ್ಕೆ 21 ವಯಸ್ಸು ಆಗುತ್ತದೆ. ಆದ್ದರಿಂದ ಕ್ರಿ. ಶ. 1127, ಜನವರಿ 14 ರಂದು ಪರಮಾತ್ಮನ ದಿವ್ಯ ಆದೇಶವಾದುದು, ಇಷ್ಟಲಿಂಗದಲ್ಲಿ ಚಿತ್ಕಳೆಯ ಅವತೀರ್ಣವಾದುದು. ಇದನ್ನೇ ಧರ್ಮಸ್ಥಾಪನೆಯ ದಿನ ಎನ್ನಬಹುದು.

ಜಗತ್ತಿನಲ್ಲಿ ಪ್ರಚಲಿತವಿರುವ ವ್ಯಕ್ತಿ ಸ್ಥಾಪಿತ ಧರ್ಮಗಳು ಬೌದ್ಧ, ಕ್ರೈಸ್ತ, ಇಸ್ಲಾಂ ಮತ್ತು ಲಿಂಗಾಯತ ಧರ್ಮಗಳು. ಇವುಗಳು ಹುಟ್ಟುವಾಗಿನ ಕ್ರಿಯೆಯನ್ನು ನೋಡೋಣ.

ಗೌತಮನು ಸತ್ಯಾನ್ವೇಷಕನಾಗಿ ಹೊರಟ. ಪ್ರಚಲಿತವಿದ್ದ ಯಾವ ಧರ್ಮಮತ ಪಂಥಗಳು ಅವನಿಗೆ ಶಾಂತಿಯನ್ನು ತಂದುಕೊಟ್ಟಿಲ್ಲ. (ಬುದ್ಧ) ಗಯೆಯಲ್ಲಿ ಒಂದು ವೃಕ್ಷದ ಕೆಳಗೆ ಅಂತರ್‌ಧ್ಯಾನಾಸಕ್ತನಾಗಿರುವಾಗಲೇ ಜ್ಞಾನದ ಬೆಳಕೊಂದು ಮೂಡಿತು. ಸತ್ಯ ದರ್ಶನವಾಗಿ ಅದನ್ನು ಬೋಧಿಸುತ್ತ ಹೊರಟನು. ಅವನ ವಿಚಾರಧಾರೆಯೇ ಒಂದು ಧರ್ಮವಾಗಿ ರೂಪುಗೊಂಡಿತು.

ಏಸುಕ್ರಿಸ್ತನು ಒಂದು ದಿವಸ ಜಾನ್‌ದಿ ಬ್ಯಾಪ್ಟಿಸ್ಟ್ ಎಂಬ ಜೋರ್ಡಾನ್‌ದಲ್ಲಿದ್ದ ಯಹೂದಿ ಸಂತನ ಹತ್ತಿರ ಹೋಗಿ, 'ದೀಕ್ಷಾಸ್ನಾನ ಮಾಡಿಸು' ಎಂದು ಕೇಳಿದ.

ಆದರೆ ಜಾನನು ಏಸುವಿನ ಮನಸ್ಸನ್ನು ಬದಲಿಸಲು ಯತ್ನಿಸಿದ. "ನಾನೇ ನಿನ್ನಿಂದ ಮಾಡಿಸಿಕೊಳ್ಳಬೇಕಾಗಿದೆ. ಹೀಗಿರುವಾಗ ನೀನು ನನ್ನಲ್ಲಿಗೆ ಬರಬಹುದೆ? " ಆದರೆ ಜೀಸಸ್ ಹೇಳುವನು. "ಸದ್ಯದಲ್ಲಿ ಹೀಗೇ ಆಗಲಿ. ಏಕೆಂದರೆ ದೇವರು ಇಚ್ಛಿಸುವುದನ್ನು ಮಾಡಬೇಕಾಗಿದೆ." ಜಾನ್ ಒಪ್ಪಿದನು.

ಏಸುವು ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಲೇ, ನೀರಿನಿಂದ ಹೊರಬಂದನು. ಆಗ ಸ್ವರ್ಗವು ತೆರೆಯಿತು. ದೇವರ ಚೈತನ್ಯವು ಇಳಿದು ಬರುವುದನ್ನು ಆತ ಕಂಡನು. ಪಾರಿವಾಳದ ರೂಪದಲ್ಲಿ ಅದು ಇಳಿದು ಬಂದು, ಅವನ ಮೇಲೆ ಕುಳಿತುಕೊಂಡಿತು, ಆಗ ಒಂದು ವಾಣಿಯು ಹೀಗೆ ಹೇಳಿತು. "ಇದೋ ಇವನೇ ನನ್ನ ಪ್ರೀತಿಯ ಮಗನು. ಇವನನ್ನು ಕುರಿತು ನಾನು ಸಂಪ್ರೀತನಾಗಿದ್ದೇನೆ. "

(ಹೊಸ ಒಡಂಬಡಿಕೆ. ಮಾರ್ಕ್ 1, –911, ಲ್ಯೂಕ್ 3: 212-2)

ಮುಹಮ್ಮದ್‌ರ ಮೊದಲನೆಯ ವಹ್ಯ್

ರಮರ್ಝಾನ್ ತಿಂಗಳಲ್ಲಿ ಜನರ ಮಧ್ಯದಿಂದ ಬಹುದೂರ ಹೋಗಿ ಏಕಾಂತದಲ್ಲಿ ಕುಳಿತು ಅಲ್ಲಾಹನ ಸ್ಮರಣೆ ಮಾಡುತ್ತಿದ್ದರು. ಮಕ್ಕಾದಿಂದ ಮೂರು ಮೈಲಿ ದೂರದಲ್ಲಿ 'ಹಿರಾ' ಎಂಬ ಗುಹೆ ಇದೆ. ಒಂದು ಸಲ ರಂರ್ಝಾನ್ ತಿಂಗಳು ಧ್ಯಾನದಲ್ಲಿ ಕುಳಿತಾಗ ಒಂದು ಆಕೃತಿಯನ್ನು ಕಂಡರು. "ನಾನು ಅಲ್ಲಾಹ್‌ನಿಂದ ಕಳುಹಿಸಲ್ಪಟ್ಟಿರುವ 'ದೇವದೂತ' ಎಂದಿತು. ಮತ್ತು ಓದಲು ಹೇಳಿತು. ತಮಗೆ ಓದಲು ಬರುವುದಿಲ್ಲ ಎಂದಾಗ ಆ ದೇವದೂತನು, " ಓದು, ಯಾರು ಹೆಪ್ಪುಗಟ್ಟಿದ ರಕ್ತದಿಂದ ಮನುಷ್ಯನನ್ನು ಸೃಷ್ಟಿಸಿದನೋ ಆ ನಿನ್ನ ಒಡೆಯನ ಹೆಸರಿನಲ್ಲಿ ಓದು, ! ನಿನ್ನ ಒಡೆಯನು ಮಹಿಮಾವಂತನು. ಮನುಷ್ಯನಿಗೆ ಲೇಖನಿಯ ಮುಖೇನ ಅವನು ತಿಳಿಯದೆ ಇರುವುದನ್ನು ತಿಳಿಸಿದವನು." ಎಂದು ತಿಳಿಸಿದನು.

(ಸೂರಾ 96, ಆಯತ್ 1–5)

ಇದು ಪ್ರವಾದಿಗಳ ಮೇಲೆ ಅವತೀರ್ಣವಾದ ಮೊಟ್ಟ ಮೊದಲನೆಯ 'ವಹ್ಯ್' ಅಥವಾ ದೇವವಾಣಿ.

ಮುಹಮ್ಮದರಿಗೆ ಇದು ಅರ್ಥವಾಗದೆ ನಡುಗುತ್ತಾ ಮನೆಗೆ ಹೋಗಿ ಹೆಂಡತಿ ಹಜ್ರತ್ ಖದೀಜಾ ಅವರಿಗೆ ತಿಳಿಸುತ್ತಾರೆ. ಹೆಂಡತಿ ಧೈರ್ಯ ಹೇಳುವುದಲ್ಲದೆ ಕ್ರೈಸ್ತ ವಯೋವೃದ್ಧ "ವರ್‌ಕಾ ಬಿನ್ ನೌಫಲ್"ನ ಹತ್ತಿರ ಕರೆದೊಯ್ಯುವರು. ಅವರು ಮೊಹಮ್ಮದರಿಗೆ ಆದುದು ದೇವವಾಣಿ ಎಂಬುದನ್ನು ಗ್ರಹಿಸಿ, ಖಚಿತಪಡಿಸುವರು. ಹೀಗೆ ಮೊಹಮ್ಮದರು ದೇವರ' 'ಸಂದೇಶವಾಹಕ' ರಾಗುವರು. ಹೆಂಡತಿಯೇ ಮೊದಲ ಅನುಯಾಯಿಯಾಗುವಳು.

ಧರ್ಮಪಿತ ಬಸವಣ್ಣನವರ ಬದುಕಿನ ಘಟನೆ.

ಏಸುವು ನಿಮಿತ್ತ ಮಾತ್ರವಾಗಿ ದೀಕ್ಷಾಸ್ನಾನ ಪಡೆಯುತ್ತಾನೆ. ಮೊಹಮ್ಮದರಿಗೆ ದೇವರಿಂದಲೇ ನೇರವಾಗಿ ಆಗಿದೆ. ಈ ವಿಷಯದಲ್ಲಿ ಬಸವಣ್ಣನವರ '**ಅನುಗ್ರಹ** ಮತ್ತು **ಆಯ್ಕೆ**' ಮೊಹಮ್ಮದರ ಪ್ರಸಂಗವನ್ನು ಹೋಲುತ್ತದೆ. ಅವರಿಗೆ ನಿಮಿತ್ತ ಮಾತ್ರವಾದ ಗುರುವು ಸಹ ಯಾರೂ ಇಲ್ಲ. 21 ವಯಸ್ಸಿನ ತರುಣ ಬಸವಣ್ಣನವರು ಕೂಡಲ ಸಂಗಮವನ್ನು ಬಿಡುವಾಗ ಅಂತೂ ಒಂದು ವಿಶೇಷ ಘಟನೆ ನಡೆದಿದೆ. ಹರಿಹರನ ಬಸವರಾಜ ದೇವರ ರಗಳೆ ಮತ್ತು ಸಿಂಗಿರಾಜನ ಕಾವ್ಯ-ಎರಡರಲ್ಲೂ ವರದಿಯಾಗಿದೆ. ಓದುಗರಿಗೆ ಪ್ರಾಮಾಣಿಕ ಮಾಹಿತಿ ನೀಡಲೋಸುಗ ಆ ಕಾವ್ಯ ಭಾಗಗಳನ್ನು ನೇರವಾಗಿ ಕೊಡುತ್ತೇನೆ.

ಬಸವಣ್ಣನವರು ಒಂದು ದಿವಸ, ದೇವಾಲಯದಲ್ಲಿ ಕಂಭಕ್ಕೊರಗಿ ಕುಳಿತು ನಿದ್ರಿಸುತ್ತಿರುವಾಗ ಒಂದು ಕನಸು ಬೀಳುವುದು. ಈ ಸ್ಥಿತಿಯನ್ನು ನಿದ್ರೆ ಎನ್ನುವುದಕ್ಕಿಂತಕಿ ಧ್ಯಾನಾವಸ್ಥೆ ಎನ್ನುವುದು ಸೂಕ್ತ. ಆಗ ಕಂಡುದನ್ನು ಕನಸು ಎನ್ನುವುದಕ್ಕಿಂತಲೂ ದರ್ಶನ (*Vision*) ಎನ್ನುವುದು ತಾತ್ತ್ವಿಕ ಭಾಷೆ.

ಆಗ ಒಂದು ವಾಣಿಯಾಗುವುದು, "ಎಲೆ ಮಗನೆ ಬಸವ, ಬಸವಣ್ಣ, ಬಸವಿದೇವ ನಿನ್ನಂ ಮಹೀತಳದೊಳು ಮೆರೆದಪೆವು. ನೀಂ ಬಿಜ್ಜಳರಾಯನಿಪ್ಪ ಮಂಗಳವಾಡಕ್ಕೆ ಹೋಗು."

ಆಗ ಬಸವರಸನಿಗೆ ತುಂಬಾ ದುಃಖವಾಗುತ್ತದೆ. ಅಲ್ಲಿಯ ಪರಿಸರ, ಸಂಗಮನಾಥನ ಪೂಜೆ ಮುಂತಾದುವನ್ನು ಬಿಟ್ಟು ಹೋಗಲಾರದ ತೊಳಲಾಟ ಸಾಗಿರುವಾಗಲೇ ಪುನಃ ಆ ವಾಣಿ ಹೇಳುತ್ತದೆ.

"ಎಲೆ ಮಗನೆ ಎಲೆ ಕಂದ ಎಲೆ ಬಸವ ನಿನ್ನನಗಲಿ ನಾನಿರಲಾರೆ. ನಿನಗಿನಿತು ನಿರೋಧವೇಕೆ ? ಬೇಡಯ್ಯ ಬೇಡೆನ್ನರಸ ಬೇಡೆನ್ನ ಭಕ್ತಿನಿಧಿಯೆ ನಿನ್ನೊಡನೆ ಬಿಡದೆ ಬಪ್ಪೆಂ. ನಾಳೆ ಮಧ್ಯಾಹ್ನದೊಳು ಶುದ್ಧಾಂಗನಾಗಿ ಬಂದು ನಂದಿಕೇಶ್ವರನ ಮುಂದೆನ್ನಂ ನೆನೆವುತ್ತಂ ಕುಳ್ಳಿರೆ, ವೃಷಭನ ಮುಖಾಂತರದಿಂದಾವೇ ಬಂದಪೆವು. ಆತಂ ನಿನಗೆ ಸದ್ಗುರು. ಅಲ್ಲಿಂ ಬಳಿಕ್ಕೆಮ್ಮನರ್ಚಿಸುತ್ತ, ಭಕ್ತರ ಬಂಧುವಾಗಿ, ಶರಣರ ಪರುಷದ ಖಣಿಯಾಗಿ, ನಿತ್ಯ ಸುಖಿಯಾಗಿ, ಪರಸಮಯದ ಗರ್ವಮಂ ನಿಲಿಸಿ, ಭಕ್ತರಂ ಗೆಲಿಸಿ, ಪ್ರತ್ಯಕ್ಷಂಗಳಂ ತೋರಿ ಲೌಕಿಕ ಧರ್ಮವಂ ಮೀರಿ ಕಡುನಿಷ್ಠೆಯಂ ಹೇರಿ ಪರಮ ಸುಖದಿಂದಿರ್ಪುದು."

ಈ ಆದೇಶದಂತೆ ಬಸವರಸನು ಅರುಣೋದಯದ ಸಮಯದಲ್ಲಿ ಸ್ನಾನವನ್ನು ಪೂರೈಸಿ ಬಂದು ಕುಳಿತುಕೊಳ್ಳುವನು.

“ಹರಕರುಣೋದಯ ಮಾದಂತರುಣೋದಯ ಮಾಗೆ, ನಿದ್ರೆ ತಿಳಿದೆದ್ದು, ಸಾಲ್ಗೊಂಡ ಪುಳಕಂಗಳಂ ಸಂತೈಸಿಕೊಂಡು ....ಹೃದಯಕಮಳ ಮಧ್ಯಸ್ಥಿತ ಸಂಗಮೇಶ್ವರ ಧ್ಯಾನಾರೂಢನಾಗಿರ್ಪ ಸಮಯದೊಳು, ಪಶುಪತಿ ವೃಷಭೇಂದ್ರಂಗೆ ಮನದೊಳು ಸೂಚಿಸೆ ಹಸಾದವೆಂದು ನಂದಿಕೇಶ್ವರ ಸಂಗಮೇಶ್ವರ ಲಿಂಗಮಂ ನೆನೆಯೆ ಧ್ಯಾನ ಬಲಿದು ಶಿವಲಿಂಗಂ ಮೂರ್ತಿಗೊಂಡು ನಂದಿಯ ಹೃದಯ ಕಮಳಮನೊತ್ತ-ರಿಸಿ ಪೊರಮಟ್ಟು ಸದ್ಯೋಜಾತ ಮುಖಂ ಮುಂತಿಟ್ಟೊಳಗೊಳಗೆ ಗಳಗಳನೆ ನಡೆದು ಬರೆ ಧರ್ಮಮುಖವರಳಂತೆ ಮುಕ್ತಿಯ ಸೆಜ್ಜೆ ತೆಗೆದಂತೆ, ವೃಷಭನ ಮುಖಂ ವಿಕಾ-ಸಮನೆಯ್ದೆ ಜಿಹ್ವೆ ಸಿಂಹಾಸನಂಗೊಂಡು ನಂದಿಯ ಮುಖದಿಂದೊಗೆತಪ್ಪ ದಿವ್ಯ ಲಿಂಗಮಂ **ಸಂಗನ ಬಸವಂ** ಸ್ನೇಹರಸಭರಿತ+ಸಾತ್ವಿಕ ದೃಷ್ಟಿಯಿಂದಾಲಂಗಿಸುವಂತೆ ನೋಡಿ ನೋಡಿ ಮನದೊಳೋವಿ **ಹೃತ್ಕಮಳದೊಳು ಬೆಳೆದ ಲಿಂಗಕ್ಕೆ** ಕರಕಮಳಮ ನಾಂತು ನಂದಿಯ ನಾಲಗೆಯ ತುದಿಗಂ ತನ್ನ ಕರಪಲ್ಲವಕಂ ಸಂದಿಲ್ಲದಂತೆ ಕೈಯೊಡ್ಡಿರೆ ವೃಷಭರಾಜಂ ಪತಿಯನುಜ್ಞೆಯೊಡನೆ ಬಸವಣ್ಣನ ಹಸ್ತದೊಳು ಸಂಗಮೇಶ್ವರ ಲಿಂಗಮಂ ಭೋಂಕನೆ ಬಿಜಯಂಗೈಸಿ ....

ಕಾರುಣ್ಯಮಂ ನೀಡಿ ಸಾಮರ್ಥ್ಯಮಂ ಕೂಡಿ ಸಂಗಂ ಪತಿಯಾಗಿ ಬಸವಂ ಸತಿಯಾಗಿ ಪಂಚಾಕ್ಷರಿಯೆ ಗತಿಯಾಗಿ ಸದ್ಭಕ್ತಿಯೇ ಮತಿಯಾಗಿ...............

ಇದು ಬಸವಣ್ಣನವರ ಜೀವನದಲ್ಲಿ ಅತ್ಯಂತ ಮಹತ್ವಪೂರ್ಣ ಘಟನೆ ಮಾತ್ರವಲ್ಲ ಒಂದು ಹೊಸಧರ್ಮವನ್ನು ಹುಟ್ಟುಹಾಕಿದ ದಿನ. ಬಸವರಸನನ್ನು ಸಂಗನ ಬಸವಣ್ಣ – ಅಂದರೆ ದೇವರ ಮಗನನ್ನಾಗಿ ಮಾಡಿದ ಘಟನೆ. ಹರಿಹರ ಕವಿ ಬಹಳ ಕಷ್ಟಪಟ್ಟು ಅವರ್ಣನೀಯವಾದ ಒಂದು ಪ್ರಸಂಗವನ್ನು ಭಾಷೆಯಲ್ಲಿ ಬಂಧಿಸಲು ಯತ್ನಿಸಿದ್ದಾನೆ. ಕರ್ಣಾಕರ್ಣಿಯಾಗಿ ಹರಿಹರಕವಿಗೆ ಒಂದು ವಿವರ ದೊರಕಿದೆ. ಅದೆಂದರೆ,

1. ಕೂಡಲಸಂಗಮವನ್ನು ತೊರೆದು ಮಂಗಳವೇಡೆಗೆ ಹೋಗಲು ಪ್ರೇರಣೆ(ಆದೇಶ) ಪಡೆದುದು.
2. ಅಲ್ಲಿಯವರೆಗೂ ಇಲ್ಲದ ಒಂದು ‘ಹೊಸವಸ್ತು’ವನ್ನು ಕಂಡು ಹಿಡಿದುದು. ಈ ಸಂಗತಿಗಳನ್ನು ಯಶಸ್ವಿಯಾಗಿ ನಿರೂಪಿಸಿದ್ದಾನೆ. ಈ ವರ್ಣನೆ ನಮಗೆ ಒದಗಿಸುವ ಮಹತ್ವದ ವಿವರವೆಂದರೆ,

1. ಅಂದು ಬಸವರಸರು ಸಂಗನ ಬಸವಣ್ಣನಾದರು.
2. ಅವರಿಗೆ ಯಾವುದೇ ವ್ಯಕ್ತಿಯಿಂದ ಅನುಗ್ರಹವಾಗದೆ, ದೇವರಿಂದಲೇ ನೇರವಾಗಿ ಆಯಿತು.

ಬಾಲಕ ಬಸವಣ್ಣ ಬಂದಾಗ ಅವನ ಧ್ವನಿಯನ್ನು ಕೇಳಿ ಆಕರ್ಷಿತರಾಗಿ ಸ್ಥಾನಪತಿಯಾದ ಈಶಾನ್ಯದೇವರು ಬಂದು ‘ಎಲೆ ಭಕ್ತ ನೀನೆಲ್ಲಿಗೂ ಹೋಗಬೇಡ’ ಎಂದು ಆಶ್ರಯನೀಡಿ, ಅರ್ಚಕನ ವೃತ್ತಿಯನ್ನು ಕೊಡುವರು ಎಂದು ಹೇಳಿದ ಹರಿಹರ ಕವಿ, ದೀಕ್ಷಾ ಪ್ರಸಂಗದಲ್ಲಿ ಯಾರ ಹೆಸರನ್ನು ಕಾಣಿಸಿಲ್ಲದ್ದು ಗಮನಾರ್ಹ. ಜೊತೆಗೆ ಒತ್ತಿ ಹೇಳುವ ಪದಗಳೆಂದರೆ, ‘ವೃಷಭನ ಮುಖಾಂತರದಿಂದ **ಆವೇ ಬಂದಪೆವು**’ ಎಂದು ಪರಮಾತ್ಮನು ಹೇಳುವುದು.

ಇನ್ನೊಂದು ಗಮನಾರ್ಹ ಮಾತು, **‘ಹೃತ್ಕಮಳದೊಳು ಬೆಳೆದ ಲಿಂಗಕ್ಕೆ ಕರಕಮಳಮನಾಂತು’**. ಯಾರ ಹೃತ್ಕಮಳ ? ಕಲ್ಲು ನಂದಿಯ ಹೃತ್ಕ
ಮಲದಲ್ಲಿ ಲಿಂಗವು ಹುಟ್ಟುವುದುಂಟೆ, ಅದು ಬಾಯಿ ತೆರೆಯುವುದುಂಟೆ ? ವೃಷಭನ
ಅವತಾರಿ ಬಸವಣ್ಣ ಎಂದು ಮೊದಲ ಅಧ್ಯಾಯದಲ್ಲಿಯೇ ಹರಿಹರನು ಪೀಠಿಕೆ ಹಾಕಿ-
ರುವನಷ್ಟೆ. ಆದ್ದರಿಂದ ಕಲ್ಲು ವೃಷಭನನ್ನು ನಡುವೆ ಇಟ್ಟಿದ್ದಾನೆ. ಈ ಘಟನೆಯ
ಮರ್ಮ ಇಷ್ಟೆ; ಬಸವಣ್ಣನವರು ಪೂಜೆಗೆ ಯೋಗ್ಯವಾದ ತಾತ್ವಿಕ ಯೌಗಿಕ ಹಿನ್ನೆಲೆ
ಇರುವ ಒಂದು ಲಾಂಛನವನ್ನು, ಕುರುಹನ್ನು ಕೊಡಬೇಕೆಂದು ಬಹಳ ದಿನಗಳಿಂದ
ಚಿಂತಿಸಿ, ವಿಶ್ವದಾಕಾರದಲ್ಲಿ ಅದನ್ನು ರೂಪಿಸಿ ಇಟ್ಟುಕೊಂಡಿದ್ದರು. ಇದನ್ನೇ ಕೇಂದ್ರ
ವಾಗಿಟ್ಟುಕೊಂಡು ಒಂದು ‘ದೇವಭಕ್ತ’ರ ಸಮಾಜವನ್ನು ಕಟ್ಟಲು ಬಯಸಿದ್ದರು.
ಅದಕ್ಕಾಗಿ ವಿಶಾಲವಾದ ಕಾರ್ಯಕ್ಷೇತ್ರವೊಂದನ್ನು ಪ್ರವೇಶಿಸುವ ಬಗ್ಗೆ ಆಲೋಚಿ-
ಸಿದ್ದರು. ಗುರುಕುಲದ ಸೀಮಿತ ಕಾರ್ಯಕ್ಷೇತ್ರವು ತಮ್ಮ ಉದ್ದೇಶವನ್ನು ಸಫಲಗೊ
ಳಿಸಲಾರದು ಎಂದು ಆಲೋಚನಾಮಗ್ನರಾಗಿರುವಾಗಲೇ ದೇವರಿಂದ ಒಂದು ಆದೇಶ
ದರ್ಶನ (*Vision*) ರೂಪದಲ್ಲಿ ದೊರೆತಿತು.

[ಇಲ್ಲಿ ಒಂದು ಪ್ರಸಂಗವನ್ನು ಬರೆದರೆ ತಪ್ಪಾಗಲಿಕ್ಕಿಲ್ಲ. ಬಿ. ಎಸ್. ಸಿ. ಪದವಿ ಮುಗಿಸಿ ನಾನು ಪೂಜ್ಯ ಗುರುಗಳ ಸನ್ನಿಧಿ ಸೇರಿ ಜಂಗಮದೀಕ್ಷೆ ಪಡೆದುಕೊಂಡಿದ್ದೆ. ಮುಂದೆ ಓದುವ ಆಸೆ ಕನಸಿನಲ್ಲೂ ಮೂಡಿರಲಿಲ್ಲ. ಏಕೆಂದರೆ ಡಿಗ್ರಿಯ ವ್ಯಾಮೋಹವೂ ಇರಲಿಲ್ಲ; ಓದುವ ನೆಪ ಮಾಡಿಕೊಂಡು ಪಟ್ಟಣ ಸೇರಿ ಕಾಲ ಕಳೆಯುವ ಹವ್ಯಾಸವೂ ಇರಲಿಲ್ಲ. ಆದರೆ ಕನಸಿನಲ್ಲಿ ‘ವಾಣಿ’ಯು ಪುನಃ ಪುನಃ ಕೇಳಿ ಬರತೊಡಗಿತು.

“ನೀನು ಎಂ. ಎ. ಓದಬೇಕು, ಫಿಲಾಸಫಿ ಎಂ. ಎ. ಓದಬೇಕು.” ಇದನ್ನು
ಪೂಜ್ಯ ಅಪ್ಪಾಜಿಯವರಿಗೆ ಹೇಳಿದೆ. ಅವರು “ಅಹುದು; ಇದು ಶಿವನಿಚ್ಛೆ. ನೀವು
ವಿಜ್ಞಾನದ ಪದವೀಧರರು. ತತ್ತ್ವಜ್ಞಾನದ ಸಂಸ್ಕಾರ ಆದರೆ ಒಳ್ಳೆಯದು” ಎಂದರು.
ನಂತರ ಮತ್ತೊಂದು ಕನಸಿನಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಓದ-
ಬೇಕು ಎಂಬ ಆದೇಶವಾದುದಲ್ಲದೆ, ವಿಶ್ವವಿದ್ಯಾಲಯದ ಕಟ್ಟಡದ ಚಿತ್ರ ಸಹ ಕಾಣಿಸಿ

ಕೊಂಡಿತು. ನಾನು ಆ ವರೆಗೆ ಅದನ್ನು ನೋಡಿರಲಿಲ್ಲ. ಪರಮಾತ್ಮನ ಆದೇಶಕ್ಕೆ ತಲೆ ಬಾಗಿ ನಾನು ಓದು ಮುಂದುವರಿಸಿದೆ.]

ಅಂದು ಅವರು ಪೂಜೆ-ಧ್ಯಾನಕ್ಕೆ ಕುಳಿತು ಆ ಇಷ್ಟಲಿಂಗವನ್ನು ನಿರೀಕ್ಷಿಸುವಾಗಲೇ ಅದರಲ್ಲಿ ಬೆಳಕಿನ ಅವತರಣವಾಗಿದೆ. ಹೀಗೆ ಅವರು ಪರಮಾತ್ಮನ ಕಾರುಣ್ಯವನ್ನು ಅವತೀರ್ಣಗೊಳಿಸಿಕೊಂಡಿದ್ದಾರೆ. ದೇವರು ಕಾರುಣ್ಯಮಂ *[Grace]* ನೀಡಿ ಸಾಮರ್ಥ್ಯಮಂ *[Power]* ಕೂಡಿ ತನ್ನ ಕರುಣೆಯ ಕಂದನನ್ನು ಹೊರಜಗತ್ತಿಗೆ ಕಳಿಸುತ್ತಿದ್ದಾನೆ. ತನ್ನ ಕಾರ್ಯಕ್ಕೆ ಆಯ್ಕೆ ಮಾಡಿಕೊಂಡು, ತನ್ಮೂಲಕ ಹೊಸ ಧರ್ಮವನ್ನು ಕರುಣಿಸಿದ್ದಾನೆ.

ಈ ಪ್ರಸಂಗದ ವರ್ಣನೆಯನ್ನು ಧರ್ಮಪಿತರೇ ಸಾಕಷ್ಟು ವಚನಗಳಲ್ಲಿ ಮಾಡಿದ್ದಾರೆ. ಈಗಾಗಲೇ ನಾನು ಅವನ್ನು ವಿಶ್ವಧರ್ಮ ಪ್ರವಚನ ಲೇಖನ ಮಾಲೆಯಲ್ಲಿ ಧರ್ಮಪಿತರು ಕೂಡಲ ಸಂಗಮವನ್ನು ಬಿಡುವ ಸಂದರ್ಭದಲ್ಲಿ ಉಲ್ಲೇಖಿಸಿರುವ ಕಾರಣ, ಈಗ ಪುನರಾವರ್ತನೆ ಮಾಡುವುದಿಲ್ಲ. ಕೆಲವು ವಚನಗಳನ್ನು ಮಾತ್ರ ಓದುಗರ ಗಮನಕ್ಕೆ ತರುತ್ತಿದ್ದೇನೆ.

1. ಧ್ಯಾನಕ್ಕೆ ನಿಮ್ಮ ಶ್ರೀಮೂರ್ತಿಯೆ ಮುಖ್ಯವಯ್ಯಾ.
ಪೂಜೆಗೆ ನಿಮ್ಮ ಶ್ರೀಪಾದವೆ ಮುಖ್ಯವಯ್ಯಾ.
ಮಂತ್ರಕ್ಕೆ ನಿಮ್ಮ ನಾಮಮೃತವೆ ಮುಖ್ಯವಯ್ಯಾ.
ಮುಕ್ತಿಗೆ ನಿಮ್ಮ ಘನಕೃಪೆಯೆ ಮುಖ್ಯವಯ್ಯಾ.
ನಿಮ್ಮಿಂದಧಿಕರನಾರನೂ ಕಾಣೆನಯ್ಯಾ.
ಕೂಡಲಸಂಗಮದೇವಾ, ನೀವು ಜ್ಞಾನಗುರುವಾದ ಕಾರಣ. 1188

2. ಕಾಣಬಾರದ ವಸ್ತು ಕೈಗೆ ಸಾರಿತ್ತಯ್ಯಾ ;
ಆನಂದದಿಂದ ಆಡುವೆ ಹಾಡುವೆನಯ್ಯಾ.
ಎನ್ನ ಕಣ್ಣ ತುಂಬಿ ನೋಡುವೆ
ಎನ್ನ ಮನವೊಲಿದು ಭಕ್ತಿಯ ಮಾಡುವೆ
ಕೂಡಲಸಂಗಯ್ಯಾ ನಿನಗೆ, 1192

3. ಚಿನ್ಮಯ ಚಿತ್ಪ್ರಕಾಶ ಚಿದಾನಂದ ಲಿಂಗವೆ,
ಎನ್ನ ಹೃದಯ ಕಮಲದಲ್ಲಿ ಬೆಳಗಿ ತೋಱುವ ಪರಂಜ್ಯೋತಿ
ಎನ್ನ ಕರಸ್ಥಲಕ್ಕನುವಾದ ಧರ್ಮಿ,
ಎನ್ನ ಕಂಗಳ ಕೊನೆಯಲ್ಲಿ ಮೂರ್ತಿಗೊಂಡಿಪ್ಪೆಯಯ್ಯಾ.
ಕೂಡಲಸಂಗಮದೇವಯ್ಯಾ. 1202

4. ಎನ್ನ ಗತಿಮತಿ ನೀನೆ ಕಂಡಯ್ಯಾ.
ಎನ್ನ ಗುರು ಪರಮಗುರು ನೀನೆ ಕಂಡಯ್ಯಾ.
ಎನ್ನ ಅಂತರಂಗದ ಜ್ಯೋತಿ ನೀನೆ ಕಂಡಯ್ಯಾ.
ಕೂಡಲಸಂಗಮದೇವಾ,
ನೀನೆ ಎನಗೆ ಗುರು, ನಾನೆ ನಿಮ್ಮ ಶಿಷ್ಯನೆಂಬುದ, 1201
ನಿಮ್ಮ ಶರಣ ಸಿದ್ಧರಾಮಯ್ಯದೇವರು ಬಲ್ಲರು.

1. ಧ್ಯಾನಕ್ಕೆ ಪರಮಾತ್ಮನ ಶ್ರೀಮೂರ್ತಿಯು, ಪೂಜೆಗೆ ಅವನ ಶ್ರೀಪಾದವು, ಜಪಕ್ಕೆ ಅವನ ಮಂತ್ರವು, ಮುಕ್ತಿಗೆ ಅವನ ಕೃಪೆಯೂ ಕಾರಣವಾದುದರಿಂದ ಸೃಷ್ಟಿಕರ್ತನಿಗಿಂತಲೂ ಮಿಗಿಲಾದ ತತ್ತ್ವವು ಇಲ್ಲವೆಂದು ಹೇಳಿ, ಅವನೇ ತಮಗೆ ಜ್ಞಾನಗುರುವೆಂದು, ದೇವನಿಂದಲೇ ಅವನ ಸ್ವರೂಪವನ್ನು ತಿಳಿದು ಕೊಂಡೆನೆಂದು ಹೇಳುತ್ತಾರೆ.

ಹಾಗಾದರೆ ಇಂಥ ದೇವವನ್ನು ಪೂಜಿಸುವುದೆಂತು, ಧ್ಯಾನಿಸುವುದೆಂತು ? ಮನುಷ್ಯರ ಪ್ರಾಣಿಗಳ, ಗಿಡಮರಗಳ, ಕ್ಷುದ್ರ ದೈವಂಗಳ ಆಕಾರಗಳಲ್ಲಿ ಪೂಜಿಸುವುದು ಸರಿಯೆ ? ಈ ಅನ್ವೇಷಣೆಯಲ್ಲಿ ತೊಡಗಿರುವಾಗಲೇ ವಿಶ್ವದಾಕಾರದಲ್ಲಿ ಚುಳುಕಾಗಿಸುವ ಆಲೋಚನೆ ಹೊಳೆಯುತ್ತದೆ.

2. ಜಗದಗಲ ಮುಗಿಲಗಲನು, ಅಪ್ರಮಾಣ, ಅಗೋಚರನೂ ಆದ ದೇವನು ಕರಸ್ಥಲಕ್ಕೆ ಚುಳುಕಾಗಿ ಬರುವನು.

3. ಕಾಣಬಾರದ ವಸ್ತು ಅಂದರೆ ಅಗೋಚರನಾದ ಪರಮಾತ್ಮನು ಚುಳಕಾಗಿ ಕೈಗೆ ಸಾರುತ್ತಲೇ ಆನಂದದಿಂದ ಕುಣಿದಾಡುತ್ತಿದ್ದಾರೆ, ಮನವೊಲಿದು ಹಾಡುತ್ತಿದ್ದಾರೆ. ಕಣ್ಣು ತುಂಬಿ ನೋಡುತ್ತಾರೆ, ಹೃದಯ ತುಂಬಿ ಭಕ್ತಿಮಾಡುತ್ತಾರೆ. ಏನು ಪೂಜಿಸಬೇಕು; ನಿರಾಕಾರ ದೇವರನ್ನು ಹೇಗೆ ಪೂಜಿಸಬೇಕು ಎಂಬ ಸಮಸ್ಯೆ ಈಗ ಬಗೆಹರಿದಿದೆ.

4. ಚಿನ್ಮಯನು ಚಿತ್ಪ್ರಕಾಶ ಸ್ವರೂಪನೂ ಹೃದಯ ಕಮಲದಲ್ಲಿ ಬೆಳಗುವ ಪರಂಜ್ಯೋತಿಯೂ ಆದ ದೇವನು ಇದೀಗ ಕರಸ್ಥಲಕ್ಕೆ ಅನುವಾಗಿ ಬಂದಿದ್ದಾನೆ. ಕಂಗಳ ನಿರೀಕ್ಷಣೆಗೆ ಸಿಕ್ಕಿದ್ದಾನೆ.

5. ಧರ್ಮಪಿತರು ತಮ್ಮ 1201 ನೆಯ ವಚನದಲ್ಲಿ ಸ್ಪಷ್ಟವಾಗಿ ಹೇಳುತ್ತಾರೆ. ಪರಮಾತ್ಮನೇ ಅವರಿಗೆ ಗುರು, ಪರಮಗುರು, ಅಂತರಂಗದ ಜ್ಯೋತಿಯಾಗಿ ಮುನ್ನಡೆಸುವ ಶಕ್ತಿ; ದೇವರು ಅವರಿಗೆ ಗುರು, ವ್ಯಕ್ತಿಗುರುವಲ್ಲ ಎಂಬುದನ್ನು

ಸಿದ್ಧರಾಮೇಶ್ವರರು ಬಲ್ಲರು ಎಂದು ಹೇಳುತ್ತಾರೆ.

ಹೀಗೆ ಈ ಎಲ್ಲ ವಚನಗಳು ಕೆಳಗಿನ ಅಂಶಗಳನ್ನು ದೃಢಪಡಿಸುತ್ತವೆ.

1. ಇಷ್ಟಲಿಂಗ ಜನಕರು ಬಸವಣ್ಣನವರು
2. ಅವರಿಗೆ ವ್ಯಕ್ತಿ ಗುರುವಿಲ್ಲ
3. ದೇವರೇ ಗುರುವಾಗಿ ಅನುಗ್ರಹಿಸಿದ್ದಾನೆ; ತನ್ನ ಕೃಪೆಯನ್ನು ಅವತರಣ ಮಾಡುವ ಮೂಲಕ ಬಸವಣ್ಣನವರನ್ನು ತನ್ನ ಕಾರ್ಯಕ್ಕೆ, ಲೋಕೋದ್ಧಾರಕ್ಕೆ ಆಯ್ದುಕೊಂಡಿದ್ದಾನೆ.

ಸಿಂಗಿರಾಜನ ವಿವರಣೆ

ಸಿಂಗಿರಾಜ ಕವಿಯ ವಿವರಣೆ ಹೀಗಿದೆ. ರವಿಯ ಅಸ್ತದೊಳು ಚಂದ್ರರೋಹಿಣಿಯರ ಉದಯವಾಗುವ ವ್ಯತಿಪಾತ ಮುಹೂರ್ತ ಯೋಗ ಬಂದಿದೆ; ಅದೂ ಮಂಗಳವಾರ ಸಂಭವಿಸಿದೆ. ಇದು ಜೋತಿಷ್ಯದ ಪ್ರಕಾರ ಸುಧಾ ಮುಹೂರ್ತ. ಇದಕ್ಕೆ ಕಪಿಲ ಷಷ್ಠಿ ಎನ್ನುವರು. ಈ ಮುಹೂರ್ತದಲ್ಲಿ ಸ್ನಾನ ಮಾಡಲು, ಸಂಗಮೇಶ್ವರನ ದರ್ಶನಕ್ಕೆ ಜನ ಅಸಂಖ್ಯಾತರು ಬಂದಿರುವರು. ವಿಶೇಷ ಬಗೆಯ ಪೂಜೆಗಳನ್ನು ಪೂಜಾರಿಗಳು ಮಾಡುತ್ತಲಿರುವರು. ಬಡಬಗ್ಗರಿಗೆ ಒಳಗೆ ಬರಲು ಅವಕಾಶವಿಲ್ಲ, ಅಂಥ ಸಂದರ್ಭದಲ್ಲಿ ವನಸುಮಗಳನ್ನು ಆಯ್ದುಕೊಂಡು ತಾನೂ ಪೂಜಿಸಲು ಬಸವರಸ ಬರುತ್ತಲೇ ವಿಪ್ರರ ಕೋಪ ನೆತ್ತಿಗೆ ಏರುತ್ತದೆ. "ಕಾಡು ಸೊಪ್ಪು ಒಟ್ಟಿ ಪೂಜಿಸುವ ಅಜ್ಞಾನಿ ವಿಪ್ರನೀತ" ಎಂದು ಸಿಟ್ಟಿನಿಂದ

"ಕೊಂದು ಹಾಯ್ಕೆಳಿ ನೂಂಕಿದಾರು ಇವನೆಲ್ಲಿಯವ ಮುಂದರಿಯ ಮೂರ್ಖ" ಎನ್ನುತ ಕದನಕ್ಕೆ ಇಳಿದರು. ಆಗ ಕೆಲವು ಭಕ್ತರು ಬಸವರಸನನ್ನು ಅಕ್ಕರೆಯಿಂದ ಬಿಡಿಸಿಕೊಳ್ಳುತ್ತಿದ್ದರೆ, ವಿಪ್ರರು ಹಲ್ಲೆ ಮಾಡಲು ಯತ್ನಿಸುವರು.

ನೆರವಿ ನೆರೆಯಿತ್ತು ಕಾಹುರಮಸಗಿತೆಮದೂತ
ಹರಗಣಂಗಳ ಸಮರದಂತತ್ತಲಿತ್ತ ಬಸ
ವರಸನನ್ನವರೆಳೆಯೆ ಇವರು ಸೆಳೆಕೊಳ್ಳುತಿಹ ಸಮಯದೊಳು ಶಿವಲಿಂಗದ
ಶಿರದೊಳೊಗೆಯಿತು ಬ್ರಹ್ಮನಾದವದು ಬ್ರಹ್ಮಾಂಡ
ಪರಿಯಂತ ವೇದಿಸೆಲವೆಲವೊ ಬಸವನ ಪೂಜೆ
ನಿರುತ ನೀವ್ಮಾಡಿದ ಫಲಕ್ಕೆ ಫಲವೀವ ವರುಷದ ಪೂಜೆಯೆನಗೆನುತಿರೆ ॥

(ಸಂಧಿ : 6 ಪ : 17)

ಯಮದೂತರು-ಶಿವದೂತರ ನಡುವೆ ಸಮರ ನಡೆಯುತ್ತಿದೆ ಏನೋ ಎಂಬಂತೆ ಭಕ್ತರು ಬಸವರಸನನ್ನು ರಕ್ಷಿಸಲೆತ್ನಿಸಿದರೆ ಪೂಜಾರಿಗಳು ಎಳೆದಾಡಲು ಯತ್ನಿಸುತ್ತಾರೆ. *

ಆಗ ಶಿವಲಿಂಗದ ಶಿರದೊಳು ಬ್ರಹ್ಮನಾದ ಉಂಟಾಯಿತು. ನೀವು ವರುಷಕಾಲ ಮಾಡಿದ ಪೂಜೆಗಿಂತಲೂ ಬಸವರಸ ಮಾಡಿದ ಪೂಜೆಯೇ ನಮಗೆ ಸಲ್ಲಿತು ಎಂಬುವ ವಾಣಿಯನ್ನು ಕೇಳುತ್ತಲೇ ಭಕ್ತರ ಉತ್ಸಾಹ ಮೇರೆ ಮೀರಿತು. ಆಗ ತಮ್ಮ ಪ್ರೀತಿಯ ಬಸವರಸನನ್ನು ಹೊತ್ತು ಮೆರೆಸುತ್ತಾರೆ. ಸಂಗನೆ ಬಸವ, ಬಸವನೇ ಸಂಗ ಎಂದು ಬಸವರಸನನ್ನು ಪ್ರದಕ್ಷಿಸುತ್ತಾರೆ. (ಪದ್ಯ. 21)

ಈ ಘಟನೆ ವಿಪರೀತ ಪ್ರಚಾರ ಪಡೆಯಿತು. ಜಾತ್ರೆಗೆ ನಾಡಿನ ಮೂಲೆಮೂಲೆಗಳಿಂದ ಬಂದ ಜನರು ಚದುರಿ ಪ್ರಚಾರ ಮಾಡಿದರು. ಇದು ಬಿಜ್ಜಳನ ಆಸ್ಥಾನವನ್ನು ಮುಟ್ಟಿತು. ಬಾಗೆವಾಡಿಯ ಮಂಡಗೆಯ ಮಾದಿರಾಜನ ಮಗನೀತ ಎಂದು ತಿಳಿದ ಬಲದೇವ ಮಂತ್ರಿ ಅಲ್ಲಿಂದಲೇ ಕೈಮುಗಿದು, 'ಬಸವರಸನ ತಾಯಿ, ನನ್ನ ತಾಯಿಯ ಕಡೆಯಿಂದ ಸಂಬಂಧಿ, ಸೋದರಿಯಾಗಬೇಕು. ಈ ಬಸವರಸನಿಗೆ ನನ್ನ ಮಗಳನ್ನು ಕೊಡುವೆ" ಎಂದು ತಕ್ಷಣವೇ ನಿರೂಪವನ್ನು ಕಳಿಸುವನು.

ಹರಿಹರ ಮತ್ತು ಸಿಂಗಿರಾಜನ ನಿರೂಪಣೆಗಳಲ್ಲಿ ವ್ಯತ್ಯಾಸವಿದೆ. ಹರಿಹರನಲ್ಲಿ ಖಚಿತತೆ ಮತ್ತು ದಾರ್ಶನಿಕತೆ ಇದ್ದರೆ ಸಿಂಗಿರಾಜನಲ್ಲಿ ಯಾಂತ್ರಿಕ ನಿರೂಪಣೆ ಇದೆ. ಸಾಮ್ಯವಿರುವುದು ವಿಶೇಷ ಘಟನೆ ನಡೆದಿರುವುದರಲ್ಲಿ. ಸಂಗಮನಾಥನ ವಾಣಿ ಎರಡೂ ಪ್ರಸಂಗಗಳಲ್ಲಿ ಕೇಳಿಬಂದಿದೆ. ಮತ್ತು ಇದುವೇ ಬಸವಣ್ಣನವರು ಸೀಮಿತ ಕಾರ್ಯಕ್ಷೇತ್ರದಿಂದ ವಿಶಾಲವಾದ ಕಾರ್ಯಕ್ಷೇತ್ರಕ್ಕೆ ಹೋಗಲು ಪ್ರೇರಣೆಯಾಗಿದೆ.

ವ್ಯಕ್ತಿನಿಷ್ಠ ಧರ್ಮವಲ್ಲವೆ ?

ಕೆಲವರು ಈ ಧರ್ಮವು ಮೊದಲೇ ಇತ್ತು, ಬಸವಣ್ಣನವರು ಸ್ಥಾಪಕರಲ್ಲ ಎಂದರೆ, ಮತ್ತೆ ಕೆಲವರು ಶರಣರು ಸಾಮೂಹಿಕವಾಗಿ ಸ್ಥಾಪಿಸಿದರು ಎಂದು ಪ್ರತಿಪಾದಿಸುತ್ತಾರೆ. ನಾನೂ ಒಂದು ಕಾಲದಲ್ಲಿ, ಬಸವ ತತ್ತ್ವ ದರ್ಶನ ಪುಸ್ತಕ ಬರೆದ ಕಾಲದಲ್ಲಿ ಈ ಎರಡನೆ ವಾದವನ್ನು ಪ್ರತಿಪಾದಿಸಿದ್ದೆ. ಆದರೆ ಇದು ಅಸಂಬದ್ಧ ಎಂಬುದು ಈಗ ಮನವರಿಕೆಯಾಗಿದೆ. ಬಸವ ತತ್ತ್ವದರ್ಶನ ಬರೆದಾಗ ನಾನಿನ್ನೂ ಎಂ. ಎ. ಫಿಲಾಸಫಿ ಓದಲು ಆರಂಭಿಸಿರಲಿಲ್ಲ. ಮತ್ತು ಅವರಿವರ ಸಾಹಿತ್ಯ ಓದಿಯೇ ವಿಚಾರಗಳನ್ನು ರೂಪಿಸಿಕೊಳ್ಳಬೇಕಷ್ಟೆ, ಫಿಲಾಸಫಿ ಆಫ್ ರಿಲಿಜನ್ ನಮ್ಮ ವಿಚಾರಧಾರೆಯನ್ನು

---

* ಇಂದೂ ಅದೇ ನಡೆಯುತ್ತಿರುವುದು ಚೋದ್ಯವಲ್ಲವೆ ? ವಿಚಾರಶೀಲರು, ಸಮತಾವಾದಿಗಳು, ಭಕ್ತರು ಬಸವಣ್ಣನನ್ನು ಅರ್ಥಾತ್ ಬಸವತತ್ತ್ವವನ್ನು ರಕ್ಷಿಸಲೆಳಸುತ್ತಿದ್ದರೆ ಪುರೋಹಿತಶಾಹಿ ಹಿಗ್ಗಾಮುಗ್ಗಾ ಬಸವ ತತ್ತ್ವವನ್ನು ಎಳೆದಾಡುತ್ತಿರುವುದನ್ನು ಪತ್ರಿಕೆಗಳ ವಾದವಿವಾದದಲ್ಲಿ ನೋಡುತ್ತೀರಷ್ಟೆ.

ಕ್ರಮಬದ್ಧಗೊಳಿಸುತ್ತದೆ. **ಮುಂದೆ ಕ್ರೈಸ್ತ**ಧರ್ಮದೊಡನೆ ತೌಲನಿಕ ಅಧ್ಯಯನ ಮಾಡಲು ಪಿ.ಹೆಚ್. ಡಿ ಗೆ ವಿಷಯ ಆರಿಸಿಕೊಂಡು ಓದಲಾರಂಭಿಸಿದಾಗ ನಮ್ಮ ಅಧ್ಯಯನಕ್ಕೆ ಒಂದು ರೂಪು ಬರತೊಡಗಿತು.

ವೈದಿಕ ಧರ್ಮವೊಂದನ್ನು ಬಿಟ್ಟರೆ, ಜಗತ್ತಿನ ಎಲ್ಲ ಧರ್ಮಗಳಿಗೂ ಆದ್ಯರು ಸ್ಥಾಪಕರು ಇರುವುದನ್ನು ಕಾಣಬಹುದು. ಯಹೂದಿ ಧರ್ಮವೂ ವೈದಿಕ ಧರ್ಮವನ್ನೇ ಹೋಲುತ್ತದೆ. ಇವೆರಡೂ ನೈಸರ್ಗಿಕ ಧರ್ಮಗಳು. ಇವುಗಳಲ್ಲಿ ಸುಸಂಬದ್ಧತೆ ಇರದು, ಇವು ಹುಟ್ಟಿನಿಂದಲೇ ಅನುಯಾಯಿತ್ವ ನಿರ್ಧರಿಸುವವು ಮತ್ತು ಯಾರನ್ನೂ ಒಳಗೆ ಬರಮಾಡಿಕೊಳ್ಳದ ಧೋರಣೆ ಹೊಂದಿರುವುವು.

ಒಂದು ಮಗುವಿಗೆ ಒಬ್ಬನೇ ಕಾರಣ ಕರ್ತೃ ಹೇಗೋ ಹಾಗೆ ಧರ್ಮಕ್ಕೂ ಒಬ್ಬನೇ ಕಾರಣೀಭೂತನಾಗುತ್ತಾನೆ. ಹಲವಾರು ಜನಕೂಡಿ ಒಂದು ಮಗುವಿಗೆ ಜನ್ಮ-ಕೊಡಲು ಹೇಗೆ ಬರದೋ, ಧರ್ಮವಾದರೂ ಅಷ್ಟೇ. ಒಬ್ಬ ವ್ಯಕ್ತಿಯು ಹುಟ್ಟಿಸಿದ ಮಗುವನ್ನು ಅಸಂಖ್ಯಾತರು ಲಾಲನೆ-ಪಾಲನೆಮಾಡಿ ಬೆಳೆಸುವುದು ಹೇಗೆ ಸಾಧ್ಯವೋ ಹಾಗೆ ಅನೇಕರು ಧರ್ಮವನ್ನು ಬೆಳೆಸಬಹುದು; ತಮ್ಮ ಸಾಹಿತ್ಯದ ಕೊಡುಗೆಯ ಟಾನಿಕ್ ನೀಡಿ ಪುಷ್ಟೀಕರಿಸಬಹುದು. ಮನದಲ್ಲಿ ಏನೇನೋ ಹಂಚಿಕೆ ಹಾಕಿಕೊಂಡು ಬರೆಯುವ, ಯಾರನ್ನೋ ಓಲೈಸಲು, ಮೆಚ್ಚಿಸಲು ಬರೆಯುವ ಸಾಹಿತಿಗಳ ಬರಹ-ಗಳಿಂದ ತಪ್ಪು ತಪ್ಪಾಗಿ ತಿಳಿದಿದ್ದ ನಾನು ನೇರವಾಗಿ ವಚನ ಸಾಹಿತ್ಯವನ್ನೇ ನಿಷ್ಕಲ್ಮಶ ಮನಸ್ಸಿನಿಂದ ಓದುತ್ತ ಹೋದಾಗ ಸತ್ಯ ಸಂಗತಿಗಳು ಬಯಲಾಗತೊಡಗಿದವು. ಧರ್ಮಪಿತ ಬಸವಣ್ಣನವರು ಬೋಧಿಸಿದ ಈ ಧರ್ಮವು ತತ್ತ್ವ ಪ್ರಧಾನವಾಗಿರುವು-ದಾದರೂ, ಅಷ್ಟೇ ವ್ಯಕ್ತಿ ಪ್ರಾಧಾನ್ಯತೆಯೂ ಇಲ್ಲಿ ಹಾಸುಹೊಕ್ಕಾಗಿದೆ. ವಿದ್ಯುತ್ ಹರಿದಾಗ ಮಾತ್ರ ದೀಪ ಉರಿಯುತ್ತದೆ, ಪಂಕ ತಿರುಗುತ್ತದೆ, ನೀರು ಕಾಯುತ್ತದೆ. ಹಾಗೆ 'ಬಸವ ಶಕ್ತಿ' ಹರಿದಾಗಲೇ ಇಷ್ಟಲಿಂಗವು ಬೆಳಗುತ್ತದೆ, ಜಂಗಮಕ್ಕೆ ಬೆಲೆ ಬರುತ್ತದೆ; ಪಾದೋದಕ-ಪ್ರಸಾದಗಳು ಪರಿಣಾಮ ಬೀರುತ್ತವೆ.' ವಚನ ಸಾಹಿತ್ಯವು ಹೆಜ್ಜೆ ಹೆಜ್ಜೆಗೆ ಒಬ್ಬ ಮಹಾಮಹಿಮನನ್ನು ಬೊಟ್ಟು ಮಾಡಿತೋರಿಸುತ್ತದೆ. ಆತನೇ ಧರ್ಮ ಪಿತ ಬಸವಣ್ಣ.

ಇದಕ್ಕೊಂದು ದೃಷ್ಟಾಂತ ಹೇಳುವೆ. ಒಮ್ಮೆ ಬೀರಬಲ್ ಮಹಾಶಯನು ಪರ ದೇಶಕ್ಕೆ ಹೋದನು. ಅಲ್ಲಿಯ ರಾಜನು ಬೀರಬಲ್ಲನ ಬುದ್ಧಿಮತ್ತೆಯ ಬಗ್ಗೆ ಬಹಳ ಕೇಳಿ ತಿಳಿದಿದ್ದನು. ಈತನ ಬುದ್ಧಿವಂತಿಕೆಯನ್ನು ಪರೀಕ್ಷಿಸಲು ರಾಜನು ಒಂದು ಉಪಾಯ ಯೋಜಿಸಿದ. ಬೀರಬಲ್ಲನು ರಾಜನ ಆಸ್ಥಾನವನ್ನು ಪ್ರವೇಶಿಸಿದ. ಅರೆ ಏನಾಶ್ಚರ್ಯ. ಒಂದೂ ಪೀಠೋಪಕರಣಗಳಿಲ್ಲ, ಸಿಂಹಾಸನವಿಲ್ಲ. ಎಲ್ಲರೂ ಯಾವ

ತಾರತಮ್ಯವಿಲ್ಲದೆ ಕೆಳಗೆ ಹಾಸಿದ ರತ್ನಗಂಬಳಿಯ ಮೇಲೆ ಕುಳಿತಿದ್ದಾರೆ. ಆ ಗುಂಪಿನಲ್ಲಿ ರಾಜನಿದ್ದಾನೆ. ಅವನನ್ನು ಗುರುತಿಸಿ ತನ್ನ ರಾಜನ ಕಡೆಯಿಂದ ತಂದಿರುವ ಕೊಡುಗೆ-ಗಳನ್ನು ನೀಡಬೇಕು. ಎಲ್ಲರೂ ಒಂದೇ ತರಹ ಬಟ್ಟೆ ಹಾಕಿದ್ದಾರೆ.

ಬೀರಬಲ್ಲನಿಗೆ ಹೂಡಿದ ಹೂಟ ಗೊತ್ತಾಯಿತು. ಆತ ವಿಚಲಿತನಾಗದೆ ನಿಧಾನ-ವಾಗಿ ಹೆಜ್ಜೆಗಳನ್ನು ಇಡುತ್ತ ಮುಂದೆಸಾಗಿದ. ಎಲ್ಲರೂ ಕುತೂಹಲಿಗಳಾಗಿದ್ದರು. ರತ್ನಗಂಬಳಿಯ ಮೇಲೆ ಜನರ ಗುಂಪಿನಲ್ಲಿ ಕುಳಿತಿದ್ದ ರಾಜನಿಗೆ ವಂದಿಸಿ ಮಾಲೆ ಹಾಕಿ ಬೀರಬಲ್ಲ ಸ್ನೇಹದ ಕೊಡುಗೆಗಳನ್ನು ಕೊಟ್ಟ. ಎಲ್ಲರೂ ಚಕಿತರಾದರು. ರಾಜನು ಕೇಳಿದ, "ನಾನೇ ರಾಜ ಎಂದು ಹೇಗೆ ಗುರುತಿಸಿದೆ ?"

"ನೀವುಗಳೆಲ್ಲ ಈ ರೀತಿ ಒಂದೇ ತರಹ ಬಟ್ಟೆಯುಟ್ಟು, ಸಿಂಹಾಸನ, ಕುರ್ಚಿಗಳ ತಾರತಮ್ಯವಿಲ್ಲದೆ ಕುಳಿತಿರುವುದನ್ನು ನೋಡಿ ನನ್ನನ್ನು ಪರೀಕ್ಷಿಸಲೆಂದೇ ಮಾಡಿರುವ ಕಾರ್ಯತಂತ್ರ ಎಂದರಿತೆ. ಸೂಕ್ಷ್ಮವಾಗಿ ಎಲ್ಲರನ್ನೂ ನೋಡಿದೆ. ಎಲ್ಲರ ಕಣ್ಣುಗಳಲ್ಲಿ ಕುತೂಹಲವಿದ್ದಿತು. ಒಮ್ಮೆ ನನ್ನನ್ನು ಮತ್ತೊಮ್ಮೆ ಯಾರೋ ಒಬ್ಬರನ್ನು ನೋಡು-ತ್ತಿದ್ದರು. ಎಲ್ಲರ ನೋಟ ಯಾರ ಮೇಲೆ ಕೇಂದ್ರೀಕೃತವಾಗುತ್ತಿತ್ತೋ ಅವರೇ ರಾಜರಿರಬೇಕು ಎಂದುಕೊಂಡು ಬಂದು ಮಾಲೆ ಹಾಕಿದೆ."

ಧರ್ಮಪಿತರು 'ಎನಗಿಂತ ಕಿರಿಯರಿಲ್ಲ, ಶಿವ ಭಕ್ತರಿಗಿಂತ ಹಿರಿಯರಿಲ್ಲ' ಎಂದು ಕಿಂಕರತೆಯಿಂದ ವರ್ತಿಸಿದರು. ಎಲ್ಲರಿಗೂ ಸಮಾನಗೌರವ ಕೊಟ್ಟರು. ಆದರೆ ಎಲ್ಲರೂ ಕೂಡಿ ಹಾಡಿ ಹರಸಿದ್ದು, ಕೊಂಡಾಡಿ ಗೌರವಿಸಿದ್ದು ಬಸವಣ್ಣನವರನ್ನು. ಉಳಿದ ಯಾರ ಹೆಸರೂ ಮಂತ್ರವಾಗಲಿಲ್ಲ, ಧರ್ಮಪಿತರ ಹೆಸರು ಮಾತ್ರ ಮಂತ್ರವಾಯಿತು. ವಚನ ವಾಙ್ಮಯದಲ್ಲಿ ಅತಿ ಹೆಚ್ಚಿನ ಸ್ತೋತ್ರ ವಚನಗಳಿರುವುದು ಧರ್ಮಪಿತರ ಮೇಲೆ, ಅತಿ ಹೆಚ್ಚಿನ ಕಾವ್ಯ ಕೃತಿಗಳು ಬರೆಯಲ್ಪಟ್ಟಿರುವುದು ಅವರ ಮೇಲೆಯೇ.

ಇಂದು ಲಿಂಗವಂತ ಧರ್ಮ ಬದುಕಿರುವುದು, ನಿಂತಿರುವುದು ಬಸವ ಶಕ್ತಿಯ ಮೇಲೆ. ಒಂದು ಮಾತನ್ನು ಸ್ಪಷ್ಟವಾಗಿ ಲಿಂಗವಂತರು ತಿಳಿಯಬೇಕು. ಪುರೋಹಿತ ಶಾಹಿಯ ದೃಷ್ಟಿಕೋನದವರನ್ನು ಬಿಟ್ಟರೆ, ಬಾಕಿ ಎಲ್ಲ ವಿಚಾರಶೀಲರು ಕೆಲವೊಮ್ಮೆ ಬಸವ ತತ್ತ್ವಕ್ಕೆ ವಿರುದ್ಧವಾಗಿ ನಡೆಯುವ ಲಿಂಗವಂತರ ಮೇಲೆ ಇವರು ಮಾಡುವ ಜಾತೀಯತೆಯನ್ನು ಕಂಡು ಕಿಡಿಕಾರಿದರೂ ಬಸವಣ್ಣನನ್ನು ಇವರ ಬೆನ್ನಹಿಂದೆ ಕಾಣು-ತ್ತಲೇ ಟೀಕಾಸ್ತ್ರವನ್ನು ಕೆಳಗಿಡುವರು. ಹೀಗೆ ಒಂದು ರೀತಿಯಲ್ಲಿ ಬಸವಣ್ಣನವರು ಈ ಸಮಾಜದ ಶ್ರೀರಕ್ಷೆ. ಇದನ್ನರಿಯದೆ ಧರ್ಮ ಗುರುವಿನ ಸ್ಥಾನವನ್ನು ಕಡೆಗಣಿಸಿ ಇವರು ನಡೆದರೆ ತೀವ್ರತರ ಪಶ್ಚಾತ್ತಾಪವನ್ನು ಪಡಬೇಕಾದೀತು. ವೀರಶರಣ, ತತ್ತ್ವ ನಿಷ್ಠುರಿ ಮಡಿವಾಳ ಮಾಚಿದೇವರು ಹೇಳುವರು :

ಎತ್ತೆತ್ತ ನೋಡಿದೊಡತ್ತತ್ತ ಬಸವನೆಂಬ ಬಳ್ಳಿ
ಎತ್ತಿ ನೋಡಿದರೆ ಲಿಂಗವೆಂಬ ಗೊಂಚಲು
ಒತ್ತಿ ಹಿಂಡಿದರೆ ಭಕ್ತಿ ಎಂಬ ರಸವಯ್ಯ
ಗುರುವು ಬಸವಣ್ಣನಿಂದ, ಲಿಂಗವು ಬಸವಣ್ಣನಿಂದ
ಜಂಗಮವು ಬಸವಣ್ಣನಿಂದ,
ಪಾದೋದಕ ಪ್ರಸಾದವೆಲ್ಲವು ಬಸವಣ್ಣನಿಂದ
ಅತ್ತ ಬಲ್ಲಡೆ ನೀವು ಹೇಳಿರೋ, ಇತ್ತ ಬಲ್ಲಡೆ ನೀವು ಕೇಳಿರೋ
ಬಸವಾ ಬಸವಾ ಎಂದು ಮಜ್ಜನಕ್ಕೆರೆಯದವನ ಭಕ್ತಿ
ಶೂನ್ಯ ಕಾಣಾ ಕಲಿದೇವರ ದೇವ.

ನನಗೆ ಇಂದು (8-8-92) ತಟ್ಟನೆ ಒಂದು ವಿಚಾರ ಹೊಳೆಯಿತು. ಬಸವಣ್ಣ ಮೊದಲೋ, ಇಷ್ಟಲಿಂಗ ಮೊದಲೋ ? ಎಂದು ಅಡ್ಡಾಡುತ್ತ ಚಿಂತಿಸುತ್ತಿದ್ದೆ, ಆಗ ಮಾಚಿದೇವರ ವಚನ ಚಿತ್ತಭಿತ್ತಿಯಲ್ಲಿ ಸುಳಿಯಿತು.

ಮೊದಲು 'ಬಸವಣ್ಣ'ನೆಂಬ ಬಳ್ಳಿ ಹರಿಯಿತು. ಆ ಮಹಾಚೇತನದ ಪ್ರಭಾವದಿಂದ 'ಲಿಂಗಭಕ್ತಿ' ಬೆಳೆಯಿತು. ಆ ಮಹಾಪುರುಷರು ಹುಟ್ಟಿ, ಬೆಳೆದು, ಕಾರ್ಯ ಮಾಡಿ, ಐಕ್ಯರಾದ ಪ್ರದೇಶಗಳಲ್ಲಿ ಮತ್ತು ಅವರ ನೇರ ಪ್ರಭಾವಕೊಳ್ಳಗಾಗಿ ಈ ಧರ್ಮವನ್ನು ಸ್ವೀಕಾರ ಮಾಡಿ, ಪ್ರಚಾರಮಾಡಿದ ಸಿದ್ಧರಾಮೇಶ್ವರ, ಚನ್ನಬಸವಣ್ಣ ಮುಂತಾದವರು ಆಗಿಹೋದ ಎಡೆಗಳಲ್ಲಿ 'ಲಿಂಗವಂತ' ಸಮಾಜದ ಬೆಳೆ ಹುಲುಸಾಗಿದೆ. ಒಂದು ವೇಳೆ ಮೊದಲೇ ಲಿಂಗವಂತ ಧರ್ಮವು ಇದ್ದಿದ್ದರೆ ಇಂಥದೊಂದು ಸಮಾಜ ಬೇರೆ ಕಡೆ ಏಕಿಲ್ಲ ? ಎಲ್ಲರಂತೆ ತಾಯಿತಂದೆಯರ ಹೊಟ್ಟೆಯಲ್ಲಿ ಹುಟ್ಟಿದ ಈ ಮಹಾ ಪುರುಷ ಅದ್ಭುತವಾಗಿ ಜನರನ್ನು ಪರಿವರ್ತಿಸಿ, ಅನುಯಾಯಿಗಳನ್ನು ಪಡೆದರು : ವೀರಶೈವರು ಲಿಂಗೋದ್ಭವ ಆಚಾರ್ಯರುಗಳು ಹುಟ್ಟಿದರೆಂದು ಕೊಚ್ಚಿಕೊಳ್ಳುವ ಕೇದಾರ, ಕಾಶಿ, ಕೊಲ್ಲಿಪಾಕಿಗಳಲ್ಲಿ ಏಕೆ ಲಿಂಗವಂತ ಸಮಾಜ ಅಧಿಕವಾಗಿಲ್ಲ. ?

ಕೃಷ್ಣರಾಜ ಸಾಗರ ಅಣೆಕಟ್ಟಿನ ಮಹಾಶಿಲ್ಪಿ ಯಾರು ? ಎಂದು ಕೇಳುತ್ತಲೇ ಬರುವ ಉತ್ತರ ಸರ್. ಎಂ. ವಿಶ್ವೇಶ್ವರಯ್ಯ. ಶ್ರೀ ವಿಶ್ವೇಶ್ವರಯ್ಯ ಒಬ್ಬರೇ ಕಟ್ಟಿದರೆ? ಅಥವಾ ಅವರೇನು ಸಿಮೆಂಟು ಕಲಸಿ ಪುಟ್ಟಿಹೊತ್ತರೆ? ಅನೇಕರು ಸೂಪರಿಂಟೆಂಡೆಂಟ್, ಚೀಫ್, ಎಕ್ಸಿಕ್ಯುಟಿವ್ ಇತ್ಯಾದಿ ಎಂಜಿನಿಯರುಗಳು, ಗುತ್ತಿಗೆದಾರರು, ಕೂಲಿಗಳು ಕೆಲಸ ಮಾಡಿ ಕಟ್ಟಿರಬಹುದು ಆ ಅಣೆಕಟ್ಟನ್ನು. ಆದರೆ ಇದರ ಮಾಸ್ಟರ್ ಪ್ಲ್ಯಾನ್ ಮಾಡಿದವರು ವಿಶ್ವೇಶ್ವರಯ್ಯ. ಅದೇ ರೀತಿ ಪ್ರಭುದೇವರಿಂದ ಹಿಡಿದು ಬಸವಲಿಂಗ ಶರಣರು, ಬಾಲಲೀಲಾ ಮಹಾಂತ ಶಿವಯೋಗಿಗಳವರೆಗೆ ಈ ಪರಂಪರೆಯು ಅಣೆಕಟ್ಟು

ನಿರ್ಮಾಣ ಮಾಡಲು ಯತ್ನಿಸಿದವರಿರಬಹುದು. ಆದರೆ ಇದರ ಮಾಸ್ಟರ್ ಪ್ಲಾನ್ ಮಾಡಿದ ಧೀಮಂತರು ಧರ್ಮಪಿತ ಬಸವಣ್ಣನವರು. ಸಮಗ್ರಕ್ರಾಂತಿಯ, ಸರ್ವಾಂಗ ಪರಿಪೂರ್ಣ, ಸಮತಾವಾದಿ ಸಮಾಜದ ನೀಲನಕ್ಷೆಯು ಕೂಡಲ ಸಂಗಮದಲ್ಲಿರುವಾಗಲೇ ಅವರ ಹೃದಯದಲ್ಲಿ ರೂಪುಗೊಂಡಿತ್ತು. ಅದನ್ನು ಕ್ರಿಯಾರೂಪಕ್ಕೆ ಇಳಿಸಲೆಂದೇ ಅವರು ರಾಜಧಾನಿಗೆ ಹೋದುದು, ಅಂತೆಯೇ ಅವರ ಸುತ್ತಲೂ ಶರಣ ಸಮಾಜ ನೆರೆಯಿತು. ಶರಣ ಧರ್ಮದ ಜೀವಕೋಶದಲ್ಲಿ ಅವರೇ ನ್ಯೂಕ್ಲಿಯಸ್ ಎನ್ನುವುದನ್ನು ಯಾರೂ ಕಡೆಗಣಿಸಲಾಗುವುದಿಲ್ಲ; ಹೀಗಾಗಿ ಅವರು ಕಾಲಿಟ್ಟದ್ದೇ ಕಲ್ಯಾಣವಾಯಿತು;

"ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ ಮುಂತಾದುವು ಎಂದಿನಿಂದಲೋ ಇದ್ದವು. ಆದ್ದರಿಂದ ಮೊದಲೇ ಈ ಧರ್ಮವು ಇದ್ದಿತು." ಎಂದು ವಾದಿಸುವ ಕೆಲವು ವಿದ್ವಾಂಸರಿದ್ದಾರೆ. ಭಾಷೆ ಹುಟ್ಟಿದಾಗಲೇ ಪದಗಳು ಇರುತ್ತವೆ. ಅಂದ ಮಾತ್ರಕ್ಕೆ ಅವುಗಳ ಹಿಂದಿರುವ ಪರಿಕಲ್ಪನೆ (Concept) ಬದಲಾಗುವುದು ಗಮನಾರ್ಹವಲ್ಲವೆ ? ಒಬ್ಬ ಮಹಾಕವಿ ಒಂದು ಉದ್ಗ್ರಂಥವೊಂದನ್ನು, ಕಾವ್ಯವೊಂದನ್ನು ಬರೆಯುತ್ತಾನೆ. ಇದೇನು ಮಹಾ ? ಮೊದಲೇ ಈ ಪದಗಳೆಲ್ಲ ಕನ್ನಡಭಾಷೆಯಲ್ಲಿ ಇದ್ದೇ ಇದ್ದುವು ಎನ್ನುವುದು ಅಸಂಬದ್ಧವಲ್ಲವೆ ? ಪ್ರವಾದಿಗಳು ಇರುವ ಪದಗಳನ್ನೇ ಬಳಸಿಕೊಂಡೇ ಧರ್ಮಬೋಧೆ ಮಾಡುವರು. ಆ ಪದಗಳಿಗೆ ವಿಶಿಷ್ಟ ಅರ್ಥವ್ಯಾಪ್ತಿ ನೀಡುವರು.

ಕೂಡಲ ಸಂಗಮದ ವಾಸ್ತವ್ಯದ ಸಮಯದಲ್ಲೇ ಧರ್ಮಪಿತ ಬಸವಣ್ಣನವರ ಹೃದಯದಲ್ಲಿ ಹುಟ್ಟಿದ ಲಿಂಗವಂತ ಧರ್ಮವು ಕಲ್ಯಾಣದ ಕಾರ್ಯಕ್ಷೇತ್ರವನ್ನು ಅವರು ಪ್ರವೇಶಿಸಿದಾಗ ಸುಳಿದೆಗೆದು ಬೆಳೆದು, ದಾಂಗುಡಿಯಿಟ್ಟು ಹಬ್ಬತೊಡಗಿತು. ಅನುಭವ ಮಂಟಪವು ಸ್ಥಾಪನೆಯಾದ 15 ವರ್ಷಗಳ ಬಳಿಕ ಅಲ್ಲಮ ಪ್ರಭುದೇವರು, ಸಿದ್ಧರಾಮರು ಆಗಮಿಸಿದರು. 36 ವರ್ಷಗಳ ಕಲ್ಯಾಣದ ವಾಸ್ತವ್ಯ ಬಸವಣ್ಣನವರದಾದರೆ ಅಲ್ಲಮಪ್ರಭುಗಳು ಇದ್ದುದು 12 ವರ್ಷ ಮಾತ್ರ.

ಗುರುಬಸವಣ್ಣನವರ ಜನನ ಕ್ರಿ.ಶ.	1106
ಕೂಡಲ ಸಂಗಮದಿಂದ ನಿರ್ಗಮನ	1127
ಮಂಗಳವೇಡೆಯ ವಾಸ್ತವ್ಯ ಸುಮಾರು	5 ವರ್ಷಗಳು
ಕಲ್ಯಾಣಕ್ಕೆ ಆಗಮನ	1132.
ಅನುಭವ ಮಂಟಪ ರಚನೆ	1141
ಪ್ರಭುದೇವ-ಸಿದ್ಧರಾಮರ ಆಗಮನ	1156.
ಬಸವಣ್ಣನವರ ಲಿಂಗೈಕ್ಯ	1168.

ಪ್ರಭುದೇವರು-ಸಿದ್ಧರಾಮೇಶ್ವರರು ಬರುವ 15 ವರ್ಷಗಳ ಪೂರ್ವದಲ್ಲೇ ಮಂಟಪ
ಸ್ಥಾಪನೆಯಾಗಿದ್ದರೆ, ಧರ್ಮ ಪ್ರಚಾರಕಾರ್ಯ 24 ವರ್ಷಗಳ ಮೊದಲೇ ಆರಂಭವಾ
ಗಿದ್ದಿತು. ಅನುಭವ ಮಂಟಪವೆಂಬ ಸುಂದರ ಹೂಬನವು ಅರಳಿಸಿದ ತತ್ತ್ವ ಸಂದೇಶ
ಗಳ ಸೌರಭಕ್ಕೆ ಆಕರ್ಷಿತರಾಗಿಯೇ ಪ್ರಭುದೇವರಂತಹ ಮಹಿಮರು ಬಂದುದು. ಇಂಥಾ
ಪ್ರತಿಭಾವಂತ ಚೇತನಗಳು ಬಂದುದರಿಂದ ಸಾಹಿತ್ಯವು ಸಂವೃದ್ಧಿಯಾಯಿತು; ತಾತ್ತ್ವಿಕ
ಚಿಂತನೆಗೆ ನಿಖರತೆ ಬಂದಿತು. ಈ ಸಾಹಿತ್ಯ ಸಂವರ್ಧನ ಕ್ರಿಯೆಯನ್ನು ಜೇಂಗೂಡಿನ
ಚಟುವಟಿಕೆಗೆ ಹೋಲಿಸಬಹುದು. ಧರ್ಮಪಿತ ಬಸವಣ್ಣನವರು ಎಂಬ ರಾಣಿಜೇನಿನ
ನೇತೃತ್ವದಲ್ಲಿ ಅನುಭವ ಮಂಟಪವೆಂಬ ಜೇಂಗೂಡಿನಲ್ಲಿ, ಅಸಂಖ್ಯಾತ ಮುಮುಕ್ಷುಗಳು
ಸಿದ್ಧಪುರುಷರು ಎನ್ನುವ ಜೇನ್ನೊಣಗಳು ತಮ್ಮ ತಮ್ಮ ಅನುಭವದ ಪರಿಪಾಕವನ್ನು
ತುಂಬಿ, ವಚನ ಸಾಹಿತ್ಯವೆಂಬ ಜೇನುತುಪ್ಪವನ್ನು ಕೊಟ್ಟು ಹೋದರು.

(ಮುಂದುವರಿಯುವುದು)

(8 ನೇ ಪುಟದಿಂದ ಮುಂದುವರಿದಿದೆ)

ಮರುಳು ಶಂಕರದೇವ
9. ಬಂಕಯ್ಯ, ಶಿವರಾತ್ರಿ ಸಂಕಯ್ಯ, ಅಂಬಿಗರ ಚೌಡಯ್ಯ, ಕೆಂಭಾವಿ ಭೋಗಯ್ಯ
10. ಕುಂಬಾರ ಗುಂಡಯ್ಯ, ಶ್ವಪಚಯ್ಯ
11. ಮಲಯರಾಜ, ಚೋಳ, ಅಲಘಂಡ ನಾಯನಾರು, ಕಲ್ಲಿನಾಥ, ಚೇರಮ ನಂಬಿ ಚಂಗಳೆ
12. ಸಿರಿಯಾಳ, ನವನಂದಿ, ನಮಿತಾಂಡ, ಮೆರೆಮಿಂಡದೇವರು
13. ಚೋಳಕ್ಕ, ದುಗ್ಗಳೆ, ನೀಲಲೋಚನೆ, ಸೂಳೆ ಸಂಬೆಕ್ಕ, ಕಮಳವ್ವೆ ಸೋಮವ್ವೆ, ವೈಜವ್ವೆ
14. ಅಕ್ಕನಾಗಮ್ಮ, ಸತ್ಯಕ್ಕ, ಚಂಗಳೆ, ಅಕ್ಕರೆಯ ಮಹಾದೇವಿ, ಸುಗ್ಗವ್ವೆ, ಕೊಡಗೂಸು
ಪಂಡಿತಾರಾಧ್ಯರ ಹೆಸರು ಬಿಟ್ಟು
ಇಷ್ಟು ಜನರ ಮಧ್ಯೆ ಕೇವಲ ಮಲ್ಲಿಕಾರ್ಜುನ
ಮತ್ತು ಸಾಹಿತಿಗಳು ಗುರು ಬಸವಣ್ಣನವರ ಆದ್ಯತೆಯನ್ನು ಅಲ್ಲಗಳೆಯಲು ಗಮನಾ
ರ್ಹವಾಗಿ ಬಳಸುವ ಕೊಂಡಗುಳಿ ಕೇಶಿರಾಜನ ಹೆಸರೂ ಇಲ್ಲ. ಅಲ್ಲದೆ ಉಳಿದ ಪಂಚಾ
ಚಾರ್ಯರ ಹೆಸರು ಒಟ್ಟು ಬಂದೇ ಇಲ್ಲ. ಯಾವುದೇ ಸ್ತೋತ್ರ ಮಾಲಿಕೆ ಧರ್ಮಪಿತ
ಬಸವಣ್ಣನವರ ಸ್ತುತಿಯಿಂದಲೇ ಪ್ರಾರಂಭವಾಗುತ್ತದೆ.
ಇಂಥ ಎಲ್ಲ ಮಹಾಂತರ ಅಭಿಪ್ರಾಯವನ್ನು ಕಡೆಗಣಿಸಿ ಡಾ॥ ಚಿದಾನಂದ
ಮೂರ್ತಿಗಳ ಮಾತು, "ಈ ಧರ್ಮದ ಸ್ಥಾಪಕರು ಬಸವಣ್ಣನವರೂ ಅಲ್ಲ, ಪಂಚಾಚಾ
ರ್ಯರೂ ಅಲ್ಲ. ಹುಟ್ಟು ಬಸವಣ್ಣನವರಿಗಿಂತ ಪೂರ್ವಕ್ಕೆ ಹೋಗುತ್ತದೆ. ಅದು ಅಜ್ಞಾ
ತವಾಗಿದೆ." ಎಂಬುದನ್ನು ಒಪ್ಪಿಕೊಳ್ಳಲು ನಮಗೂ ಕಷ್ಟವಾಗುತ್ತದೆ.
ಆದ್ದರಿಂದಲೇ ಬಸವ ಧರ್ಮೀಯರು ಮೊದಲನೆಯ ಶರಣ ಮೇಳದಲ್ಲೇ "ವಿಶ್ವ
ಗುರು ಬಸವಣ್ಣನವರೇ ಲಿಂಗಾಯತ ಧರ್ಮದ ಆದಿಗುರುವೆಂದು" ಹುಕುಂ ಹೊರಡಿಸಿ
ಬಿಟ್ಟಿದ್ದಾರೆ. ★

ಭಕ್ತಿ :
ದೇವರಿಗೆ ಜಳಕ ಮಾಡಿಸಿ ।
ಬಟ್ಟೆ ತೊಡಿಸುವವ ಪೂಜಾರಿ ॥
ದೇವರಿಗೆ ನೈವೇದ್ಯ ಹಿಡಿದು ।
ತಿನಿಸಿ ಉಣಿಸುವವ ಪೂಜಾರಿ ॥
ಇಂಥ ದೇವರಲಿ ಭಕ್ತಿ ಬೆಳೆದಲ್ಲಿ ।
ಭಕ್ತ ದೇವರಿಂದ ಬಹುದೂರೆಂದ ಕುಮಾರ ಕಕ್ಕಯ್ಯ ॥
—ಕುಮಾರ ಕಕ್ಕಯ್ಯ ಪೋಳ

ಬಸವ ಗಂಗೋತ್ರಿ ನಗರ ಯೋಜನೆ

ಶರಣ ಬಂಧುಗಳಿಗೆ ಸಂತೋಷದ ಸುದ್ದಿ.

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ "ಕಲ್ಯಾಣ ನಗರ" ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ.

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ "ಬಸವ ಗಂಗೋತ್ರಿ"ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೆರಿಯ ಆರೋವಿಲ್ಲೆ ತರಹ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಶರಣ ಬಂಧುಗಳು, ಬಸವ ತತ್ತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, 12 ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ತ್ವನಿಷ್ಠ, ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

1. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳ-ನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

   ವರ್ಗ 'ಎ' 40'×60'-ವಿಸ್ತೀರ್ಣ 2400 ಚದರ ಅಡಿ

   ವರ್ಗ 'ಬಿ' 30'×40'-ವಿಸ್ತೀರ್ಣ 1200 ಚದರ ಅಡಿ

ವಿ. ಸೂ :- ಭೂಮಿಯ ಆಕಾರಕ್ಕನುಗುಣವಾಗಿ ನಿವೇಶನಗಳು ಇನ್ನೂ ಕಡಿಮೆ ಅಳತೆಯುಳ್ಳವುಗಳೂ ಆಗಬಹುದು.

2. ಅಭಿವೃದ್ಧಿಪಡಿಸಿದ ಸ್ಥಿತಿಯಲ್ಲಿರುವ ನಿವೇಶನಗಳನ್ನು ವಿತರಿಸಲಾಗುವುದು.
3. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ 1000-00 (ಒಂದು ಸಾವಿರ) ರೂಪಾಯಿ ಕಟ್ಟಲು ಪರವಾನಗಿ ನೀಡುವುದು.
4. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವ ಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ 100-00 (ಒಂದು ನೂರು) ರೂಗಳನ್ನು ಎಂ. ಓ. ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ.

ವ್ಯವಹರಿಸಬೇಕಾದ ವಿಳಾಸ :

ಸೋದರಿ ಕಸ್ತೂರಿ, ವಿಶ್ವಕಲ್ಯಾಣ ಮಿಷನ್,
ಬಸವ ಗಂಗೋತ್ರಿ ನಗರ, ಕುಂಬಳಗೋಡು-560074
ಬೆಂಗಳೂರು ದಕ್ಷಿಣ ತಾಲ್ಲೋಕು, ಬೆಂಗಳೂರು ಜಿಲ್ಲೆ

****

ಬಸವ ಬೆಳಕಿಗೆ ನಮನ

ಆಚರಿಸುವೆ ಜನ್ಮದಿನವ ನಾನಿಂದು
ಭಾದ್ರಪದ ಶುದ್ಧ ಚೌತಿಯಂದು
ಗುರು ಬಸವೇಶನ ಕರುಣೆಯ ಬೆಳಕೊಂದು
ಗುರು ಲಿಂಗಾನಂದರಾಗಿ ಅವತರಿಸಿತು ಎಂದು ॥೧॥

ಕುಡಿಯಿತು ಬಸವ ಕೃಪೆಯ ಹಾಲನಂದು
ಬದುಕಿತು ಬಸವ ತತ್ತ್ವವೇ ಉಸಿರೆಂದು
ಸವಿಯಿತು ವಚನಾಮೃತವೇ ಜೇನೆಂದು
ಬೆಳೆಯಿತು ಪ್ರವಚನ ಪಿತಾಮಹನೆಂದು ॥೨॥

ಕಳೆದವು ಸಾರ್ಥಕ ಬಾಳಿನ ಅರವತ್ತೊಂದು
ಹರುಷದಿ ಬೆಳೆಯಲಿ ವರುಷವು ನೂರೊಂದು
ಸಲಿಸುವೆ ನಿಮ್ಮಡಿಗೆ ಭಕ್ತಿಯ ಹೂವೊಂದು
ಹರಸಿರಿ ಎನ್ನನು ಸಲ್ಲುವಂತೆ ಬಾಳೆಂದು ॥೩॥

—ಸೋದರಿ ಕಸ್ತೂರಿ

ಬಸವ ಧರ್ಮ ಸಂಸತ್ ಸದಸ್ಯರಿಗೆ
ಮತ್ತು
ರಾಷ್ಟ್ರೀಯ ಬಸವ ದಳದವರಿಗೆ ಸೂಚನೆ.

****

ಅಕ್ಟೋಬರ ತಿಂಗಳಲ್ಲಿ ನಡೆಯುವ ಶಿಬಿರದಲ್ಲಿ ಕೆಲವೊಂದು ವಿಷಯಗಳ ಬಗ್ಗೆ ಚಿಂತನೆ, ಚರ್ಚೆ ಅತ್ಯಗತ್ಯವಾಗಿ ಮಾಡುವುದಿದೆ. ಅದಕ್ಕಾಗಿ ಬಸವ ಧರ್ಮ ಸಂಸತ್ ಸದಸ್ಯರು, ರಾಷ್ಟ್ರೀಯ ಬಸವದಳದವರು ಮತ್ತು ಎಲ್ಲ ಬಸವ ತತ್ವಾಭಿಮಾನಿಗಳು ಈ ಬಗ್ಗೆ ಪೂರ್ವಭಾವಿ ಚಿಂತನೆ ಮಾಡಬೇಕು. ರಾಷ್ಟ್ರೀಯ ಬಸವ ದಳದವರು ತಮ್ಮ ಪ್ರಾರ್ಥನಾ ಸಭೆಗಳಲ್ಲಿ ಈ ಬಗ್ಗೆ ಚಿಂತನೆ ಮಾಡಿ ಸದಸ್ಯರ ಅಭಿಪ್ರಾಯ ಪಡೆಯಬೇಕು:

1. ಸಚಿವ ಶ್ರೀ ಬಸವಲಿಂಗಪ್ಪನವರು ಲಿಂಗಾಯತರು ಹಿಂದುಗಳಲ್ಲ ಎಂದು ಇತ್ತೀಚೆಗೆ ಬಸವ ಜಯಂತಿ ಸನ್ನಿವೇಶದಲ್ಲಿ ಸಹ ಹೇಳಿದರು. ಈ ಬಗ್ಗೆ ಚಿಂತನೆ ನಡೆಸುವುದು ಅತ್ಯಗತ್ಯವಾಗಿದೆ.

   ಲಿಂಗಾಯತ ಧರ್ಮವು ಹಿಂದೂ ಕಕ್ಷೆಯ ಒಳಗಿರುವುದು ಸೂಕ್ತವೊ ? ಅಥವಾ ಹಿಂದೂ ಕಕ್ಷೆಯ ಹೊರಗೆ ಹೋಗಿ ಅಹಿಂದು ಧರ್ಮವಾಗಿರುವುದು ಸೂಕ್ತವೋ? ಧರ್ಮ, ಸಂಸ್ಕೃತಿ, ದೇಶ–ಈ ಎಲ್ಲವುಗಳ ಹಿನ್ನೆಲೆಯಲ್ಲಿ ಚಿಂತನೆ ಮಾಡಬೇಕು. ಅನುಯಾಯಿಗಳಲ್ಲಿ ಸ್ಪಷ್ಟ ತಿಳುವಳಿಕೆ ಅತ್ಯಗತ್ಯ.
2. ವೀರಶೈವ ಮಹಾಧಿವೇಶನದಲ್ಲಿ ಮತ್ತು ಆನಂತರ ಸಹ ಪಂಚಪೀಠಾಧೀಶರು ಕೆಲವು ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಲಿರುವರು. ಈ ಹಿನ್ನೆಲೆಯಲ್ಲಿ ಲಿಂಗಾಯತ ಧರ್ಮದ ಶುದ್ಧೀಕರಣ, ಖಚಿತತೆ, ಅನುಯಾಯಿಗಳಿಗೆ ಸ್ಪಷ್ಟ ತಿಳುವಳಿಕೆ ಕೊಡಬೇಕಾದ ಕಾರ್ಯಕ್ರಮದ ರೂಪುರೇಷೆ.
3. ಬಸವ ಧರ್ಮ ಸಂಸತ್ ಸದಸ್ಯರ ಧರ್ಮಾಚರಣೆ, ಕೆಲವು ನಿಯಮಗಳು ಹೇಗಿರಬೇಕು ?
4. ಏಕದೇವೋಪಾಸನೆ ಬಸವ ಧರ್ಮದ ಜೀವಾಳ ಮತ್ತು ವೈಶಿಷ್ಟ್ಯ. ಇದಕ್ಕೆ ಚ್ಯುತಿ ತರದಂತಹ ಆಚರಣೆ ಅತ್ಯಗತ್ಯ. ಗುರು ಬಸವಣ್ಣನವರೇ ಆದಿ ಪ್ರಮಥರಾಗಿ ಅಂದಿನಿಂದ ಇಂದಿನವರೆಗೆ ಆಗಿ ಹೋಗಿರುವ ಅನೇಕ ಶಿವಯೋಗಿಗಳು, ಶರಣರು ಹುಟ್ಟಿದ ಸ್ಥಳಗಳಿವೆ, ಲಿಂಗೈಕ್ಯರಾದ ಸ್ಥಾನಗಳಿವೆ. ಇವುಗಳನ್ನು ರಕ್ಷಿಸುವ ಬಗೆ ಹೇಗೆ ? ಮತ್ತು ಅವುಗಳ ಅರ್ಚನೆ ಬೇಕೆ, ಬೇಡವೆ ?

5. ವಿವಿಧ ಶರಣರು ಆಗಿ ಹೋಗಿದ್ದಾರೆ, ಅವರೆಲ್ಲರ ಭಾವಚಿತ್ರಗಳನ್ನು ಬರೆಸುವುದು, ಮುದ್ರಿಸುವುದು, ಪೂಜಿಸುವುದು ಅಗತ್ಯವೇ, ಅನಗತ್ಯವೇ ? ವಿವಿಧ ಶರಣರ ಅನುಯಾಯಿಗಳ ಭಾವನಾತ್ಮಕ ಸಂಬಂಧದ ಹಿನ್ನೆಲೆಯಲ್ಲಿ ಇದನ್ನು ಚಿಂತಿಸಬೇಕು.
6. ನಿಸರ್ಗ ಚಿಕಿತ್ಸಕರು ಹೇಳುವ ಉಷಃಪಾನ ಮತ್ತು ಧಾರ್ಮಿಕ ನೇಮ ಇತ್ಯಾದಿ ಇತ್ಯಾದಿ.

ಅಕ್ಟೋಬರ್‌ವರೆಗೆ ಲಭ್ಯವಿರುವ ಸಮಯಾವಕಾಶದಲ್ಲಿ ನೀವುಗಳು ಎಲ್ಲರೂ ಚಿಂತನೆ ಮಾಡಿ, ಚರ್ಚಿಸಬೇಕಾದ ಸಂಗತಿಗಳನ್ನು ಸೂಚಿಸಬಹುದು.

—ಮಾತಾಜಿ

ಬಸವ ತತ್ತ್ವ ತರಬೇತಿ ಶಿಬಿರದಲ್ಲಿ
ಶರಣರ ದಿನಚರಿ.

ಸುಪ್ರಭಾತದಲ್ಲಿ ಏಳುವಿಕೆ.	ಬೆಳಿಗ್ಗೆ 5-00 ಗಂಟೆ
ಶೌಚ	5 ರಿಂದ 5.30
ಮಂತ್ರಧ್ಯಾನ-ಯೋಗಾಸನ	5.30 ರಿಂದ 7
ಸ್ನಾನ-ಪೂಜೆ-ಉಪಾಹಾರ	7 ರಿಂದ 9-30
ಪ್ರಾರ್ಥನೆ–ಪ್ರವಚನ–ಚರ್ಚಾಗೋಷ್ಠಿ	9-30 ರಿಂದ 1-00
ಮಧ್ಯಾಹ್ನದ–ಪ್ರಸಾದ–ಅಲ್ಪವಿಶ್ರಾಂತಿ ಸ್ವಾಧ್ಯಾಯ	1.00 ರಿಂದ 3.30
ಉಪನ್ಯಾಸಗಳು	3-30 ರಿಂದ 5-30
ಟೀ, ಕಾಫಿ, ಸಂಜೆಯ ಓಡಾಟ	5-30 ರಿಂದ 7.00
ಪ್ರವಚನ	7-00 ರಿಂದ 9-00
ರಾತ್ರಿಯ ಊಟ	9-00 ರಿಂದ 10-00
ಲಘು ಓಡಾಟ	10-00 ರಿಂದ 10-30
ಶಿವಯೋಗ ನಿದ್ರೆ	10-30 ರಿಂದ ಬೆಳಗಿನ 5.00

ಪ್ರತಿನಿತ್ಯ ಮಧ್ಯಾಹ್ನ 3-30 ರಿಂದ-5-30 ರ ವರೆಗಿನ ಅವಧಿಯಲ್ಲಿ ಶಿಬಿರಾರ್ಥಿಗಳಾದ ಶರಣರು ಉಪನ್ಯಾಸಗಳನ್ನು ಮಾಡಲು ಅವಕಾಶ ಉಂಟು.

ತಾವು ಪ್ರತಿಪಾದಿಸುವ ವಿಷಯ ಕುರಿತು ಸಿದ್ಧತೆ ಮಾಡಿಕೊಳ್ಳಬೇಕು. ಆ ಬಗ್ಗೆ ಮೊದಲಿಗೇ ಪತ್ರ ಬರೆದು ನಮಗೆ ತಿಳಿಸಬಹುದು. ಒಬ್ಬರಿಗೆ ಕನಿಷ್ಟ ಕಾಲಾವಧಿ ಅರ್ಧಗಂಟೆ, ಅತ್ಯಂತ ಅಧಿಕ ಕಾಲಾವಧಿ 1 ಗಂಟೆ, ಬೇರೆ ಬೇರೆ ವಿಷಯಗಳನ್ನು ಕುರಿತು

ಮಾತಾಡಬಹುದು.ಅಥವಾ ಆಯ್ದು ವಚನಗಳಿಗೆ ಅರ್ಥವಿವರಣೆ ಕೊಡಬಹುದು. ಒಂದು ದಿವಸಕ್ಕೆ ಇಬ್ಬರು-ಮೂವರಿಗೆ ಪೂರ್ಣಾವಧಿ ಉಪನ್ಯಾಸ ಮಾಡಲು ಅವಕಾಶ ನೀಡಬಹುದಾಗಿದೆ ಮತ್ತು ಸಿದ್ಧತೆ ಮಾಡಿಕೊಂಡವರು ಎಷ್ಟು ಉಪನ್ಯಾಸಗಳನ್ನಾದರೂ ಮಾಡಬಹುದಾಗಿದೆ. ತಾವು ಸಿದ್ಧತೆ ಮಾಡಿಕೊಂಡ ವಿಷಯದ ಬಗ್ಗೆ ಪತ್ರ ಬರೆದು ತಿಳಿಸಿದರೆ ಕಾರ್ಯಕ್ರಮ ಹೊಂದಿಸಲು ಅನುಕೂಲವಾಗುವುದು. ★

....ಬಸವ ತತ್ತ್ವ ತರಬೇತಿ ಕಮ್ಮಟ....

ಅಕ್ಟೋಬರ್ ತಿಂಗಳಲ್ಲಿ ಮಹತ್ವಪೂರ್ಣ ಶಿಬಿರ

ಶರಣ ಬಂಧುಗಳೇ,

ಪ್ರತಿ ವರ್ಷವೂ ಅಕ್ಟೋಬರ ತಿಂಗಳಲ್ಲಿ ಬಸವ ತತ್ತ್ವ ತರಬೇತಿ ಶಿಬಿರವು ನಡೆಯುವುದು ಸರ್ವವಿದಿತವಷ್ಟೆ. 1992 ನೇ ಸಾಲಿನ ಶಿಬಿರವನ್ನು ಅಕ್ಟೋಬರ್ 4 ರಿಂದ 18 ರ ವರೆಗೆ 15 ದಿವಸಗಳ ಕಾಲ ನಡೆಸಲಾಗುವುದು. ಬೆಂಗಳೂರು ದಕ್ಷಿಣ ತಾಲ್ಲೋಕು, ಕುಂಬಳಗೋಡು ಗ್ರಾಮದ ಸನಿಹದಲ್ಲಿರುವ ಬಸವ ಗಂಗೋತ್ರಿಯಲ್ಲಿ ಈ ತತ್ತ್ವ ತರಬೇತಿ ಶಿಬಿರವು ನಡೆಯುತ್ತಲಿದ್ದು, ದಿ. 15, 16, 17, ರಂದು ಭಕ್ತಿಪಕ್ಷ ಸಮ್ಮೇಳನ ಇರುವುದು. 18-10-1992 ರಂದು ಮುಕ್ತಾಯ ಸಮಾರಂಭವು ಬಸವ ಗಂಗೋತ್ರಿಯಲ್ಲಿ ಬೆಳಿಗ್ಗೆ 10 ರಿಂದ ನಡೆಯಲಿರುವುದು.

ಬಸವ ಗಂಗೋತ್ರಿಯು ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಬೆಂಗಳೂರಿಂದ 21 ನೆಯ ಕಿಲೋ ಮೀಟರ್ ಬಳಿ ಇರುವುದು. ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆಯೂ ಇದೆ. ಸಿಟಿ ಬಸ್‌ಗಳು ಕಲ್ಯಾಸಿಪಾಳ್ಯಂ ಬಸ್‌ನಿಲ್ದಾಣದಿಂದ ಹೋಗುತ್ತಿದ್ದು, ಸಂಖ್ಯೆ ಹೀಗಿದೆ 231, 227, 229_B , 228. 229.

ಮೆಜೆಸ್ಟಿಕ್‌ದಿಂದ ಮೈಸೂರು ರಸ್ತೆಯಲ್ಲಿ ಸಂಚರಿಸುವ ಗ್ರಾಮಾಂತರ ಪ್ರದೇಶಕ್ಕೆ ಹೋಗುವ ಬಸ್ಸುಗಳು ಬಸವ ಗಂಗೋತ್ರಿ ಬಳಿ ನಿಲ್ಲುತ್ತವೆ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ನಿಲ್ದಾಣಗಳ ಮಧ್ಯೆ ಬಸವ ಗಂಗೋತ್ರಿ ನಿಲ್ದಾಣವಿದೆ.

—ಶುಲ್ಕ ವಿವರ—

1. ಭಾನುವಾರ 4-10-1992 ರಿಂದ 18-10-1992 ರ ವರೆಗೆ ನಡೆಯುವ ಶಿಬಿರದ ಪೂರ್ಣಾವಧಿಯ ಶುಲ್ಕ 200.00 (ಎರಡು ನೂರು) ರೂ.
2. ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಗೆ ರಿಯಾಯಿತಿ ಇದ್ದು 125-00 ರೂ. ಶುಲ್ಕವಿದೆ.
3. ಭಕ್ತಿ ಪಕ್ಷ ಮ್ಮೇಳನದಲ್ಲಿ 4 ದಿವಸಗಳವರೆಗೆ ಭಾಗವಹಿಸುವವರಿಗೆ 60.00ರೂ. ಶುಲ್ಕವಿದೆ.
4. ಭೃತ್ಯಾಚಾರ ಗಣದ ಸದಸ್ಯರಾಗಿ ಮುಂದೆ ಕಾರ್ಯಕರ್ತರಾಗುವವರಿಗೆ ಉಚಿತ ಪ್ರವೇಶವಿದೆ.
5. ಆರ್ಥಿಕ ಅನಾನುಕೂಲತೆಯಿದ್ದು, ಬಸವ ತತ್ತ್ವವನ್ನು ತಿಳಿದುಕೊಳ್ಳುವ ಆಸಕ್ತಿ ಇರುವವರಿಗೆ ಉಚಿತ ಪ್ರವೇಶವಿದೆ.

ಭೃತ್ಯಾಚಾರ್ಯಗಣದ ಸದಸ್ಯರಾಗಬೇಕೆನ್ನುವವರು ಮತ್ತು ಆರ್ಥಿಕ ಅನಾನುಕೂಲತೆಯಿದ್ದು ಉಚಿತ ಪ್ರವೇಶ ಪಡೆಯಬೇಕು ಎನ್ನುವವರು ಮೊದಲೇ ಪತ್ರ ಬರೆದು ಅನುಮತಿಯನ್ನು ಪಡೆಯಬೇಕು.

ಈ ಸಲದ ಶಿಬಿರದಲ್ಲಿ ಕೆಲವೊಂದು ಮಹತ್ವ ಪೂರ್ಣ ವಿಷಯಗಳನ್ನು ಚರ್ಚಿಸಬೇಕೆಂದಿರುವ ಕಾರಣ ಬಸವ ಧರ್ಮ ಸಂಸತ್ ಸದಸ್ಯರು ಪೂರ್ಣಾವಧಿಗೆ ಭಾಗಿಗಳಾದರೆ ಒಳ್ಳಿತು. ಮತ್ತು ಎಷ್ಟೇ ವೈಯಕ್ತಿಕ ಅಡಚಣೆಗಳಿದ್ದರೂ ಅವರು ತಪ್ಪದೆ ಭಕ್ತಿಪಕ್ಷ ಸಮ್ಮೇಳನದಲ್ಲಿ ಭಾಗವಹಿಸಬೇಕು. ಚಿಂತನ ಮಂಥನ ಮಾಡಬೇಕು.

ಶಿಬಿರದ ಅವಧಿಯಲ್ಲಿ ಸಾಮೂಹಿಕ ಇಷ್ಟಲಿಂಗ ಪೂಜೆ, ದೀಕ್ಷಾ ಕಾರ್ಯಕ್ರಮ, ಸಮುದಾಯ ಪ್ರಾರ್ಥನೆ-ನಿರ್ವ ಹೆ. ಶ್ರೀ ಬಸವೇಶ್ವರ ಪೂಜಾವ್ರತ ಮುಂತಾದವುಗಳ ಬಗ್ಗೆ ಪ್ರಾಯೋಗಿಕ ತರಬೇತಿ ಸಹ ಇರುತ್ತದೆ. ಎಲ್ಲ ರಾಷ್ಟ್ರೀಯ ಬಸವದಳಗಳವರು ಕೆಲವು ಜನಗಳನ್ನಾದರೂ ಪ್ರಾತಿನಿಧಿಕವಾಗಿ ಕಳಿಸಿ, ತರಬೇತಿ ಪಡೆದರೆ ಸ್ಥಳೀಯವಾಗಿ ಕಾರ್ಯನಿರ್ವಹಣೆ ಸುಲಭವಾಗುತ್ತದೆ. ಶಿಬಿರ ಶುಲ್ಕವನ್ನು ಡಿ. ಡಿ./ಎಂ. ಓ ಮೂಲಕ ಕಳಿಸಬಹುದು. ವಿಳಾಸ: **ಸೋದರಿ ಕಸ್ತೂರಿ**, ಬಸವ ಗಂಗೋತ್ರಿ, ಕುಂಬಳಗೋಡು-560074, ಬೆಂಗಳೂರು ದಕ್ಷಿಣ ತಾಲೂಕು. ಬೆಂಗಳೂರು ಜಿಲ್ಲೆ. ಡಿ.ಡಿ. ತೆಗೆಸುವ ಹೆಸರು ಬಸವ ಮಹಾಮನೆ ಚಾರಿಟಬಲ್ ಟ್ರಸ್ಟ್, ಬೆಂಗಳೂರು.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

ಬಸವ ಧರ್ಮ ಪೀಠದ ಕಟ್ಟಡ ನಿಧಿಗೆ

ಧನ ದಾಸೋಹ ಮಾಡಿದವರು

(ಮೇ-ಜೂನ್ ಸಂಚಿಕೆಯಿಂದ ಮುಂದುವರಿದಿದೆ)

ಶರಣರುಗಳಾದ :

1.	ಹಳ್ಳೂರು ಸಿದ್ಧಪ್ಪ ಮತ್ತು ಮಕ್ಕಳು, ದಾವಣಗೆರೆ	20,000-00
2.	ಬಿದರಕುಂದಿ ಚಂದ್ರಣ್ಣ ಮತ್ತು ಸಹೋದರರು, ದಾವಣಗೆರೆ (ಉಭಯತರಿಂದ ಒಂದು ಕೋಣೆ)	20,000-00
3.	ಲೀಲಾವತಿ ಮತ್ತು ಬಿ. ಹೆಚ್. ಅಂಕಲಿ, ಧಾರವಾಡ	40,000-00
4.	ಈಶ್ವರಪ್ಪ ಶಿವಪ್ಪ ಶಿವಸಿಂಪರ, ಜಮಖಂಡಿ	5000-00
5.	ಬಸವರಾಜ ಲಿಂಗಪ್ಪ ಲಿಂಗಶೆಟ್ಟರ, ,,	5000-00
6.	ಸಿ. ಬಿ. ಬೇವನೂರು, ,,	5000-00
7.	ಗಿರಿಮಲ್ಲಪ್ಪ ಬಸಪ್ಪ ಕೆರೆಪ್ಪನವರ, ಶೇಗುಣಸಿ	5000-00
8.	ಸಂಗಪ್ಪ ಯಲ್ಲಪ್ಪ ಹುನಗುಂದ, ಜಮಖಂಡಿ	1001-00
9.	ಎಂ. ಎಸ್. ಮುನ್ನೊಳ್ಳಿ ,,	1001-00
10.	ಎಸ್. ಎಸ್. ಹಳ್ಳೂರು ,,	1001-00
11.	ಪಿ. ಆರ್. ಕುಲಕರ್ಣಿ ,,	1001-00
12.	ಲಿಂಗನಗೌಡ ಬಸವನಗೌಡ ಬಿರಾದಾರ, ಬಾಗಲಕೋಟೆ	1001-00

ಧರ್ಮಗ್ರಂಥ ನಿಧಿಗೆ 1001-00 ರೂ. ಸಲ್ಲಿಸಿದವರು

(ಸೆಪ್ಟಂಬರ್ 1991 ನೇ ಸಂಚಿಕೆಯಿಂದ ಮುಂದುವರಿದಿದೆ)

ಕ್ರ.ಸಂ.	ಹೆಸರು	ಊರು
	ಶರಣರುಗಳಾದ :	
400	ಶಾರದಾ ಹಾವನೂರು,	ರಾಣೇಬೆನ್ನೂರು
401	ಎಸ್. ಬಿ. ಹರಿಹರ	"
402	ಬಿ. ಬಸವಣ್ಣ,	ತಿಪಟೂರು
403	ಗೊಗ್ಗಾ ಮಹಾದೇವಮ್ಮ,	ಹೊಸಪೇಟೆ
404	ದೇವೀರಮ್ಮ ಚಂದ್ರಶೇಖರಪ್ಪ,	ಬಿ. ಆರ್. ಪ್ರಾಜೆಕ್ಟ್
405	ಟಿ. ಎಂ. ಮಂಜುನಾಥ,	ತಿಪಟೂರು
406	ಹೆಚ್. ಎಸ್. ಚನ್ನಬಸವಣ್ಣ,	ಬೆಂಗಳೂರು
407	ಪುಟ್ಟಹೊನ್ನಮ್ಮ	,,

408	ಮಲ್ಲಿನಾಥ ಮಾಳಜಿ,	ಬೆಂಗಳೂರು
409	ಟಿ. ಸಿ. ಉಮೇಶಕುಮಾರ್,	ತಿಪಟೂರು
410	ಸಿದ್ಧಗಂಗಮ್ಮ ಕೆ. ಎಂ. ಶಿವಸ್ವಾಮಿ,	"
411	ಟಿ. ರುದ್ರಪ್ಪ,	ಗೋವಿನಪುರ
412	ಡಾ॥ ಬಸವರಾಜ ಲಿಗಾಡೆ,	ಸೊಲ್ಲಾಪುರ
413	ಲೀಲಾದೇವಿ ರಮೇಶ್ ಮಡಕಿ,	"
414	ಟಿ. ನಾಗರಾಜಪ್ಪ,	ಅಮೃತಪುರ
415	ಚಂದ್ರಾಮ ಗುರೂಜಿ,	ಸೊಲ್ಲಾಪುರ
416	ಮಡಿವಾಳಪ್ಪ ಶಿವಪ್ಪ ಅವಜಿ	"
417	ರಾಜಶೇಖರ ಚನ್ನಬಸಪ್ಪ ಮಡಕಿ,	"
418	ಸುಭಾಷ್‌ಚಂದ್ರ ರೇವಣಸಿದ್ಧಪ್ಪ ಖೈರಾತೆ,	"
419	ಅನ್ನಪೂರ್ಣ ಭತಗುಣಕಿ,	"
420	ನಾಗಪ್ಪ ರಾಮಪ್ಪ ಬಾಗೇವಾಡಿ,	ಬಿಜಾಪುರ
421	ಕುಮಾರ ಕಕ್ಕಯ್ಯ ಪೋಳ,	"
422	ಜವಾಹರ (ರಾಜು) ಹರಕಾರಿ,	"
423	ಮಲ್ಲಿಕಾರ್ಜುನ ಫಲದಿನ್ನಿ .	"
4.4	ಡಾ॥ ಲಿಂಗಪ್ಪ ಮಹಾಲಿಂಗಪ್ಪ ಚಿನ್ನಸ್ವಾಮಿ	"
425	ಸಂಗನಬಸಪ್ಪ ಸಿದ್ಧರಾಮಪ್ಪ ಮಸಗೂಳಿ	"
426	ಎಸ್. ಬಿ. ಕೊಂಡಗುಳಿ	"
427	ರಂಗನಗೌಡ ಹನುಮನಗೌಡ ಪಾಟೀಲ	"
428	ಪ್ರೊ. ಆರ್. ವಿ. ಹಿರೇಮಠ	"
429	ಶಿವಪ್ಪ ವಿರುಪಾಕ್ಷಪ್ಪ ಅವಟಿ,	"
430	ಮುರುಗೇಂದ್ರಪ್ಪ ಮಲ್ಲಿಕಾರ್ಜುನಪ್ಪ ಇಂಚಗೇರಿ,	"
431	ವೀರಬಸಪ್ಪ ದುಂಡಪ್ಪ ಬುರ್ಲಿ,	"
432	ಜಿ. ಆರ್. ಆಸಂಗಿ	"
433	ಡಾ॥ ಮಲ್ಲಿಕಾರ್ಜುನಪ್ಪ ಸಿದ್ದಪ್ಪ ಕಲ್ಲೂರು,	"
434	ಸಿದ್ಧರಾಮಪ್ಪ ಸಿದ್ಧಲಿಂಗಪ್ಪ ಹಿರೇಡಗಿ,	"
435	ವೈ. ಬಿ. ಜುಮನಾಳ,	"
436	ಜಿ. ಎಸ್. ಗನ್ನೂರು,	"

437	ಈರವ್ವ ಯೋಗಪ್ಪ ಶೆಟಗಾರ,	ಬಿಜಾಪುರ
438	ಎಸ್. ಎ೦. ಕಪ್ಪರದ,	ಗದಗ
439	ಶಿವಪ್ಪ ಕಾಡಪ್ಪ ಚೌಗುಲೆ,	ಬಿಜಾಪುರ
440	ಬಾಪೂಗೌಡ ಬಸವನಗೌಡ ಬಿರಾದಾ ರ,	”
441	ವಿನೋದ ಶಿವಲಿಂಗಪ್ಪ ಮನಗೂಳಿ,	”
442	ಮಲ್ಲಪ್ಪ ಕಾಶಪ್ಪ ಮೊಗಲಿ,	”
443	ಮಲ್ಲಿಕಾರ್ಜುನ ಕಾಶಪ್ಪ ಸುರಪುರ,	”
444	ಬಿ. ಹೆಚ್. ಸಿಂದಗಿ,	”
445	ಡಾ॥ ಸರಸ್ವತಿ. ಬಿ. ಪಾಟೀಲ,	”
446	ಎಸ್. ಪಿ. ಪಾಟೀಲ,	”
447	ಸಿದ್ಧರಾಮಪ್ಪ ವೀರಪ್ಪ ಬಿಜ್ಜರಗಿ,	”
448	ಬೊಮ್ಮನಿಂಗಪ್ಪ ಚನ್ನಪ್ಪ ಅಂಗ ಡಿ,	”
449	ಆದಪ್ಪ ಯಮುನಪ್ಪ ಚಲುವಾದಿ,	”
450	ಕೆ. ಗಣೇಶ ಸಂಗಪ್ಪ,	ಹಿಂದೂಪುರ
451	ಹೆಚ್. ಕೆ. ನ್ಯಾಮಗೌಡ,	ಜಮಖಂಡಿ
452	ರೇವಣಸಿದ್ಧಪ್ಪ ಮಹಾದೇವಪ್ಪ ಕೊಂಡಗುಳಿ	”
453	ಬಸಪ್ಪ ಸಿದ್ಧಪ್ಪ ಕೋನಪ್ಪನವರ,	”
454	ಸದಾಶಿವ ಬಸವಪ್ರಭು ಚೌಧರಿ,	”
455	ಬಸವರಾಜ ಲಿಂಗಪ್ಪ ಲಿಂಗಶೆಟ್ಟರ	”
456	ಎಸ್. ಎಂ, ಗಾಂವಿ,	”
457	ಕಾಡಪ್ಪ ಗಂಗಪ್ಪ ಮಾಳಿ,	”
458	ಭೀಮಶೆಟ್ಟಿ ಹುಡೇದ,	ಗುಲಬರ್ಗಾ
459	ಬಲದೇವ ಬಸಪ್ಪ ರಾಮದುರ್ಗ,	ಜಮಖಂಡಿ

(ಮುಂದುವರಿಯುವುದು)

ಮೂರ್ಖಪ್ರಾಣಿ :

ತಂಬಾಕು ತಿಂದು ತಂಬಾಕು ಸೇದುವ ।
ಗಾಂಜಾ ಜಗ್ಗಿ ಶಂಭೋ ಎನ್ನುವ ॥
ಅಪು ನುಂಗಿ ನಿದ್ದೆ ಹೋಗುವ ।
ಹೆಂಡ ಕುಡಿದು ಭಂಡ ಮಾಡುವ ॥
ಒಂದೇವೊಂದು ಮೂರ್ಖ ಪ್ರಾಣಿಯೆಂದರೆ ।
ಅದುವೇ ಮನುಷ್ಯನೆಂದ ಕುಮಾರ ಕಕ್ಕಯ್ಯ॥

—ಕುಮಾರ ಕಕ್ಕಯ್ಯ ಪೋಳ

ದಾಸೋಹ ನಿಧಿಗೆ 1111ರೂ ಸಲ್ಲಿಸಿದವರು

(ಮೇ-ಜೂನ್ ಸಂಚಿಕೆಯಿಂದ ಮುಂದುವರಿದುದು)

ಕ್ರಮ ಸಂಖ್ಯೆ	ಹೆಸರು	ಊರು
ಶರಣರುಗಳಾದ :		
1159	ಮಲಕಪ್ಪ ಶಿವಗೊಂಡ ನಾಡಗೇರಿ,	ರೇವತಗಾಂವ
1160	ಎಂ. ಎಸ್. ಅನ್ನಪೂರ್ಣಮ್ಮ ಶಾಂತಣ್ಣ	ಹಿಂದೂಪುರ, (ಆಂಧ್ರ)
1161	ಜಿ. ರಾಜೇಶ್ವರಿ ಅಮ್ಮ,	”
1162	ಎಂ. ಎಸ್. ಸುರೇಶಬಾಬು,	”
1163	ಕೆ. ಎ. ಕನಕರತ್ನಮ್ಮ ಆನಂದಯ್ಯಶೆಟ್ಟಿ,	”
1164	ತ್ರಿಪುರಾಂತಕಂ ವೀರಭದ್ರಪ್ಪ ಮತ್ತು ಮಕ್ಕಳು	”
1165	ನೀಲಾ ಟಿ. ಬಿ. ವೀರಪ್ಪ	”
1166	ನೀಲಮ್ಮ ಬಸವರಾಜು	”
1167	ಎಸ್. ಗೌರಮ್ಮ ಎಸ್. ಬಸಪ್ಪ	”
1168	ಎಂ. ಶಂಕರಮ್ಮ	”
1169	ಎಸ್. ಜಿ. ರುದ್ರಯ್ಯ	”
1170	ಡಿ. ಎನ್. ಶುಭಾ ಡಿ. ವಿ. ನಾಗರಾಜ	”
1171	ಎಂ. ಎನ್. ಸರ್ವಮಂಗಳಮ್ಮ	”
1172	ಕೊಂಡೂರು ಪಾಪಣ್ಣ	”
1173	ಜಿ. ಆನಂದಪ್ಪ ಸಂಜೀವಪ್ಪ	”
1174	ಡಾ॥ ಜಿ. ತಿಪ್ಪೇಸ್ವಾಮಿ.	”
1175	ಗಿರಿಮಲ್ಲಪ್ಪ ಬಸಪ್ಪ ವಡ್ಡೀಮನಿ	ಜಮಖಂಡಿ
1176	ವೀರಣ್ಣ (ಗುಪ್ತ ಕಾಣಿಕೆ)	”
1177	ಅಶೋಕ ಬಸಪ್ಪ ಕೋಟ್ಯಾಳ, ಕಡಪಟ್ಟಿ	”
1178	ನಾಗಪ್ಪ ಪರಪ್ಪ ಕೆರೆಪ್ಪನವರು	ಶೇಗುಣಸಿ
1179	ರಾಮಪ್ಪ ನಿಂಗಪ್ಪ ಅಂಬಿ	”
1180	ಮಲ್ಲಪ್ಪ ಅಲಗೌಡ ಶಾನವಾಡ	”
1181	ಬಸವರಾಜ್ ಗಿರಿಮಲ್ಲಪ್ಪ ವಾಂಗಿ	”
1182	ಲಕ್ಷ್ಮಣ ಶಿವಪ್ಪ ಗೌಂಡಿ	”
1183	ಈರಣ್ಣ ಬಸಪ್ಪ ಬಂಡಿಗಣಿ	”

1184	ಕಾಡಪ್ಪ ಗಂಗಪ್ಪ ಮಾಳಿ	ಜಮಖಂಡಿ
1185	ದಾಕ್ಷಾಯಣಿ ಈರಪ್ಪ ಜವಳಿ	”
1186	ಗಂಗಮ್ಮ ಶಂಕರಪ್ಪ ಅಂಗಡಿ	”
1187	ಎಸ್. ಎಂ. ಗಡಾದ, ಕೊತಬಾಳ	”
1188	ಕಲ್ಲೊಳ್ಳಪ್ಪ ಬಾಳಪ್ಪ ಮಾಬಣ್ಣವರ	”
1189	ಬಸವರಾಜ ಈರಪ್ಪ ವಾಂಗಿ	”
1190	ಗಜಾನನ ಬಾಳಾರಾವ್ ಜೋಪಡೆ	”
1191	ಮಾಣಿಕಚಂದ್ ಸುರತರಾಮ ತೇಲಿ	ಹುನ್ನೂರ
1192	ಶಂಕರಪ್ಪ ಮಲ್ಲಪ್ಪ ರಾವಳೋಜಿ	ಕಡಪಟ್ಟಿ
1193	ಸುಲೋಚನಾ ರಾಜಶೇಖರಯ್ಯ ಹಿರೇಮಠ,	ಜಮಖಂಡಿ
1194	ಪಾರ್ವತವ್ವ ಭೀಮಪ್ಪ ಮೆಂಡಿಗೇರಿ	”
1195	ಬಸವರಾಜ ಗಿರಿಮಲ್ಲಪ್ಪ ಬಾಂಗಿ	”
1196	ಆನಂದ ವಿರುಪಾಕ್ಷಪ್ಪ ಉತ್ತೂರು, ಯಮಕನಮರಡಿ	”
1197	ಪರಶುರಾಮಪ್ಪ ಭೀಮಪ್ಪ ಮಡಿವಾಳರ	ಕಡಪಟ್ಟಿ
1198	ಸಂಗಮೇಶ ರಾಮಪ್ಪ ಕಾಡಗಿ	ಜಮಖಂಡಿ
1199	ಎಂ. ಎಸ್. ಕೊಕಟನೂರ	ಬಾಗಲಕೋಟ
1200	ತಾತಪ್ಪಗೌಡರು ಬಿ. ಸಿ. ಯಾದವಾಡ	ಜಮಖಂಡಿ
1201	ಬಸವರಾಜ ಲಿಂಗಪ್ಪ ಲಿಂಗಶೆಟ್ಟರ	ಜಮಖಂಡಿ
1202	ಬಿ. ಬಿ. ಯಾದವಾಡ, ಮನಗೂಳಿ	”
1203	ವಿರುಪಾಕ್ಷಪ್ಪ ಗಿರಿಸಾಗರ	”
1204	ಕುಮಾರಪ್ಪ ಲಿಂಗಪ್ಪ ಮನಗೂಳಿ	”
1205	ಎಸ್. ಬಿ. ಪನ್ನಾಳಕರ	”
1206	ಎಂ. ಬಿ.ಮುರಗೋಡ	”
1207	ಈರಪ್ಪ ಬಸಪ್ಪ ಅಂಗಡಿ	”
1208	ಬಾಪೂರಾವ ಸಾವಳಗಪ್ಪ ಇಂಗಳಗಿ	
1209	ಶಾರದಾ ಹಾವನೂರು	ರಾಣೇಬೆನ್ನೂರು
1210	ಯಮುನಪ್ಪ ಭೀಮಪ್ಪ ನ್ಯಾಮಗೌಡ	ಜಮಖಂಡಿ
1211	ಭರಮಪ್ಪ ಬಸಪ್ಪ ಪಡಸಲಗಿ	ಜಮಖಂಡಿ

(ಮುಂದುವರಿಯುವುದು)

ಶರಣ. ಪಂಚಲಿಂಗಪ್ಪ ಯಕಲಾಸಪುರ, ಹುಬ್ಬಳ್ಳಿ ಇವರು 11111-00 (ಹನ್ನೊಂದು ಸಾವಿರದ ನೂರಾ ಹನ್ನೊಂದು) ರೂ. ಗಳನ್ನು ಕಟ್ಟಡ ನಿಧಿಗೆಂದು ಕೊಟ್ಟಿದ್ದರು. ಈ ಮೊತ್ತವನ್ನು ಶರಣ ಮೇಳದ ದಾಸೋಹಕ್ಕೆ ಮುದುವಟ್ಟಾಗಿ ಬಳಸಬೇಕೆಂದು, ಕಟ್ಟಡನಿಧಿಗೆ ಪ್ರತ್ಯೇಕವಾಗಿ ಕೊಡುವ ಆಲೋಚನೆಯಲ್ಲಿರುವರೆಂಬ

ಅವರ ಸೂಚನೆಯಂತೆ ದಾಸೋಹಕ್ಕಾಗಿ ಈ ಮೊತ್ತವನ್ನು ಬಳಸಲಾಗುವುದು.

1993 ನೆಯ ಶರಣ ಮೇಳಕ್ಕೆ

1. ಬನಹಟ್ಟಿಯ ಸಹಕಾರಿ ನೂಲಿನ ಗಿರಣಿಯ ನಿರ್ದೇಶಕ ಮಂಡಳಿ, ಬನಹಟ್ಟಿ 2500-00
2. ಶರಣ ವೀರಣ್ಣಗೌಡ ಮಟಮಾರಿ 501-00

ವಿ.ಸೂ. ಬಸವ ಧರ್ಮ ಪೀಠಕ್ಕೆ 501-00 ರೂ.ಗಳನ್ನು ಪೂಜಾನಿಧಿ,ಕಟ್ಟಡ ನಿಧಿಗೆ, ಕೊಟ್ಟವರ ಯಾದಿಯನ್ನು ಪ್ರಕಟಿಸಿಲ್ಲ. ಯಾದಿ ಬಹಳಷ್ಟು ಪುಟಗಳನ್ನು ಆಕ್ರಮಿಸಿ, ಓದುಗರಿಗೆ ಬೇಸರವಾದೀತೆಂದು ಪ್ರಕಟಿಸಿಲ್ಲವಾಗಿ ದಾನಿಗಳು ತಪ್ಪು ತಿಳಿಯಬಾರದು.

ಈ ಎಲ್ಲ ಧನದಾಸೋಹಿಗಳಿಗೆ ಜಗತ್ಕರ್ತನಾದ ಪರಮಾತ್ಮನು ಮತ್ತು ಧರ್ಮ ಪಿತ ಬಸವಣ್ಣನವರು ಆಯುರಾರೋಗ್ಯಭಾಗ್ಯ ಸಕಲ ಸಂಪದವನ್ನು ಕೊಡಲೆಂದು ಹಾರೈಸುತ್ತೇವೆ.

–ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ, ಕೂಡಲ ಸಂಗಮ

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ಬಸವ ಭಾರತಿ ವಿದ್ಯಾರ್ಥಿ ನಿಲಯ

ಮಹಾಮನೆ ಮಹಾಮಠ,
ಕೂಡಲ ಸಂಗಮ–587115
ತಾ॥ ಹುನಗುಂದ, ಜಿಲ್ಲೆ॥ ಬಿಜಾಪುರ.

ಬಸವ ಧರ್ಮಪೀಠದ ಆಶ್ರಯದಲ್ಲಿ ಗಂಡು ಮಕ್ಕಳಿಗಾಗಿ ಶುಲ್ಕ ಸಹಿತ ವಿದ್ಯಾರ್ಥಿ ನಿಲಯವನ್ನು ಇದೇ 1992–93ರ ಸಾಲಿನಿಂದ ಆರಂಭಿಸಲಾಗಿದ್ದು ಪ್ರವೇಶಾವಕಾಶ-ವಿರುತ್ತದೆ. ಶ್ರೀ ಬಸವೇಶ್ವರ ವಿದ್ಯಾವರ್ಧಕ ಸಂಘದ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಇಲ್ಲಿ ಹಾಸ್ಟೆಲ್ ಸೌಲಭ್ಯ ವಿರುತ್ತದೆ. ಪ್ರೌಢಶಾಲೆಯಲ್ಲಿ ಕನ್ನಡ ಮಾಧ್ಯಮವಿದೆ. ಪದವಿಪೂರ್ವ ಕಾಲೇಜಿನಲ್ಲಿ ಕನ್ನಡ ಮಾಧ್ಯಮದಲ್ಲಿ ಲಭ್ಯವಿರುವ ವಿಷಯಗಳೆಂದರೆ ಅರ್ಥಶಾಸ್ತ್ರ, ಇತಿಹಾಸ, ರಾಜ್ಯ ಶಾಸ್ತ್ರ, ಸಮಾಜಶಾಸ್ತ್ರ, ಗಣಿತಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರ.

ಇದೇ ವರ್ಷದಿಂದ ವೃತ್ತಿಪರ ಶಿಕ್ಷಣವಾಗಿ ಎಲೆಕ್ಟ್ರಿಕ್ ರೀವೈಂಡಿಂಗ್ ಕೋರ್ಸ್ ಪಿ. ಯು. ಸಿ. ಯಲ್ಲಿ ಪ್ರಾರಂಭವಾಗಿದೆ. ಅತ್ಯಂತ ಉತ್ತಮ ಪರಿಸರ, ಪರಿಶುದ್ಧ ಹವೆ, ಪ್ರಶಾಂತ ವಾತಾವರಣಗಳು ವಿದ್ಯಾರ್ಥಿಗಳ ಬೆಳವಣಿಗೆಗೆ ಪೋಷಕವಾಗಿವೆ.

ಆದ್ದರಿಂದ ಮಕ್ಕಳನ್ನು ಉತ್ತಮ ವಾತಾವರಣದಲ್ಲಿ ಬೆಳೆಸಬೇಕು ಎನ್ನುವವರು ಈ ಅವಕಾಶವನ್ನು ಉಪಯೋಗಿಸಿಕೊಳ್ಳಬಹುದು. ಪೂರ್ಣ ವಿವರಗಳಿಗೆ, ಅರ್ಜಿ ಪತ್ರಕ್ಕೆ 10 ರೂ. ಎಂ. ಓ. ಮಾಡಿರಿ.

ವಿ. ಸೂ :- ಎರಡನೆ ಟರ್ಮಿನಲ್ಲಿ ಸೇರಿಸಲೂ ಅವಕಾಶವಿರುತ್ತದೆ.

—ಸೋದರಿ ಜಯಮ್ಮ ಮೇನೇಜರ್, ಬಸವ ಧರ್ಮ ಪೀಠ.

ರಾಷ್ಟ್ರೀಯ ಬಸವ ದಳಗಳಿಗೆ ಅಭಿನಂದನೆಗಳು

ರಾಷ್ಟ್ರೀಯ ಬಸವ ದಳ ವಿಶ್ವಗುರು ಬಸವಣ್ಣನವರ ತತ್ತ್ವ–ಸಂದೇಶ–ಆದೇಶಗಳ ಪಾಲನೆಗಾಗಿ ಇರುವ ಉದಾತ್ತ ಸಂಸ್ಥೆ. ಗಣಾಚಾರ ಮತ್ತು ಭೃತ್ಯಾಚಾರಗಳೆರಡೂ ಅವಶ್ಯಕ ಎಂದು ಧರ್ಮಪಿತರು ಬೋಧಿಸಿದಂತೆ ನಮ್ಮ ಕಾರ್ಯಕರ್ತರು ನಡೆದು ಕೊಂಡಿದ್ದಾರೆ.

1. ಬೀದರದ ಸರ್ಕಾರಿ ದವಾಖಾನೆಗೆ ಅಪಘಾತಕ್ಕೊಳಗಾಗಿ ಸೇರಿಸಲ್ಪಟ್ಟು, ಗುರುತಿಸುವವರು ಯಾರೂ ಇಲ್ಲದಾಗ, ಹೀಗೆ ಅಪಘಾತಕ್ಕೊಳಗಾದವರು ಖ್ಯಾತ ಸಂಗೀತಗಾರ ಶಿವರಾಜ ಗವಾಯಿಗಳು ಎಂದು ಗುರುತಿಸಿ, ಅವರ ವಿಳಾಸ ಪತ್ತೆ ಹಚ್ಚಿ, ಊರಿಗೆ ಸುದ್ದಿ ಮುಟ್ಟಿಸಿದ್ದಲ್ಲದೆ, ಅವರು ತೀರಿಕೊಂಡಾಗ ಜೀಪಿನಲ್ಲಿ ಶವವನ್ನು ಒಯ್ದು ಊರಿಗೆ ಮುಟ್ಟಿಸಿ, ಅಲ್ಲಿಯ ಮತ್ತು ಬೀದರಿನ ಜನರ ವಿಶ್ವಾಸ, ಪ್ರಶಂಸೆಗೆ ಪಾತ್ರರಾಗಿದ್ದಾರೆ ಬೀದರ ಘಟಕದ ಅಧ್ಯಕ್ಷರಾದ ಶರಣ ಬಸವಕುಮಾರ ಪಾಟೀಲರು.

2. ಧಾರವಾಡದ ರಾಷ್ಟ್ರೀಯ ಬಸವ ದಳದ ನಿಷ್ಠಾವಂತ ಶರಣರಾದ ರೇವಣಸಿದ್ಧಪ್ಪ ಹೊನ್ನಪ್ಪನವರ ಪತ್ನಿ ಶರಣೆ ಸುಲೋಚನಮ್ಮನವರಿಗೆ ಶ್ವಾಸಕೋಶದ ತೊಂದರೆಯಿಂದ ಹುಬ್ಬಳ್ಳಿಯ ಕ್ಯಾನ್ಸರ್ ಸಂಸ್ಥೆಯಲ್ಲಿ ಆಪರೇಷನ್ ಆಗುವಾಗ ರಕ್ತದ ಅಗತ್ಯ ಬಿದ್ದಾಗ ಶರಣ ಕಾರ್ಯಕರ್ತರುಗಳಾದ ಮುರುಗೇಶ ಹೂಗಾರ, ಈಶ್ವರ ಬಾಳಗಿ, ಚಂದ್ರು ಅನಾಡ ಮೂವರೂ ರಕ್ತ ದಾನವನ್ನು ಮಾಡಿದ್ದಾರೆ ಅದೂ ಬಸವ ಪಂಚಮಿ (3–8–1992) ಯಂದು.
ಮೇಲಿನವೆರಡೂ ಭೃತ್ಯಾಚಾರದ ಪ್ರಸಂಗಗಳಾದರೆ ಗಣಾಚಾರದ ಪ್ರಸಂಗಗಳು ಹೀಗಿವೆ.

1. ಬಸವ ಸಮಿತಿಯ "ಬಸವ ಪಥ" ಪತ್ರಿಕೆ ಜುಲೈ ಸಂಚಿಕೆಯಲ್ಲಿ ವೀರವೀರಾಗಿಣಿ ಜಗನ್ಮಾತಾ ಅಕ್ಕಮಹಾದೇವಿಯ ಬಗ್ಗೆ ಅತ್ಯಂತ ಅಸಹ್ಯ ವಿವರಣೆ ಇರುವ ಲೇಖನ ಒಂದು ಶ್ರೀ ಎನ್. ಆರ್. ಪಾಟೀಲ ಎಂಬುವವರಿಂದ ಬರೆಯಲ್ಪಟ್ಟು ಪತ್ರಿಕೆ ಬಿಡುಗಡೆಯಾಗುತ್ತಲೇ ಓದಿ, ರಾಷ್ಟ್ರೀಯ ಬಸವ ದಳ, ಬೆಂಗಳೂರು ಘಟಕಕ್ಕೆ ತಿಳಿಸಿ ಶ್ರೀ ಬಿ. ಡಿ. ಜತ್ತಿಯವರಿಗೆ ಫೋನ್ ಮೂಲಕ ಪ್ರತಿಭಟನೆ ಸಲ್ಲಿಸಿ, ರಾಷ್ಟ್ರೀಯ ಬಸವ ದಳದಿಂದ ಲಿಖಿತ ಪ್ರತಿಭಟನೆ ಸಲ್ಲಿಸಿದ್ದಾರೆ ಕೋಶಾಧ್ಯಕ್ಷೆ ಶರಣೆ ಪಾರ್ವತಿ ಡಾ॥ ಚನ್ನಬಸಪ್ಪ ಶಿರೋಳ ಅವರು.

2. ಅಲ್ಲಗಿ ದುರಂತದಲ್ಲಿ ಸವರ್ಣೀಯರ ದಬ್ಬಾಳಿಕೆ ವಿರೋಧಿಸಿ ದಲಿತ ಸಂಘರ್ಷ ಸಮಿತಿಯವರು ಏರ್ಪಡಿಸಿದ ಪ್ರತಿಭಟನೆಯಲ್ಲಿ ತಾವೂ ಸಹಕರಿಸಿ, ಪಾಲ್ಗೊಂಡುದಲ್ಲದೆ ಜಾಫರ್ ಷರೀಫ್ ರೇಲ್ವೆ ಮಂತ್ರಿಗಳು ಬೀದರ–ಬೆಂಗಳೂರು ಲಿಂಕ್ ಎಕ್ಸ್‌ಪ್ರೆಸ್ಸನ್ನು ಉದ್ಘಾಟಿಸಲು ಬಂದಾಗ, ಆ ಟ್ರೇನಿಗೆ ಬಸವೇಶ್ವರ ಎಕ್ಸ್‌ಪ್ರೆಸ್ಸು ಎಂದು ಹೆಸರಿಡಲು ಮನವಿ ಸಲ್ಲಿಸಲು ಐದು ಸಾವಿರಕ್ಕೂ ಹೆಚ್ಚು ಜನರನ್ನು ಸಂಘಟಿಸಿ ಮೆರವಣಿಗೆಯಲ್ಲಿ ಒಯ್ದಿದ್ದಾರೆ ಶರಣ ಬಸವಕುಮಾರ ಪಾಟೀಲರು. ಹತ್ತಿರದ ಒಂದು ಊರಿನಲ್ಲಿ ಲಕ್ಷ್ಮೀದೇವಿಗೆ ಆಗುತ್ತಿದ್ದ ಪ್ರಾಣಿಬಲಿಯನ್ನು ಬೀದರ ರಾ. ಬ. ದಳದವರು ತಪ್ಪಿಸಿದ್ದಾರೆ.

ಈ ಎಲ್ಲ ಶರಣರಿಗೆ ಎಲ್ಲ ರಾಷ್ಟ್ರೀಯ ಬಸವದಳಗಳ ಪರವಾಗಿ ಅಭಿನಂದನೆಗಳು.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ.
ಕಾರ್ಯಾಧ್ಯಕ್ಷೆ, ಕೇಂದ್ರ ಸಮಿತಿ.

"ಕೆಳದಿಯ ಚನ್ನಮ್ಮಾಜಿ ಕುರಿತು" ಹೊಸದಾಗಿ ದೊರೆತ ಮಾಹಿತಿ

1. ಕೆಳದಿಯ ವೀರರಾಣಿ ಚನ್ನಮ್ಮಾಜಿಯ ಗುರುಗಳ ಹೆಸರು ಶ್ರೀಗುರುಬಸವಪ್ಪ ದೇವರು.
ಜಂಬಾಣಿ ಶಾಸನ Ec–viii–sa 16, ಕ್ರಿ.ಶ. 1672 ಆಕರ: ಶಿವಶರಣರ ಕಥಾರತ್ನ ಕೋಶ.
ಸಂ: ತ. ಸು. ಶಾಮರಾಯ, ಪುಟ 608, 103. ಬಸವಪ್ಪ

2. ಕೆಳದಿಯ ಅರಸರು ಶರಣ ಸಂಸ್ಕೃತಿಯ ಪುನರುತ್ಥಾನಕ್ಕೆ ಪ್ರಯತ್ನಿಸಿದ ವಿಚಾರಶೀಲ ದೊರೆಗಳು. ಶಿವಪ್ಪ ನಾಯಕರು ತಾವು ಗೆದ್ದ ದುರ್ಗಕ್ಕೆ ಬಸವರಾಜ ದುರ್ಗ ಎಂದು ನಾಮಕರಣ ಮಾಡಿದುದೇ ಸಾಕ್ಷಿ.

ಕಲ್ಯಾಣದಲ್ಲಿ ಧರ್ಮಗುರು ಬಸವಣ್ಣನವರ ಕಾಲದಲ್ಲಿ ನಡೆಯುತ್ತಿದ್ದ ದಾಸೋಹವನ್ನು ಮತ್ತೊಮ್ಮೆ ಮಾಡಲೆಳಸಿ ರಾಣಿ ಚೆನ್ನಮ್ಮಾಜಿಯು ಲಕ್ಷದ ಮೇಲೆ ತೊಂಭತ್ತಾರು ಸಾವಿರ ಗಣಂಗಳಿಗೆ ಪ್ರಸಾದವನ್ನು ಮಾಡಿಸಿ ವಚನ ಸಾಹಿತ್ಯ ಕೃತಿಗಳನ್ನು ಮತ್ತು ವಿಭೂತಿ ಗಟ್ಟಿಗಳನ್ನು ಕೊಡುತ್ತಾಳೆ. ಇದನ್ನು ಕಾದಂಬರಿಯಲ್ಲಿ ನಾನು ಆಗಲೇ ಪ್ರಸ್ತಾಪಿಸಿರುವೆ.

ವೀರರಾಣಿ ಚನ್ನಮ್ಮಾಜಿ ಮತ್ತು ಅವಳ ಗಂಡ ಸೋಮಶೇಖರ ನಾಯಕನು ಮಾಡಿದ ಮತ್ತೊಂದು ಮಹತ್ಕಾರ್ಯ ಇತ್ತೀಚಿಗೆ ತಿಳಿದು ಬಂದಿತು. ಕಲ್ಯಾಣ ಪಟ್ಟಣದಲ್ಲಿ ಆದ ಶೂನ್ಯ ಪೀಠದಂತಹುದನ್ನು ಸ್ಥಾಪಿಸಿ ಅದು ಸಮಾಜವನ್ನು ಮುನ್ನಡೆಸಬೇಕೆಂದು ಇಚ್ಛಿಸಿದ್ದು, ವಿವರಗಳು ಹೀಗಿವೆ:

ಕೆಳದಿ ಸೋಮಶೇಖರ ನಾಯಕರು ಶಾ. ಶ. 1592ರಲ್ಲಿ ಬರೆಸಿದ ತಾಮ್ರ ಶಾಸನ ಶಿ.ಶ.ಕ. ರತ್ನಕೋಶ. ಪುಟ. 597. 27. ಗಂಗಾಧರ ಸ್ವಾಮಿ

— ವಿವರ —

"ಪೂರ್ವ ಕಲ್ಯಾಣಪಟ್ಟಣದಲ್ಲಿ ಸ್ಥಾಪಿತವಾದ ಶೂನ್ಯಸಿಂಹಾಸನದ ಪ್ರತಿರೂಪವಾಗಿ, ಕಲ್ಲಿ ಶಕ 3978ನೆಯ ಜಯ ಸಂವತ್ಸರದ ಆಶ್ವೀಜ ಶುದ್ಧ ದಶಮಿಯಂದು ಧರ್ಮಪೀಠವನ್ನು ಸ್ಥಾಪನೆಮಾಡಿ ಗಂಗಾಧರ ಸ್ವಾಮಿಗಳಿಗೆ ಚರಶಿಖಾಪಟ್ಟವಹಿಸಿ, ಪಟ್ಟಾಭಿಷೇಕ ಮಾಡಿಸಿದ."

ಇದರಿಂದ ಕೆಳದಿಯ ಚೆನ್ನಮ್ಮಾಜಿ ಮತ್ತು ಸೋಮಶೇಖರ ನಾಯಕರಿಗೆ ಧರ್ಮ-ಸಮಾಜಗಳ ಪ್ರಜ್ಞೆ ಎಷ್ಟು ಇದ್ದಿತು ಎಂಬುದು ಅರ್ಥವಾಗುತ್ತದೆ. ಆದರೆ ಆ ಪೀಠ ಯಾವುದು ? ಏಕೆ ಮುಂದುವರಿದು ಬರಲಿಲ್ಲ ಎಂಬುದು ತಿಳಿಯುತ್ತಲಿಲ್ಲ,

ಸಾಮೂಹಿಕ ಇಷ್ಟಲಿಂಗ ಪೂಜೆಯ ಚಿತ್ರೀಕರಣ

ವಿಶ್ವಕಲ್ಯಾಣ ಮಿಷನ್, ಬಸವ ಧರ್ಮಪೀಠ ಸಂಸ್ಥೆಗಳು ತಯಾರಿಸಿರುವ ಗುರು ದರ್ಶನ-ಜಗದ್ಗುರು ಪೀಠಾರೋಹಣ ಮತ್ತು ವಿಶ್ವಗುರು ಬಸವಣ್ಣನವರ ಸಮಗ್ರ ಜೀವನ ಚರಿತ್ರೆ ಎಂಬ ಎರಡು ವೀಡಿಯೋ ಕೆಸೆಟ್ಟುಗಳು ಬಹಳ ಜನಪ್ರಿಯವಾಗಿ ಬಹಳಷ್ಟು ಬೇಡಿಕೆ ಪಡೆದಿವೆ.

ಇವುಗಳಲ್ಲಿ ಕೆಲವು ವಿಶೇಷ ದೃಶ್ಯಗಳನ್ನು ಸಿನಿಮಾದ ಮಾದರಿಯಲ್ಲಿ ತೋರಿಸಿರುವುದೊಂದು ಕಾರಣವಾದರೆ,ಯೂಮ್ಯಾಟಿಕ್ ಟೇಪಿನಲ್ಲಿ ಮಾಡಿದುದು ಮತ್ತೊಂದು ಕಾರಣ, ಯೂಮ್ಯಾಟಿಕ್ ಬಳಸಿದರೆ ಬಹಳ ಖರ್ಚು ಬರುವುದಾದ ಕಾರಣ, ಹಿಂದಿನ ಸಲ ಅಂದರೆ 1990 ರ ಶರಣ ಮೇಳದಲ್ಲಿ ವಿ.ಹೆಚ್.ಎಸ್. ಟೇಪಿನಲ್ಲಿ ಮಾಡಲಾಯಿತು. ಅಲ್ಲದೆ ಆಗ ನಮ್ಮನ್ನು ಭೇಟಿಯಾದ ಕ್ಯಾಮರಾ ತಂತ್ರಜ್ಞರು ಸಿಕ್ಕಾ-ಪಟ್ಟೆ ಕೊಟೇಶನ್ ಕೊಟ್ಟು (3 ಗಂಟೆ ಕೆಸೆಟ್ಟಿಗೆ 60000-00 ಖರ್ಚು ಬರಬಹು-ದೆಂದು ಹೇಳಿ) ಗಾಬರಿಗೊಳಿಸಿದ್ದರು. ಈಗ ನಾವೇ ಸ್ವತಃ 4 ವೀಡಿಯೋ ಕೆಸೆಟ್ಟು ಯುಮ್ಯಾಟಿಕ್ ದಲ್ಲಿ ಮಾಡಿಸಿರುವ ಅನುಭವವಿರುವ ಕಾರಣ, ಸಾಮೂಹಿಕ ಇಷ್ಟ ಲಿಂಗ ಪೂಜೆಯ ಚಿತ್ರೀಕರಣ ಮಾಡಬಯಸಿದ್ದೇವೆ.

ಇದನ್ನು ಶುಕ್ರವಾರ ದಿ. 16-10-1992 ರಂದು ಬಸವ ಗಂಗೋತ್ರಿ ಆವ-ರಣದಲ್ಲಿ ಬೆಳಿಗ್ಗೆ 10 ರಿಂದ ಇಡಲು ಬಯಸಿದ್ದೇವೆ. ಆದ್ದರಿಂದ ಶರಣ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲುಗಾರರಾಗಬೇಕು. ಬಿಳಿಯ ಬಟ್ಟೆಗಳನ್ನುಟ್ಟು ಕಾವಿಯ ಸ್ಕಾರ್ಫನ್ನು ಹೊದ್ದಿರಬೇಕು. ಪೂಜಾ ಸಾಮಗ್ರಿಗಳೊಡನೆ ಬರಬೇಕು.

ದಾನಿಗಳಿಗೆ ಸೂಚನೆ

ಸಾಮೂಹಿಕ ಇಷ್ಟಲಿಂಗಪೂಜೆ ಮತ್ತು ಕ್ರಾಂತಿಯೋಗಿ ಬಸವಣ್ಣ ಚಲನಚಿತ್ರದ ವೀಡಿಯೋ ಕೆಸೆಟ್ಟುಗಳನ್ನು ಸಿದ್ಧಪಡಿಸಲಾಗುತ್ತಿದೆ.ಇದಕ್ಕೆ ನೆರವು ನೀಡುವ ದಾನಿಗಳ ಹೆಸರನ್ನು ಕೆಸೆಟ್ಟುಗಳಲ್ಲಿ ಚಿತ್ರೀಕರಿಸಿ ಹಾಕಲಾಗುವುದು. 1993 ರ ಶರಣ ಮೇಳದಲ್ಲಿ ಇವೆರಡನ್ನೂ ಬಿಡುಗಡೆ ಮಾಡಲಾಗುವುದು. ಆದ್ದರಿಂದ ಧನಸಹಾಯ ಮಾಡಬೇಕೆನ್ನುವ ದಾಸೋಹಿಗಳು 1100-00 (ಒಂದು ಸಾವಿರ ಒಂದು ನೂರು) ರೂ.ಗಳನ್ನು ಮೊದಲೇ ಕಳಿಸಬಹುದು. ಶಿಬಿರಕ್ಕೆ ಬರುವಾಗಲಾದರೂ ತರಬಹುದು. ಅವರ ಹೆಸರಿನ ಕಾರ್ಡ್ ಬರೆಸಿ, ಕ್ಯಾಮರಾದಲ್ಲಿ ಚಿತ್ರೀಕರಿಸಲು 100-00 ರೂ. ಖರ್ಚಾಗುತ್ತವೆ.

ಎರಡೂ ಕೆಸೆಟ್ಟಿನಲ್ಲಿ ಹೆಸರು ಬೇಕು ಎನ್ನುವವರು 2200-00 ರೂ.ಗಳನ್ನು ಒಂದಕ್ಕೆ ನೆರವು ನೀಡಬೇಕು ಎನ್ನುವವರು 1100-00 ರೂ.ಗಳನ್ನು ಕಳಿಸಬೇಕು. **ವಿ. ಸೂ.** D. D. ತೆಗೆಸಿ ಕಳಿಸಬೇಕು ಎನ್ನುವವರು ವಿಶ್ವಕಲ್ಯಾಣ ಮಿಷನ್ ಬೆಂಗಳೂರು, ಅಥವಾ ಬಸವ ಧರ್ಮ ಪೀಠ, ಬೆಂಗಳೂರು. ಈ ಎರಡರಲ್ಲಿ ಒಂದು ಹೆಸರಿಗೆ ತೆಗೆಸಿ, ಬೆಂಗಳೂರು ಬಸವ ಮಂಟಪದ ವಿಳಾಸಕ್ಕೆ ಕಳಿಸಬೇಕು.

—ಮಾತಾಜಿ

ತತ್ತ್ವ ಪ್ರಚಾರದ ಇನ್ನೊಂದು ವಿಧಾನ

ಶರಣ ಬಂಧುಗಳೇ,

ಇದೊಂದು ಆಲೋಚನೆ. ಧರ್ಮ ಪ್ರಚಾರಕ್ಕಾಗಿ ವಿವಿಧ ಆಧುನಿಕ ಸೌಲಭ್ಯಗಳನ್ನು ಬಳಸಿಕೊಂಡರೆ ಅದು ಬಹಳ ಉತ್ಕೃಷ್ಟವಾಗಿವುದಲ್ಲವೆ? ಸಿನಿಮಾ ತೆರೆ ಇಂದು ಜನಪ್ರಿಯ ಮಾಧ್ಯಮವಾಗಿದೆ. ಶರಣ-ಮೇಳ ಪ್ರಚಾರಕ್ಕೆ ಸ್ಲೈಡುಗಳನ್ನು ಮಾಡಿ ಪ್ರತಿವರ್ಷವೂ ನಿಮಗೆ ಕೊಡುತ್ತಾ ಬಂದಿದ್ದೇವೆ. ನೀವು ನಿಮ್ಮ ನಿಮ್ಮ ಊರುಗಳ ಚಿತ್ರಮಂದಿರಗಳಲ್ಲಿ ಹಾಕಿಸುತ್ತಲಿದ್ದೀರಿ. ಈ ವಿಧಾನವನ್ನು ಇನ್ನೂ ಒಂದು ರೀತಿಯಲ್ಲಿ ಏಕೆ ಬಳಸಬಾರದು ? ಒಟ್ಟಾಗಿ ನಾವು 50, 100 ರಂತೆ ಸ್ಲೈಡುಗಳನ್ನು ಮಾಡಿದರೆ ತ್ರಿವರ್ಣಗಳ ಸುಂದರ ಸ್ಲೈಡುಗಳು 25 ರಿಂದ 30 ರೂ ಬೀಳಬಹುದು.

ಒಂದೇ ಬಣ್ಣದ್ದಾದರೆ ಇನ್ನೂ ಕಮ್ಮಿ ಆಗಬಹುದು, ಕೇಂದ್ರ ಸಂಸ್ಥೆಯಿಂದ ತಿಂಗಳಿಗೆ ಒಂದು ಸ್ಲೈಡು ಸಿದ್ಧಪಡಿಸುವುದು. ತಿಂಗಳಿಗೆ ಒಂದೊಂದು ವಚನ ಆಯ್ಕೆ ಮಾಡುವುದು. ರಾಷ್ಟ್ರೀಯ ಬಸವ ದಳದವರು, ವೈಯಕ್ತಿಕವಾಗಿ ಬಸವ ಧರ್ಮ ಸಂಸತ್ ಸದಸ್ಯರು ಅಂಥ ಸ್ಲೈಡ್ ಖರೀದಿಸಿ ಚಿತ್ರಮಂದಿರದವರು ಪ್ರದರ್ಶಿಸಲು ಏನು ಹಣ ಪಡೆಯುವರೋ ಅದನ್ನು ಕಟ್ಟಿ, ಒಂದು ತಿಂಗಳು ಪೂರ್ತಿ ಪ್ರದರ್ಶಿಸುವುದು. ಚಲನ ಚಿತ್ರ ಮಂದಿರದವರು ಉಚಿತವಾಗಿ ಪ್ರದರ್ಶಿಸಿದರೆ ಅವರನ್ನು ರಾಷ್ಟ್ರೀಯ ಬಸವ ದಳಗಳ ಸಭೆಯಲ್ಲಿ ಸನ್ಮಾನಿಸುವುದು ಸಾಮಾನ್ಯವಾಗಿ ತಿಂಗಳಿಗೆ 15 ರಿಂದ 20 ರೂ ಚಲನಚಿತ್ರ ಮಂದಿರದವರು ತೆಗೆದುಕೊಂಡರೆ ಆಗ ಎಲ್ಲ ಸೇರಿ 50 ರೂ ಖರ್ಚು ಬರುತ್ತದೆ. ಯಾರಾದರೂ ಒಬ್ಬ ದಾನಿಗಳಿಗೆ ವಹಿಸಿಕೊಳ್ಳಿ ಎಂದರೆ ಅವರೇ ವಹಿಸುವರು. ವರ್ಷಕ್ಕೆ 12 ಜನ ದಾನಿಗಳನ್ನು ಹುಡುಕಲು ಕಷ್ಟವಾಗದು. ಚಲನ ಚಿತ್ರ ಮಂದಿರದವರನ್ನು ವಿನಂತಿಸಿಕೊಂಡು ವಚನವನ್ನು ಜನರು ಪೂರ್ತಿಯಾಗಿ ಓದುವವರಿಗೂ ತೋರಿಸಲು ಪ್ರೇರೇಪಿಸಬಹುದು.

ಈ ವಿಧಾನವನ್ನನುಸರಿಸಿದರೆ ಕೇವಲ 50 ರೂಗಳ ಖರ್ಚಿನಲ್ಲಿ ಸಹಸ್ರಾರು ಜನರಿಗೆ ಧರ್ಮ ಸಂದೇಶವನ್ನು ಮುಟ್ಟಿಸಿದಂತೆ ಆಗುವುದು. ಈ ಬಗ್ಗೆ ಬಸವ ಧರ್ಮ ಸಂಸತ್ ಸದಸ್ಯರು ಮತ್ತು ರಾಷ್ಟ್ರೀಯ ಬಸವ ದಳದವರು ಚಿಂತನೆ ಮಾಡಿ ತಿಳಿಸಿದರೆ, ಮತ್ತು ಭಕ್ತಿಪಕ್ಷ ಸಮ್ಮೇಳನಕ್ಕೆ ಬರುವಾಗ ಚಿಂತನೆ-ನಿರ್ಧಾರ ಮಾಡಿಕೊಂಡು ಬಂದರೆ ಕಾರ್ಯರೂಪಕ್ಕೆ ಇಳಿಸಬಹುದು. ಸಲಹೆ-ಸೂಚನೆ ನಿರೀಕ್ಷಿಸುತ್ತೇವೆ.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಬಸವ ಧರ್ಮಪೀಠ,

ವ್ಯತ್ಯಾಸ :

ರೈತನ ಕೆಲಸವೂ—ಕಷ್ಟವೇ ।
ಹಜಾಮನ ಕೆಲಸವೂ—ಕಷ್ಟವೇ॥
ಎದೆಯಮೇಲೀನ ಲಿಂಗವೂ—ದೇವರೇ ।
ಗುಡಿಯಲಿಯ ಲಿಂಗವೂ—ದೇವರೇ ॥
ಹಜಾಮನ ಕಷ್ಟದ ಕೆಲಸ—ಕೆತ್ತುವದಾದರೆ ।
ಗುಡಿಯ ದೇವರ ಕೆಲಸ—ಸುಲಿಯುವದೆಂದ ಕುಮಾರ ಕಕ್ಕಯ್ಯ॥

—ಕುಮಾರ ಕಕ್ಕಯ್ಯ ಪೋಳ

ಓಂ ಶ್ರೀ ಗುರು ಬಸವಲಿಂಗಾಯ ನಮಃ

ಬಸವ ತತ್ತ್ವ ಪರೀಕ್ಷೆಗಳು-1991

— ಫಲಿತಾಂಶಗಳು —

3. **ಬಸವ ತತ್ತ್ವ ಪ್ರವೀಣ.**

ದ್ವಿತೀಯ ವರ್ಗ :
ಆರ್. ಎಸ್. ಹೊನ್ನಪ್ಪನವರ (ಧಾರವಾಡ ಕೇಂದ್ರ)

2. **ಬಸವ ತತ್ತ್ವಪರಿಚಯ.**

ಪ್ರಥಮ ವರ್ಗ :
ಪ್ರಥಮರ್‍ಯಾಂಕ್—ಸೋದರಿ ಕಸ್ತೂರಿ (ಬೆಂಗಳೂರು ಕೇಂದ್ರ)
ದ್ವಿತೀಯ ರ್‍ಯಾಂಕ್—1. ಮುರುಗೇಶ ಹೂಗಾರ (ಧಾರವಾಡ ಕೇಂದ್ರ)
2. ಸುಮಂಗಲಾ ಎ. ಬುರ್ಜಿ (ಬೆಂಗಳೂರು ಕೇಂದ್ರ)

ಪಾಸ್ ವರ್ಗ :
ಶಿವಲೀಲಾ ಕಾಶಪ್ಪ ನೂಲ್ವಿ (ಹುಬ್ಬಳ್ಳಿ ಕೇಂದ್ರ)
ನೀಲಾಂಬಿಕಾ ತೋಟಪ್ಪ ಮುಮ್ಮಿಗಟ್ಟಿ (ಧಾರವಾಡ ಕೇಂದ್ರ)

1. **ಬಸವ ತತ್ತ್ವ ಪ್ರವೇಶ:**

ಪ್ರಥಮ ವರ್ಗ ;
ಪ್ರಥಮ ರ್‍ಯಾಂಕ್—ರೇಖಾ ಜಿ. ಎಸ್. (ಭದ್ರಾವತಿ ಕೇಂದ್ರ)
ದ್ವಿತೀಯ ರ್‍ಯಾಂಕ್—ಸುಮಿತ್ರಾ ಮರಿಬಸಪ್ಪ ದನದಮನಿ (ಧಾರವಾಡ ಕೇಂದ್ರ)

ದ್ವಿತೀಯ ವರ್ಗ :
ಸುಮಂಗಲಾ ಎ. ಬುರ್ಜಿ (ಬೆಂಗಳೂರು ಕೇಂದ್ರ)
ಬಸಣ್ಣ ರಾಮಚಂದ್ರ ದೇವಣಗಾಂವಕರ (ಕಲಬುರ್ಗಿ ಕೇಂದ್ರ)
ಬಸವೇಶ್ವರಿ ಬಿ. ಬಿರಾದಾರ (,, ,,)
ಜಿ. ಶಂಕರಪ್ಪ (ಭದ್ರಾವತಿ ಕೇಂದ್ರ)
ಉ ಮಾದೇವಿ ಗುರುಬಸಪ್ಪ (" ")
ನಂ. ಗಂಗಾಧರಯ್ಯ (" ")
ಜಿ. ಎಸ್. ಲೋಹಿತ್ ಕುಮಾರ (" ")

ಈಶ್ವರ ಬಸವಣ್ಣೆಪ್ಪ ಬಾಳಗಿ (ಧಾರವಾಡ ಕೇಂದ್ರ)
ಶಾರದಾ ವೀರೇಶ ಉಳಸಾಂದ್ರ (,, ,,)

ಪಾಸ್ ವರ್ಗ :

ಬಸವರಾಜ ಶಿವಲಿಂಗಪ್ಪ ಮೇಗೇರಿ (ಹುಬ್ಬಳ್ಳಿ ಕೇಂದ್ರ)
ಬಸವರಾಜ ರಾಚಪ್ಪ ಐನೋಳಿ (ಕಲಬುರ್ಗಿ ಕೇಂದ್ರ)
ಜಗದೇವಿ ಬಿ. ಬಿರಾದಾರ (,, ,,)
ಸಿ. ಕೆ. ಚನ್ನಬಸಪ್ಪ (ಭದ್ರಾವತಿ ಕೇಂದ್ರ)
ಸಿ. ಕೆ. ಮಂಜುನಾಥ (" ")
ಚ. ಗಂ. ಶಿರಸಂಗಿ (ಧಾರವಾಡ ಕೇಂದ್ರ)

—ಶೋಭಾದೇವಿ ಪರಮಾದಿ
ನಿರ್ದೇಶಕರು, ಶ್ರೀ ಬಸವ ಭಾರತಿ ದಿವ್ಯ ಜ್ಞಾನ
ವಿದ್ಯಾಲಯ, ಹುಬ್ಬಳ್ಳಿ-24

— ಶುಭ ಹಾರೈಕೆಗಳು —

ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಎಲ್ಲರಿಗೂ ಶುಭ ಹಾರೈಕೆಗಳು. ಲಿಂ. ಶರಣ ವೀರಭದ್ರಪ್ಪ ರುದ್ರಪ್ಪ ಕಮಡೊಳ್ಳಿ, ಹುಬ್ಬಳ್ಳಿ ಇವರು ಬಹುಮಾನಕ್ಕಾಗಿ ಇಟ್ಟ ಡಿಪಾಜಿಟ್ ಹಣದ ಮೇಲಿನ ಬಡ್ಡಿ ಹಾಗೂ ಶರಣ ಜಿ. ಎಂ. ಪಾಟೀಲ ಕಲ್ಯಾಣನಗರ ಧಾರವಾಡ ಇವರು ಕೊಟ್ಟ ರೂ 200/-ಗಳಿಂದ ಪ್ರಥಮ ಹಾಗೂ ದ್ವಿತೀಯ ರ್‍ಯಾಂಕ್ ವಿಜೇತರಿಗೆ ಕ್ರಮವಾಗಿ ರೂ 60 ಹಾಗೂ ರೂ 40 ಬಹುಮಾನ ಕೊಡಲಾಗಿದೆ.

ವಿ. ಸೂ: ಪ್ರತಿವರುಷ ಆಗಸ್ಟ್ ತಿಂಗಳಲ್ಲಿ ಬಸವ ತತ್ತ್ವ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಆಸಕ್ತರು 1 ರೂ ಸ್ಟಾಂಪ್ ಇಟ್ಟು ಮುಂಚಿತವಾಗಿ "ನಿರ್ದೇಶಕರು, ಶ್ರೀ ಬಸವ ಭಾರತಿ ದಿವ್ಯಜ್ಞಾನ ವಿದ್ಯಾಲಯ, ಬಸವಚೈತನ್ಯ, ನಂ 16, ಶ್ರೀ ಬಸವನಗರ, ಹುಬ್ಬಳ್ಳಿ 24" ಇವರೊಂದಿಗೆ ವ್ಯವಹರಿಸಬೇಕಾಗಿ ವಿನಂತಿ.

—ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷರು, ಬಸವ ತತ್ತ್ವ ಪರಿಷತ್, ಬೆಂಗಳೂರು.

ಓಂ ಶ್ರೀ ಗುರು ಬಸವಲಿಂಗಾಯ ನಮಃ

ಭಾವ ಸಂಗಮ

(ವಧು-ವರರ ಹೊಂದಾಣಿಕೆ ಕೇಂದ್ರ)
ರಾಷ್ಟ್ರೀಯ ಬಸವದಳ, ಬಸವ ಮಂಟಪ
ರಾಜಾಜಿನಗರ, ಬೆಂಗಳೂರು-560 010

ಶರಣ ಬಂಧುಗಳೇ,

ಬೆಂಗಳೂರು ನಗರದ ರಾಷ್ಟ್ರೀಯ ಬಸವ ದಳದ ಸದಸ್ಯರು **'ಭಾವ ಸಂಗಮ'** ಎಂಬ ವಧುವರರ ಹೊಂದಾಣಿಕೆ ಕೇಂದ್ರವೊಂದನ್ನು ಆರಂಭಿಸಿದ್ದೇವೆ. ಬಸವ ತತ್ತ್ವಾನುಯಾಯಿಗಳಾದ ಲಿಂಗವಂತ ಧರ್ಮೀಯರು ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಾತ್ರವಲ್ಲ, ಹೊರರಾಜ್ಯಗಳಲ್ಲಿ, ಹೊರರಾಷ್ಟ್ರಗಳಲ್ಲಿ ಸಹ ಹರಿದು ಹಂಚಿ ಹೋಗಿದ್ದಾರೆ. ಪರಸ್ಪರ ಸಂಪರ್ಕದ ಕೊರತೆಯಿಂದಾಗಿ ವಿವಾಹ ಸಂಬಂಧಗಳನ್ನು ಏರ್ಪಡಿಸುವುದು ಕಷ್ಟಕರವಾಗಿದೆ. ಸಮಯ, ಹಣ, ಪ್ರಯಾಣದ ಪರಿಶ್ರಮಗಳನ್ನು ಉಳಿಸಲೋಸುಗ 'ಭಾವ ಸಂಗಮ'ವು ರೂಪುಗೊಂಡಿದೆ. 5 ರೂ. ಗಳನ್ನು ಕಳಿಸಿ, ಇದಕ್ಕೆ ಸಂಬಂಧಿಸಿದ ಅರ್ಜಿ ಪತ್ರಗಳನ್ನು ತರಿಸಿಕೊಂಡು, ಅದರಲ್ಲಿ ವಿವರಗಳನ್ನು ತುಂಬಿ ನೋಂದಣಿ ಶುಲ್ಕ 50 ರೂ. ಗಳೊಡನೆ ಅರ್ಜಿ ಪತ್ರವನ್ನು ಕಳಿಸಬೇಕು. ರಸೀತಿಯೊಡನೆ ನಿಮಗೆ ಒಂದು ಕ್ರಮ ಸಂಖ್ಯೆ ಕೊಡಲಾಗುವುದು ಮತ್ತು ಸೂಕ್ತವೆನಿಸಿದ ವಧು/ವರರ ವಿವರಗಳನ್ನು ಕಳಿಸಲಾಗುವುದು.

ಭೇಟಿ ಸಮಯ: ಪ್ರತಿದಿನವೂ ಬೆಳಿಗ್ಗೆ 10 ರಿಂದ 12 ಗಂಟೆ ವರೆಗೆ
ಸಂಜೆ 5 ರಿಂದ 7 ಗಂಟೆ. ವರೆಗೆ

ಜನರಿಂದ ಈ ಸದವಕಾಶವನ್ನು ಉಪಯೋಗಿಸಿಕೊಳ್ಳುವುದರಲ್ಲಿ ಹೆಚ್ಚಿನ ಉತ್ಸಾಹ ಕಂಡು ಬಂದರೆ, ವರ್ಷದಲ್ಲಿ ಹಲವು ಬಾರಿ ಸಮಾವೇಶಗಳನ್ನು ಏರ್ಪಡಿಸಿ, ವಧು-ವರರನ್ನು ಮತ್ತು ಅವರ ಪಾಲಕರನ್ನು ಆಹ್ವಾನಿಸಲಾಗುವುದು.

—ಶರಣು-ಶರಣಾರ್ಥಿಗಳೊಡನೆ—

ಶರಣೆ ದೇವಿಕಾ ಹೆಚ್. ಎ. ಶರಣಪ್ಪ **ಶರಣ ಎನ್. ಪುಟ್ಟರುದ್ರಪ್ಪ**
ಶರಣೆ ಪಾರ್ವತಿ ಡಾ|| ಸಿ. ವಿ. ಶಿರೋಳ **ಶರಣ ಕೊಂಡಜ್ಜಿ ಬಸಪ್ಪ**
ಶರಣೆ ಜಯಮ್ಮ ಶೇಖರಪ್ಪ **ಶರಣ ಶಿವರುದ್ರೇಗೌಡ**
ಶರಣ ಎಲ್. ಗುರುಸ್ವಾಮಿ **ಶರಣ ಸಿ. ವಿರುಪಾಕ್ಷಯ್ಯ**
ವ್ಯವಹರಿಸುವ ವಿಳಾಸ : ದೂರವಾಣಿ : 325335

"ಭಾವ ಸಂಗಮ" ವಧುವರರ ಹೊಂದಾಣಿಕೆ ಕೇಂದ್ರ
ಬಸವ ಮಂಟಪ. 2035, 2ನೇ ಬ್ಲಾಕು
20ನೇ ಮೆಯಿನ್ ರಸ್ತೆ, ರಾಜಾಜಿನಗರ, ಬೆಂಗಳೂರು-560 010. ಕರ್ನಾಟಕ ರಾಜ್ಯ

“ಭಾರತದ ಜೀವಾಳ ಹಳ್ಳಿಗಳು, ಪಟ್ಟಣಗಳಲ್ಲ, ಹಳ್ಳಿಗರ ಬಡತನ ನಿರ್ಮೂಲನೆಗೊಳಿಸಿದ ದಿನವೇ ಸ್ವರಾಜ್ಯ ದೊರೆತ ದಿನ”

– ಮಹಾತ್ಮ ಗಾಂಧೀಜಿ

ಸಮೃದ್ಧ ಬದುಕಿಗೆ ಸಮಗ್ರ ಕಾರ್ಯಕ್ರಮಗಳು

ಭಾರತ ಸ್ವಾತಂತ್ರ್ಯಗಳಿಸಿದ 45 ವರ್ಷಗಳ ನಂತರವೂ ಮಹಾತ್ಮ ಗಾಂಧೀಜಿಯವರ ಭವ್ಯ ಭಾವನೆಗಳು ನಮಗೆ ಸತತ ಸ್ಫೂರ್ತಿ ಮತ್ತು ಪ್ರೇರಣೆಯನ್ನು ನೀಡುತ್ತಿವೆ. ಮಹಾತ್ಮ ಗಾಂಧೀಜಿಯವರ ಕನಸಿನ ಭಾರತವೆಂದರೆ; ಅದು “ಪರಸ್ಪರ ಸ್ವಾವಲಂಬಿಯಾದ ಸ್ವತಂತ್ರ ಪ್ರಜಾರಾಜ್ಯ” ಎಂಬುದು ನಮಗೆಲ್ಲ ಮನದಟ್ಟಾಗಿದೆ. ಇದನ್ನರಿತೇ 1991 ರ ಅಕ್ಟೋಬರ್ 2 ರಂದು ಕರ್ನಾಟಕ ಸರ್ಕಾರ “ವಿಶ್ವ” ಎಂಬ ವಿನೂತನ ಯೋಜನೆಯನ್ನು ರಾಜ್ಯದಲ್ಲಿ ಅನುಷ್ಠಾನಕ್ಕೆ ತಂದಿದೆ. ಗ್ರಾಮೀಣ ಪ್ರದೇಶದ ಗುಡಿ ಕೈಗಾರಿಕೆಗಳಿಗೆ ಉತ್ತೇಜನ ನೀಡುವ ಮೂಲಕ ಗ್ರಾಮೀಣ ಅಭಿವೃದ್ಧಿಗೆ ನೆರವಾಗುವ “ವಿಶ್ವ” ಗ್ರಾಮೀಣ ಬಂಧುಗಳಿಗೆ ಸ್ಥಳೀಯವಾಗಿಯೇ ಉದ್ಯೋಗ ಕಲ್ಪಿಸಿ ಅವರು ಪಟ್ಟಣಗಳಿಗೆ ವಲಸೆ ಹೋಗುವುದನ್ನು ತಪ್ಪಿಸುವ ಗುರಿ ಹೊಂದಿದೆ. ಈ ದಿಶೆಯಲ್ಲಿ ಸರ್ಕಾರ ಗ್ರಾಮೀಣ ಯುವಕರಿಗೆ ತಮ್ಮ ಪರಂಪರಾಗತ ಕಸುಬು ಮತ್ತು ಕುಶಲಕಲೆಗಳಲ್ಲಿ ತರಬೇತಿ ನೀಡುವುದು, ಉತ್ಪಾದಿಸಿದ ವಸ್ತುಗಳಿಗೆ ಮಾರುಕಟ್ಟೆ ಸೌಲಭ್ಯ ಕಲ್ಪಿಸುವುದು ಹಾಗೂ ಅಂತಹ ಕಸುಬುಗಳನ್ನು ಕೈಗೊಳ್ಳಲು ಅಗತ್ಯವಾದ ಹಣಕಾಸಿನ ನೆರವು ಮತ್ತು ಇತರ ಪೂರಕ ಸೌಲಭ್ಯಗಳನ್ನು ಒದಗಿಸುವ ಕಾರ್ಯವನ್ನು ವ್ಯಾಪಕವಾಗಿ ಕೈಗೊಂಡಿದೆ. ನಮ್ಮ ಗ್ರಾಮಗಳು ಸ್ವಾವಲಂಬಿಯಾಗಬೇಕು, ತನ್ಮೂಲಕ ಮಹಾತ್ಮ ಗಾಂಧೀಜಿಯವರ ಬಲಿಷ್ಠ ಭಾರತ ನಿರ್ಮಾಣದ ಕಲ್ಪನೆಯನ್ನು ಸಾಕಾರಗೊಳಿಸಬೇಕು ಎಂಬುದೇ “ವಿಶ್ವ” ಯೋಜನೆಯ ಪರಮ ಗುರಿ.

ಕಲಿಯಲು ಮುಕ್ತ ಅವಕಾಶ

ಗ್ರಾಮೀಣ ಪ್ರದೇಶದ ಬಡವರ್ಗದ ಮಕ್ಕಳು ಶಾಲೆಗಳಿಗೆ ಕ್ರಮವಾಗಿ ಹಾಜರಾಗಿ ಕಲಿಯಲು ಅನುಕೂಲವಾಗುವಂತೆ ನಗದು ಹಣ ನೀಡಿಕೆಯ ಮೂಲಕ ಪ್ರೋತ್ಸಾಹ ತುಂಬುವ “ಅಕ್ಷಯ” ಯೋಜನೆಯಿಂದ ರಾಜ್ಯದ 30 ಲಕ್ಷ ಮಕ್ಕಳ ಶಿಕ್ಷಣಕ್ಕೆ ಮುಕ್ತ ಅವಕಾಶ ದೊರೆತಿದೆ.

ಸ್ವಸ್ಥ ಜೀವನಕ್ಕೆ ನೆರವು

ರಾಜ್ಯದ ಅದರಲ್ಲೂ ಗ್ರಾಮೀಣ ಪ್ರದೇಶದ ಜನರಿಗೆ ಆರೋಗ್ಯ ಜೀವನ ನೀಡುವ “ಶುಶ್ರೂಷ” ಒಂದು ಮಾದರಿ ಯೋಜನೆ. ಒಂದು ಕೋಟಿ ರೂಪಾಯಿ ವೆಚ್ಚದ ಈ ಕಾರ್ಯಕ್ರಮದಂತೆ ಎಲ್ಲ ನಾಗರಿಕರಿಗೂ ವರ್ಷಕ್ಕೆ ಎರಡು ಸಲ ಪುಕ್ಕಟೆ ವೈದ್ಯಕೀಯ ತಪಾಸಣೆಯ ಸೌಲಭ್ಯವಿದೆ. ಇದಲ್ಲದೆ ಸರ್ಕಾರ ರಾಜ್ಯದ ಎಲ್ಲ ಜಿಲ್ಲೆಗಳಲ್ಲೂ ಸಾರ್ವತ್ರಿಕ ರೋಗ ನಿರೋಧಕ ಲಸಿಕೆ ಕಾರ್ಯಕ್ರಮವನ್ನು ಕೈಗೆತ್ತಿಕೊಂಡಿದೆ.

ತಲೆಯ ಮೇಲೊಂದು ಸೂರು

“ಆಶ್ರಯ” ಹೆಸರೇ ಹೇಳುವಂತೆ ಜನತೆಗೆ ನೆಲೆ ನೀಡುವ ಯೋಜನೆ. ಆಶ್ರಯ ಯೋಜನೆಯಲ್ಲಿ ಕರ್ನಾಟಕ ಸರ್ಕಾರ ರಾಜ್ಯಾದ್ಯಂತ ಭೂರಹಿತ ಮತ್ತು ನಿವೇಶನ ರಹಿತರಿಗೆ ಐದು ಲಕ್ಷಕ್ಕೂ ಹೆಚ್ಚು ನಿವೇಶನಗಳನ್ನು ಹಂಚಿದೆ. ಇದಲ್ಲದೆ ಬೆಂಗಳೂರು ನಗರದ ಕೊಳಚೆ ನಿವಾಸಿಗಳಿಗೆ 30,000 ಮನೆಗಳನ್ನು ಹಾಗೂ ರಾಜ್ಯದ ಇತರ ಪಟ್ಟಣ ಪ್ರದೇಶಗಳ ಜನರಿಗೆ 30,000 ಮನೆಗಳನ್ನು ನಿರ್ಮಿಸಲಾಗುತ್ತಿದೆ. ಡಾ॥ ಅಂಬೇಡ್ಕರ್ ಶತಮಾನೋತ್ಸವದ ಅಂಗವಾಗಿ ರಾಜ್ಯದ ಪ್ರತಿಯೊಂದು ಬ್ಲಾಕ್‌ನಲ್ಲೂ 1000 ಮನೆಗಳು ಬರಲಿವೆ.

ಆರಾಧನ

ದುರ್ಬಲ ವರ್ಗದ ಜನರು ಅಧಿಕವಾಗಿರುವ ಪ್ರದೇಶಗಳಲ್ಲಿರುವ ಆರಾಧನ ಸ್ಥಳಗಳ ಪುನರುಜ್ಜೀವನ ಕಾರ್ಯವನ್ನು “ಆರಾಧನ” ಯೋಜನೆ ಕೈಗೊಂಡಿದೆ. ಇದುವರೆಗೆ ಈ ಉದ್ದೇಶಕ್ಕಾಗಿ ರಾಜ್ಯ ಸರ್ಕಾರ 5 ಕೋಟಿ ಹಣವನ್ನು ಬಿಡುಗಡೆ ಮಾಡಿದೆ.

ಅಭಿವೃದ್ಧಿ ಕಾರ್ಯಗಳಿಗೆ ಅಧಿಕ ವಿದ್ಯುತ್

ಅಭಿವೃದ್ಧಿ ಕಾರ್ಯಗಳಿಗೆ ಅಧಿಕ ವಿದ್ಯುತ್ ಪೂರೈಸುವ ಸಲುವಾಗಿ ಶಾಖೋತ್ಪನ್ನ ಮತ್ತು ಜಲ ವಿದ್ಯುತ್ ಯೋಜನೆಗಳನ್ನು ಸ್ಥಾಪಿಸುವ ಒಂದು ಬೃಹತ್ ಯೋಜನೆಯನ್ನು ರಾಜ್ಯ ಸರ್ಕಾರ ಸಿದ್ಧಪಡಿಸಿದೆ. ವಿದ್ಯುತ್ ಉತ್ಪಾದನೆ ಹಾಗೂ ಪೂರೈಕೆಗೆ ವಿದೇಶೀ ಸಂಸ್ಥೆಗಳೂ ಸೇರಿದಂತೆ ಖಾಸಗಿ ಕಂಪೆನಿಗಳು ಹಾಗೂ ಅನಿವಾಸಿ ಭಾರತೀಯರನ್ನು ರಾಜ್ಯ ಸರ್ಕಾರ ಆಹ್ವಾನಿಸಿದೆ. ವಿದ್ಯುತ್ ಕ್ಷೇತ್ರದ ಅಭಿವೃದ್ಧಿಗೆ ದೊಡ್ಡ ಪ್ರಮಾಣದ ವಿದೇಶೀ ಬಂಡವಾಳವನ್ನು ನಿರೀಕ್ಷಿಸಲಾಗಿದೆ.

ಕೃಷಿ ಕ್ಷೇತ್ರಕ್ಕೆ ಒತ್ತಾಸೆ

ರಾಜ್ಯದಲ್ಲಿ ಕೃಷಿ ಕ್ಷೇತ್ರದ ಪ್ರಗತಿಗೆ ಪ್ರಥಮ ಪ್ರಾಶಸ್ತ್ಯ ನೀಡಲಾಗಿದೆ. ಕೃಷಿಕಾರ್ಯಗಳನ್ನು ಸುಧಾರಿಸಿ ಉತ್ಪಾದನೆಯನ್ನು ಅಧಿಕಗೊಳಿಸುವ ವಿವಿದೋದ್ದೇಶ ಹಾಗೂ ತೀವ್ರ ಕಾರ್ಯಕ್ರಮಗಳು ವ್ಯಾಪಕವಾಗಿ ಅನುಷ್ಠಾನಗೊಳ್ಳುತ್ತಿವೆ. ಇದಕ್ಕಾಗಿ ಕೊಡಮಾಡಿರುವ ಹಣ 153.32 ಕೋಟಿ ರೂಪಾಯಿ. ರಾಜ್ಯದ ನೀರಾವರಿ ಸಾಮರ್ಥ್ಯವನ್ನು ಗುರುತಿಸಿ ಬಳಸುವ ಕಾರ್ಯ ಮುನ್ನಡೆದಿದೆ. “ಕೆರೆ ಕಲ್ಯಾಣ” ಯೋಜನೆಯಲ್ಲಿ ಕೈಗೊಂಡಿರುವ ಕೆರೆಗಳ ದುರಸ್ತಿ ಮತ್ತು ಅಭಿವೃದ್ಧಿ ಸಣ್ಣ ನೀರಾವರಿ ಕೃಷಿಗೆ ನೆರವಾಗಿದೆ. ಬರ ಪರಿಹಾರ ಕಾಮಗಾರಿಗಳಿಗೆ 1991-92 ರಲ್ಲೂ ರೂ. 78 ಕೋಟಿ ವೆಚ್ಚ ಮಾಡಿದೆ, 1992-93 ರಲ್ಲಿ ಈವರೆಗೆ ರೂ. 14.56 ಕೋಟಿ ಬಿಡುಗಡೆ ಮಾಡಲಾಗಿದೆ.

ಹಳ್ಳಿ ಹಳ್ಳಿಗೂ ಕುಡಿಯುವ ನೀರು

ರಾಜ್ಯದ ಪ್ರತಿ ಗ್ರಾಮಕ್ಕೂ ಈಗ ಕುಡಿಯುವ ನೀರು ಪೂರೈಸಲಾಗಿದೆ. ಕರ್ನಾಟಕ ಸರ್ಕಾರದ ಒಟ್ಟಾರೆ ಸಾಧನೆಗೆ ಯೋಜನಾ ಆಯೋಗವು ಮೆಚ್ಚುಗೆ ವ್ಯಕ್ತ ಪಡಿಸಿದೆ.

ಅಸಂಘಟಿತ ಕಾರ್ಮಿಕರಿಗೆ ಆಸರೆ

ಕರ್ನಾಟದ ಸರ್ಕಾರವು ಕೈಗೆತ್ತಿಕೊಂಡಿರುವ “ಗುಂಪು ವಿಮಾ ಯೋಜನೆ” ಹಾಗೂ ಅಸಂಘಟಿತ ಕಾರ್ಮಿಕ ವರ್ಗಕ್ಕೆ ನೆರವಾಗುವ “ಕಲ್ಯಾಣ ನಿಧಿ” ಆಟೋರಿಕ್ಷಾ ಚಾಲಕರು, ಕ್ಷೌರಿಕರು, ಹಣ್ಣುಹಂಪಲು ಮಾರುವವರು, ಕೂಲಿಕಾರರು ಮುಂತಾದ ಅಸಂಘಟಿತ ದುಡಿಮೆಯ ವರ್ಗಕ್ಕೆ ಸಾಮಾಜಿಕ ಭದ್ರತೆಯನ್ನು ಒದಗಿಸಿದೆ.

ಹನಿ ನೀರೂ ಅಮೂಲ್ಯ

ಕ್ರಿ.ಶ. 2000 ದ ಹೊತ್ತಿಗೆ ರಾಜ್ಯದ ಒಟ್ಟು ನೀರಾವರಿ ಸಾಮರ್ಥ್ಯದ 55 ಲಕ್ಷ ಹೆಕ್ಟೇರ್ ಭೂಮಿಯನ್ನು ನೀರಾವರಿಗೊಳಪಡಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದ್ದು ಈ ವರ್ಷ ನೀರಾವರಿ ಅಭಿವೃದ್ಧಿಗಾಗಿ 588 ಕೋಟಿ ರೂಪಾಯಿ ತೆಗೆದಿರಿಸಲಾಗಿದೆ.

ಅತಿ ವೇಗದಿಂದ ಕ್ಷೀಣಿಸುತ್ತಿರುವ ಪ್ರಾಕೃತಿಕ ಸಂಪನ್ಮೂಲವನ್ನು ಸಂರಕ್ಷಿಸುವ ಸಲುವಾಗಿ ಸರ್ಕಾರ ಕೈಗೊಂಡಿರುವ ಮತ್ತೊಂದು ವಿಶಿಷ್ಟ ಯೋಜನೆ “ಹನಿತನಿ” ನೀರಿನ ಸಮರ್ಥ ಬಳಕೆಗಾಗಿ ಆಧುನಿಕ ನೀರಾವರಿ ಪದ್ಧತಿಗಳನ್ನು ಅಳವಡಿಸುವ ರೈತರಿಗೆ ಉತ್ತೇಜನ ನೀಡುವುದು “ಹನಿತನಿ” ಯೋಜನೆಯ ಗುರಿ.

ಅಗತ್ಯ ವಸ್ತುಗಳ ಪೂರೈಕೆ

ರಾಜ್ಯದಾದ್ಯಂತ 17, 795 ನ್ಯಾಯಬೆಲೆ ಅಂಗಡಿಗಳ ಮೂಲಕ ನಾಗರಿಕರಿಗೆ ಅಗತ್ಯ ವಸ್ತುಗಳನ್ನು ವಿತರಣೆ ಮಾಡಲಾಗುತ್ತಿದೆ. ಇವುಗಳಲ್ಲಿ 13,111 ನ್ಯಾಯಬೆಲೆ ಅಂಗಡಿಗಳು ಗ್ರಾಮೀಣ ಪ್ರದೇಶಗಳಲ್ಲೂ 4684 ಅಂಗಡಿಗಳು ಪಟ್ಟಣ ಪ್ರದೇಶಗಳಲ್ಲೂ ಕಾರ್ಯವೆಸಗುತ್ತಿವೆ. ರಾಜ್ಯದಲ್ಲಿ ಒಟ್ಟು 81,18,223 ಕುಟುಂಬ ಪಡಿತರ ಕಾರ್ಡುಗಳಿವೆ. ಇವುಗಳಲ್ಲಿ 58,18,223 ಕಾರ್ಡುಗಳು ಗ್ರಾಮೀಣ ಪ್ರದೇಶಗಳಲ್ಲೂ 22,92,821 ಕಾರ್ಡುಗಳು ಪಟ್ಟಣ ಪ್ರದೇಶದಲ್ಲೂ ಇವೆ.

ಗುಡ್ಡಗಾಡು ಜನರಿಗೆ ಪಡಿತರ ಪೂರೈಕೆ

ಗುಡ್ಡಗಾಡು ಜನರ ಮನೆಬಾಗಿಲಿಗೇ ಅಗತ್ಯ ವಸ್ತುಗಳನ್ನು ಪೂರೈಸುವ ಸಂಚಾರಿ ನ್ಯಾಯಬೆಲೆ ವಾಹನಗಳ ಏರ್ಪಾಡು ರಾಜ್ಯ ಸರ್ಕಾರ ಕೈಗೊಂಡಿರುವ ಮತ್ತೊಂದು ಮಾದರಿ ಕಾರ್ಯಕ್ರಮವಾಗಿದೆ.

ಶಾಂತಿ—ಸೌಹಾರ್ದ

ಮೈತ್ರಿಯ ಸೌಹಾರ್ದಕ್ಕೆ ಕರ್ನಾಟಕ ಹೆಸರಾದ ರಾಜ್ಯ. ಈ ಪರಂಪರೆಗೆ ಕುಂದು ಬರದಂತೆ ರಾಜ್ಯದಲ್ಲಿ ಶಾಂತಿ-ಸೌಹಾರ್ದತೆಯನ್ನು ಕಾಪಾಡಿಕೊಂಡು ಬರುವಲ್ಲಿ ಕರ್ನಾಟಕ ಸರ್ಕಾರ ಹೊಣೆಯರಿತು ಶ್ರಮಿಸುತ್ತಿದೆ.

ಭಾರತದ 46 ನೆಯ ಸ್ವಾತಂತ್ರ್ಯ ದಿನದಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರ ಕನಸು ಕಂಡ ಸದೃಢ ಮತ್ತು ಜಾತ್ಯತೀತ ಸ್ವತಂತ್ರ ಭಾರತದ ಕಲ್ಪನೆಯನ್ನು ಕರ್ನಾಟಕ ಸರ್ಕಾರ ಸಾಕಾರಗೊಳಿಸುತ್ತಿದೆ.

ಅದಕ್ಕೆ ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಸಮರ್ಪಣಾ ಭಾವದಿಂದ ಮುಂದುವರಿಯುತ್ತಿದೆ.

ಬಡವರ ಮತ್ತು ದುರ್ಬಲ ವರ್ಗದವರ ಏಳಿಗೆಗೆ ಬದ್ಧ.

ಕರ್ನಾಟಕ ವಾರ್ತೆ

ಕಲ್ಯಾಣ ಕಿರಣ ಓದುಗರೇ ಗಮನಿಸಿರಿ

ಕಲ್ಯಾಣ ಕಿರಣ ಪತ್ರಿಕೆಯು ಅಂಚೆಯಲ್ಲಿ ಬರುತ್ತಿದ್ದಂತೆಯೇ ನಿಮ್ಮ ಚಂದಾ ಸಂಖ್ಯೆ, ಆಜೀವ ಸದಸ್ಯತ್ವ ಸಂಖ್ಯೆ ಗುರುತು ಮಾಡಿ ಒಂದು ಕಡೆ ಬರೆದು ಇಟ್ಟುಕೊಳ್ಳಿರಿ. ಸಕಾಲದಲ್ಲಿ ಪತ್ರಿಕೆ ಕೈ ಸೇರದೆ ಇದ್ದಾಗ, ವಿಳಾಸ ತಿದ್ದುಪಡಿ, ಬದಲಾವಣೆ ಮಾಡುವಾಗ ನಿಮ್ಮ ಚಂದಾ ಸಂಖ್ಯೆಯನ್ನು ಬರೆಯಿರಿ. ದಿನ ದಿನಕ್ಕೆ ವೃದ್ಧಿಯಾಗುತ್ತಿರುವ ಚಂದಾದಾರರ ಪಟ್ಟಿಯಲ್ಲಿ ಕ್ರಮಸಂಖ್ಯೆಯಿಲ್ಲದೆ ಹುಡುಕುವುದು ಕಷ್ಟಸಾಧ್ಯವಾಗುತ್ತದೆ ಮತ್ತು ಕಾರ್ಯಕರ್ತರ ಸಮಯ ವ್ಯರ್ಥವಾಗುತ್ತದೆ ಎಂಬುದನ್ನು ಮನಗಾಣಿರಿ. ಪತ್ರವ್ಯವಹಾರ ಮಾಡುವಾಗ ಚಂದಾ ಸಂಖ್ಯೆಯೊಡನೆ ಪೂರ್ಣ ವಿಳಾಸವನ್ನೂ ಬರೆಯುವ ಅಭ್ಯಾಸ ಇಟ್ಟುಕೊಳ್ಳಿರಿ.

KALYANA KIRANA- Monthly magazine Printed and Published by B. Shambhulingaiah, at Prabhudeva Printing Press, Basava Gangotri, Kumbalgod, Bangalore-560 074.

ಅಭಿಪ್ರಾಯ ತಿಳಿಸಿರಿ

ಚಿಂತನೆಗಾಗಿ :

—ಮಾತಾಜಿ

1. ಮಾಡುವ ಸದಾಚಾರಕ್ಕೆ ಮೊದಲನೆಯ (ಲಿಂಗ) ಪೂಜೆಯೇ ಗುರು ಪೂಜೆ
ಮಾಡುವ ಸದಾಚಾರಕ್ಕೆ ಎರಡನೆಯ (ಲಿಂಗ) ಪೂಜೆಯೇ ಲಿಂಗ ಪೂಜೆ
ಮಾಡುವ ಸದಾಚಾರಕ್ಕೆ ಮೂರನೆಯ (ಲಿಂಗ) ಪೂಜೆಯೇ ಜಂಗಮ ಪೂಜೆ
ಮಾಡುವ ಸದಾಚಾರಕ್ಕೆ ಮೂರು ಪೂಜೆ
ಈ ಪೂಜೆ ಅನಂತ ಜನ್ಮ ದುರಿತ ಧ್ವಂಸ ನೋಡಾ
ಕೂಡಲ ಚನ್ನ ಸಂಗಮದೇವ ಸಾಕ್ಷಿಯಾಗಿ. (ಚ. ಬ. ವ. 126)

ಚನ್ನ ಬಸವಣ್ಣನವರ ವಚನದ ಪ್ರಕಾರ ಸದಾಚಾರಿಯಾದ ಶರಣನು ಗುರು-ಲಿಂಗ-ಜಂಗಮ ಪೂಜೆಗಳನ್ನು ಮಾಡಬೇಕು. ಗುರುಪೂಜೆ ಎಂಬಲ್ಲಿ 'ಬಸವ ಗುರು ಪೂಜೆ' ಎಂದು ಭಾವಿಸಿ, ದೀಕ್ಷಾಗುರು, ಶಿಕ್ಷಾ ಗುರುಗಳನ್ನು 'ಜಂಗಮ' ವರ್ಗದಲ್ಲಿ ಸೇರಿಸಬೇಕು. ಆಗ ಗುರು-ಲಿಂಗ-ಜಂಗಮ ಎಂಬ ತ್ರಿತತ್ತ್ವಗಳು ಸಂಪೂರ್ಣವಾಗಿ ಕ್ರೈಸ್ತ ಮತ್ತು ಬೌದ್ಧ ಧರ್ಮದ ತ್ರಿತತ್ತ್ವ (Trinity) ಗಳನ್ನು ಹೋಲುತ್ತವೆ.

ಕ್ರೈಸ್ತ ಧರ್ಮ :	ದೇವರ ಮಗ (ಏಸುಕ್ರಿಸ್ತ) – ದೇವರು–ಪವಿತ್ರಾತ್ಮರು
ಬೌದ್ಧ ಧರ್ಮ :	ಬುದ್ಧ – ಧರ್ಮ – ಸಂಘ
ಲಿಂಗಾಯತ ಧರ್ಮ :	ಬಸವಣ್ಣ – ಇಷ್ಟಲಿಂಗ – ಜಂಗಮ.

ಲಿಂಗಾಯತ ಧರ್ಮದಲ್ಲಿ ಗಣಲಾಂಛನವಾದ, ದೇವರ ಕುರುಹಾದ ಇಷ್ಟಲಿಂಗವು ಅತ್ಯಂತ ಮಹತ್ವದ ಉಪಾಸ್ಯವಸ್ತು. ಆದ್ದರಿಂದ ನಿತ್ಯ ಪೂಜೆ ಮಾಡುವಾಗ ಮೊದಲು ಪ್ರಥಮ ಗಣಾಧೀಶ ಬಸವ ಗುರುವಿನ ಪೂಜೆ ಮಾಡಿ ಇಷ್ಟಲಿಂಗಾರ್ಚನೆ ಮಾಡುವುದು ಸೂಕ್ತವೋ ? ಅಥವಾ ಇಷ್ಟಲಿಂಗಾರ್ಚನೆ ಪೂರೈಸಿ ಬಸವ ಗುರುವಿನ ಪೂಜೆ ಮಾಡುವುದು ಸೂಕ್ತವೋ ?

2. **ತ್ರಿಕಾಲ ಅರ್ಚನೆ :**

ಲಿಂಗಮೂರ್ತಿಯನು ನಿತ್ಯವೂ
ಮೂರು ಬಾರಿ ತಪ್ಪದೆ ಅರ್ಚಿಸುವುದು ಉತ್ತಮ
ಎರಡು ವೇಳೆ ಅರ್ಚಿಸುವುದು ಮಧ್ಯಮ
ಒಂದು ಸಲ ಪೂಜಿಸುವುದು ಕನಿಷ್ಟ
ಈ ತ್ರಿವಿಧವನರಿಯದೆ ಭಕ್ತರಾದೆವೆಂದು ಯುಕ್ತಿಗೆಟ್ಟು ನುಡಿದಡೆ
ಮುಕ್ತಿಯನೀವನೆ ನಮ್ಮ ಕೂಡಲ ಚನ್ನ ಸಂಗಮದೇವ? —ಚ ಬ.ವ. 205

ಇಷ್ಟಲಿಂಗವನ್ನು ಮೂರು ಬಾರಿ ಅರ್ಚಿಸುವುದು ಉತ್ತಮ, ಎರಡು ಬಾರಿ ಅರ್ಚಿಸುವುದು ಮಧ್ಯಮ, ಒಂದು ಬಾರಿ ಅರ್ಚಿಸುವುದು ಕನಿಷ್ಟ ಎಂದು ಚನ್ನಬಸವಣ್ಣನವರು ಅಭಿಪ್ರಾಯಪಡುತ್ತಾರೆ. ಇಸ್ಲಾಂ ಧರ್ಮದಲ್ಲಿ ದಿನಕ್ಕೆ 5 ಬಾರಿ ನಮಾಜ್ ಮಾಡುವ ನೇಮವಿದ್ದಂತೆ ಈ ತ್ರಿಕಾಲ ಲಿಂಗಾರ್ಚನೆ. ಇಂದಿನ ಕಾಲಮಾನಕ್ಕೆ ಇದು ಸಾಧ್ಯವೆ ? ಈ ನೇಮವನ್ನು ಕೆಲವರಿಗೇ ಮೀಸಲಿಡುವುದು ಸೂಕ್ತವೆ ? ಶ್ರದ್ಧಾವಂತನಿಗೆ 3, 2, 1, ಇಷ್ಟು ಸಲದಲ್ಲಿ ಎಷ್ಟು ಸಲ ಮಾಡಬೇಕೆಂಬ ನಿಯಮ ಇರುವುದು ಸೂಕ್ತವಾದೀತು ?

ಈ ವಿಚಾರ ಕುರಿತು ನಿಮ್ಮ ಅಭಿಪ್ರಾಯಗಳನ್ನು ತಿಳಿಸಿರಿ. ಬರಹವು ಹಾಳೆಯ ಒಂದೇ ಮಗ್ಗುಲಿನಲ್ಲಿರಬೇಕು; ಸ್ಪಷ್ಟವಾಗಿರಬೇಕು. ★

